ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ವಿಶೇಷ ಸಂಚಿಕೆ




ಸೌಹಾರ್ದ ಸಹಕಾರಿ ಕಾಯ್ದೆಯ
ರಜತ ಮಹೋತ್ಸವ ೨೦೨೫

2025 ಅಂತರರಾಷ್ಟ್ರೀಯ ಸಹಕಾರ ವರ್ಷ
ಧ್ಯೇಯ : "ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಸಾಧ್ಯ"

**ಸಪ್ತಾಹದ ಧ್ಯೇಯ :**
"ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು"

**ದಿನದ ವಿಷಯ :**
"ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ"

**ದಿನಾಂಕ :**
15.11.2025 ಶನಿವಾರ

**ಸಮಯ :** ಬೆಳಿಗ್ಗೆ 10.00 ಗಂಟೆಗೆ

**ಸ್ಥಳ :**
ರಾಯಚೂರು ಕೃಷಿ ವಿಶ್ವವಿದ್ಯಾಲಯ
ಅಡಿಟೋರಿಯಂ, ರಾಯಚೂರು.

ಸೌಹಾರ್ದ ಸಹಕಾರಿಗಳ ಸಂಖ್ಯೆ : 6594

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1740

# ಗಣ್ಯರ ಭೇಟಿ



ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಹಕಾರ ಸಚಿವರಿಗೆ ಸನ್ಮಾನ



ಕೇಂದ್ರ ಸಹಕಾರ ಸಚಿವರ ಜೊತೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಗಣ್ಯರುಗಳು



ಮಾಜಿ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣನವರೊಂದಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು



ಮಾನ್ಯ ಸಚಿವರಾದ ಶ್ರೀ ಹೆಚ್. ಕೆ ಪಾಟೀಲ ಇವರಿಗೆ ಸನ್ಮಾನ



ಸೌಹಾರ್ದ ಸಹಕಾರಿ ದಿನ ಧ್ವಜಾರೋಹಣ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆ



ಬೆಳಗಾವಿಯಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಬಿ ಶೆಟ್ಟೆಣ್ಣವರ್ ಐ.ಎ.ಎಸ್ ಇವರಿಗೆ ಸನ್ಮಾನ



ಸಹಕಾರಿ ಇಲಾಖೆಯ ಮಾನ್ಯ ಸಹಕಾರಿಗಳ ನಿಬಂಧಕರಾದ ಶ್ರೀ ಟಿ. ಹೆಚ್. ಎಂ. ಕುಮಾರ್, ಐ.ಎ.ಎಸ್ ಇವರಿಗೆ ಸನ್ಮಾನ

## ಅಧ್ಯಕ್ಷರ ನುಡಿ



ಜಿ. ನಂಜನಗೌಡ

ಸಹಕಾರ ಕ್ಷೇತ್ರದ ಅಭಿವೃದ್ಧಿ ಹಾಗೂ ಉತ್ತಮ ಗುಣಮಟ್ಟದ ನಿರ್ವಹಣೆ ಸಾಧಿಸಲು ಪೂರಕವಾಗಿ ಪ್ರತಿ ವರ್ಷ ರಾಷ್ಟ್ರದಾದ್ಯಂತ ನವೆಂಬರ್ 14 ರಿಂದ 20ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸುತ್ತ ಬರಲಾಗುತ್ತಿದೆ. ಪ್ರಸ್ತುತ 72ನೇ ಸಹಕಾರ ಸಪ್ತಾಹವಾಗಿದೆ. ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಮಾರ್ಗದರ್ಶನದಂತೆ ಪ್ರತಿವರ್ಷ ಸಹಕಾರ ಸಪ್ತಾಹವನ್ನು ಆಚರಿಸುವ ಪೂರ್ವದಲ್ಲಿ ಒಂದು ಧ್ಯೇಯವನ್ನು ರೂಪಿಸಲಾಗುತ್ತದೆ

# ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳು

ಸಹಕಾರ ಕ್ಷೇತ್ರದ ಅಭಿವೃದ್ಧಿ ಹಾಗೂ ಉತ್ತಮ ಗುಣಮಟ್ಟದ ನಿರ್ವಹಣೆ ಸಾಧಿಸಲು ಪೂರಕವಾಗಿ ಪ್ರತಿ ವರ್ಷ ರಾಷ್ಟ್ರದಾದ್ಯಂತ ನವೆಂಬರ್ 14 ರಿಂದ 20ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸುತ್ತ ಬರಲಾಗುತ್ತಿದೆ. ಪ್ರಸ್ತುತ 72ನೇ ಸಹಕಾರ ಸಪ್ತಾಹವಾಗಿದೆ. ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಮಾರ್ಗದರ್ಶನದಂತೆ ಪ್ರತಿವರ್ಷ ಸಹಕಾರ ಸಪ್ತಾಹವನ್ನು ಆಚರಿಸುವ ಪೂರ್ವದಲ್ಲಿ ಒಂದು ಧ್ಯೇಯವನ್ನು ರೂಪಿಸಲಾಗುತ್ತದೆ. ಈ ವರ್ಷದ ಧ್ಯೇಯ "ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" ಎಂಬುದಾಗಿದೆ. ದೇಶ ಆತ್ಮನಿರ್ಭರವಾಗಬೇಕಾದರೆ ದೇಶದ ಪ್ರತಿಯೊಂದು ವಿಷಯದಲ್ಲಿ ಅಂದರೆ, ಕೃಷಿ, ಹೈನುಗಾರಿಕೆ, ಆರೋಗ್ಯ, ಶಿಕ್ಷಣ, ಕೈಗಾರಿಕೆ, ಆಧುನಿಕ ತಂತ್ರಜ್ಞಾನ, ವಸತಿ, ಮಹಿಳಾ ಸಬಲೀಕರಣ, ಬಡತನ ನಿವಾರಣೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸ್ಥಳೀಯ ನಾಯಕತ್ವದ ಬೆಳವಣಿಗೆ, ಸಮಾಜದ ಎಲ್ಲಾ ವರ್ಗದ ಜನರಲ್ಲಿ ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ಪ್ರಗತಿ ಸಾಧಿಸುವ ಕ್ರಮಗಳು ಮುಂತಾದ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸುವುದು.

ಸಹಕಾರ ಕ್ಷೇತ್ರ ದೇಶದ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಕೊಡುಗೆಯನ್ನು ಕೊಡುತ್ತ ಬಂದಿದೆ. ಕೇಂದ್ರದಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಘೋಷವಾಕ್ಯದೊಂದಿಗೆ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾದ ಮೇಲೆ ಸಹಕಾರ ಕ್ಷೇತ್ರ ದೇಶದ ಅರ್ಥವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ಗುರುತಿಸಲಾಗುತ್ತಿದೆ. ರಾಷ್ಟ್ರೀಯ ಸಹಕಾರ ನೀತಿ, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಪ್ರಾರಂಭಿಸಿರುವುದು, ಪ್ರತಿ ಗ್ರಾಮಕ್ಕೊಂದು ಸಹಕಾರ ಸಂಘವಿರಬೇಕು ಎಂಬ ಉದ್ದೇಶವನ್ನು ಹೊಂದಿ ಹೆಚ್ಚುವರಿ ಕೃಷಿ ಪತ್ತಿನ ಹಾಗೂ ಇತರೆ ಸಂಘಗಳನ್ನು ಪ್ರಾರಂಭಿಸಲಾಗುತ್ತಿದೆ. ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗ್ರಾಮಮಟ್ಟದಲ್ಲಿ ಕಾಮನ್ ಸರ್ವಿಸ್ ಸೆಂಟರ್‌ಗಳಾಗಿ ಮಾಡಲು ಕ್ರಮವಿಡಲಾಗುತ್ತಿದೆ. ಎಲ್ಲಾ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣ ಗೊಳಿಸಲು ಕ್ರಮವಿಡಲಾಗಿದೆ. ಏಕ ಮಾದರಿಯ ಲೆಕ್ಕಪತ್ರ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆಯುತ್ತಿದೆ. ರಾಷ್ಟ್ರ ಮಟ್ಟದ 3 ಸಹಕಾರ ಸಂಘಗಳನ್ನು ಸ್ಥಾಪಿಸಿ ದೇಶದಾದ್ಯಂತ ಉತ್ತಮ ಗುಣಮಟ್ಟದ ಬೀಜ ಸರಬರಾಜು ವ್ಯವಸ್ಥೆ, ಆಯಾತ ನಿರ್ಯಾತಗಳ ಸಹಕಾರ ಸಂಘಗಳ ಸ್ಥಾಪನೆ ಹಾಗೂ ಸಾವಯವ ಕೃಷಿ ಸಹಕಾರ ಸಂಘಗಳ ಮೂಲಕ ಹೆಚ್ಚಿನ ಪ್ರಗತಿಸಾಧಿಸಲು ಕ್ರಮವಿಡಲಾಗಿದೆ. ಹೀಗಾಗಿ ಸಹಕಾರ ಸಪ್ತಾಹದ ಆಚರಣೆ ಹೆಚ್ಚಿನ ಮಹತ್ವ ಪಡೆಯುತ್ತದೆ.

7 ದಿನಗಳ ಸಹಕಾರ ಸಪ್ತಾಹದ ಆಚರಣೆ ಸಹಕಾರ ಕ್ಷೇತ್ರದ ಎಲ್ಲಾ ವಿಭಾಗಗಳನ್ನು ಒಳಗೊಂಡಿದೆ. ಎಲ್ಲಾ ಸಹಕಾರ ಸಂಸ್ಥೆಗಳು ಆಯಾ ಸಹಕಾರ ಮಹಾಮಂಡಳಗಳ ನೇತೃತ್ವದಲ್ಲಿ ಸ್ಥಳೀಯ ಸಹಕಾರ ಸಂಸ್ಥೆಗಳ ಸಂಪೂರ್ಣ ಸಹಯೋಗದೊಂದಿಗೆ ಸಹಕಾರ ಸಪ್ತಾಹದ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ರಾಷ್ಟ್ರೀಯ ಸಹಕಾರ ಯೂನಿಯನ್ನವರು ಕಳುಹಿಸಿದ ಮಾರ್ಗದರ್ಶಿಗಳನ್ನು (ಗೈಡ್ ಲೈನ್ಸ್‌ಗಳನ್ನು) ಕನ್ನಡಕ್ಕೆ ಅನುವಾದಿಸಲಾಗಿದೆ. ಎಲ್ಲ ಸಹಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಹಕಾರ ಸಪ್ತಾಹವನ್ನು ಉತ್ತಮ ರೀತಿಯಲ್ಲಿ ಆಚರಿಸಲು ಕ್ರಮವಿಡುವುದು. ಹೆಚ್ಚಿನ ಜನರಿಗೆ ಸಹಕಾರಿಗಳಿಗೆ ಈ ಕ್ಷೇತ್ರದ ಸಾಧನೆಗಳನ್ನು ಪರಿಚಯಿಸುವುದು ಅವರಲ್ಲಿ ಈ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು. ಸಹಕಾರ ಸಪ್ತಾಹದ ಆಚರಣೆಗೆ ಹಾಗೂ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿ ಹೊಂದುವುದಕ್ಕಾಗಿ ಈ ಮಾರ್ಗದರ್ಶಿ ಕೈಪಿಡಿ ತಮಗೆ ಪ್ರಯೋಜನವಾಗಲಿ ಎಂದು ಆಶಿಸುತ್ತೇನೆ.

## ವ್ಯವಸ್ಥಾಪಕ ನಿರ್ದೇಶಕರ ನುಡಿ



ಶರಣಗೌಡ ಜಿ. ಪಾಟೀಲ

ಸಹಕಾರ ಚಳುವಳಿಯ ಮುಖ್ಯ ಉದ್ದೇಶ ಸಾಮಾನ್ಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ. ಮಹಾತ್ಮಾ ಗಾಂಧೀಜಿಯವರು ಹೇಳಿದ ಹಾಗೆ ಸಹಕಾರ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿಯ ಸಾಧನವೇ ಹೊರತು ಶ್ರೀಮಂತರ ಆಯುಧವಲ್ಲ ಭಾರತದಲ್ಲಿ ಸಹಕಾರ ಚಳುವಳ ಪ್ರಾರಂಭವಾಗಿ 121 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಸಾಧಿಸಿದ ಪ್ರಗತಿ ಗಣನೀಯ

# ಸಂಪಾದಕೀಯ

## ಆಚರಣೆಯಿಂದ ಸಹಕಾರಿಗಳಲ್ಲಿ ನವ ಉತ್ಸಾಹ

ಸಹಕಾರ ಚಳುವಳಿಯ ಮುಖ್ಯ ಉದ್ದೇಶ ಸಾಮಾನ್ಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ. ಮಹಾತ್ಮಾ ಗಾಂಧೀಜಿಯವರು ಹೇಳಿದ ಹಾಗೆ ಸಹಕಾರ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿಯ ಸಾಧನವೇ ಹೊರತು ಶ್ರೀಮಂತರ ಆಯುಧವಲ್ಲ ಭಾರತದಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿ 121 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಸಾಧಿಸಿದ ಪ್ರಗತಿ ಗಣನೀಯ. 8.5.ಲಕ್ಷ ಸಹಕಾರ ಸಂಸ್ಥೆಗಳು, 31 ಕೋಟಿ ಸದಸ್ಯ ಬಳಗ ಹೊಂದಿದೆ. ವಿಶ್ವದಲ್ಲಿಯೆ ಅತ್ಯಂತ ದೊಡ್ಡದಾದ ಚಳುವಳಿ ನಮ್ಮ ದೇಶದ ಸಹಕಾರ ಚಳುವಳಿ. ಸರಕಾರಗಳ ಪ್ರೋತ್ಸಾಹ, ಸಹಕಾರಿಗಳ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಸೇವೆ, ದಕ್ಷ ಅಧಿಕಾರಿಗಳ ಹಾಗೂ ನಿಷ್ಠಾವಂತ ಸಿಬ್ಬಂದಿಯವರುಗಳ ಸೇವೆಯಿಂದಾಗಿ ಭಾರತದ ಸಹಕಾರಿ ಕ್ಷೇತ್ರ ವಿಶ್ವದ ನಕಾಶೆಯಲ್ಲಿ ಮಿನುಗುತಾರೆಯಾಗದೆ. ಅನೇಕ ಏರು ಪೇರುಗಳನ್ನು ಕಂಡಿದೆ. ಸವಾಲುಗಳನ್ನು ಎದುರಿಸಿದೆ ಆದರೂ ಸಹಕಾರ ಕ್ಷೇತ್ರ ತನ್ನ ಬೆಳವಣಿಗೆಯ ಓಟ ನಿಲ್ಲಿಸುತ್ತಿಲ್ಲ. ಸಹಕಾರ ಕ್ಷೇತ್ರದಿಂದಲೇ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಆರ್ಥಿಕ ಹಾಗೂ ಸಾಮಾಜಿಕ ನ್ಯಾಯ ಸಿಗುತ್ತದೆ ಎಂಬ ಮಾತನ್ನು ಸತ್ಯವಾಗಿಸುವ ನಿಟ್ಟಿನಲ್ಲಿ ಈ ಕ್ಷೇತ್ರ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ."ಸಹಕಾರ ಚಳುವಳಿ ಆರ್ಥಿಕ ಹಾಗೂ ಸಾಮಾಜಿಕ ಅಬಿವೃದ್ಧಿಯ ಕೇಂದ್ರವಾಗಿ ಗುರುತಿಸಿಕೊಂಡಿದೆ. ಹೆಚ್ಚಿನ ಮಹತ್ವ ಪಡೆದಿದೆ.

ಈ ಸಪ್ತಾಹದ ಆಚರಣೆ ಸಂದರ್ಭದಲ್ಲಿ ಸಹಕಾರಿಗಳಲ್ಲಿ ನವಚೈತನ್ಯ ಹಾಗೂ ಉತ್ಸಾಹ ತುಂಬುವ ಕೆಲಸವಾಗಬೇಕು. ಸಮಗ್ರ ಸಹಕಾರ ಕ್ಷೇತ್ರದ ಸಹಕಾರ ಕ್ಷೇತ್ರ ಪರಿಚಯ ಸಹಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾಡಿಸಬೇಕು. ಸಹಕಾರ ಕ್ಷೇತ್ರದ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಹೊಂದಿದೆ ಎಂಬ ಸಂದೇಶವನ್ನು ಸಹಕಾರಿಗಳಿಗೆ ನೀಡುವುದು. ಸಹಕಾರ ಸಪ್ತಾಹದ ಆಚರಣೆ ಒಂದು ದಿನದ ಕಾರ್ಯಕ್ರಮವಲ್ಲ. ದೇಶದ ಎಲ್ಲ ರೀತಿಯ ಸಹಕಾರ ಸಂಸ್ಥೆಗಳ ಕಾರ್ಯನಿರ್ವಹಣೆಯ ಸ್ವರೂಪವನ್ನು ಸದಸ್ಯರ ಗಮನಕ್ಕೆ ತರುವುದು ಅವರನ್ನು ಈ ಎಲ್ಲ ಕಾರ್ಯಗಳಲ್ಲಿ ತೊಡಗಿಸಿಕೊಳಳುವುದು. ಸಂಘದ ಅಧ್ಯಕ್ಷರಾದವರು ಮತ್ತು ಆಡಳಿತ ಮಂಡಳಿಯಲ್ಲಿರುವವರು ಸಂಘದ ಸದಸ್ಯರ ಹಿತವನ್ನು ಗಮನದಲ್ಲಿರಿಸಿಕೊಂಡು ಕಾರ್ಯನಿರ್ವಹಿಸುವುದು ಅಗತ್ಯ. ಹೀಗಾಗಿ ಸದಸ್ಯರ ಜೊತೆಗೆ ನಿರಂತರ ಸಂಪರ್ಕ ಹೊಂದಿರವುದು ಅಗತ್ಯ.

ಸಹಕಾರ ಸಪ್ತಾಹದ ಆಚರಣೆಯ ಸಮಯದಲ್ಲಿ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಪಟ್ಟಿಮಾಡಿ ಸದಸ್ಯರಿಗೆ ಸಾರ್ವಜನಿಕರಿಗೆ ಪರಿಚಯಿಸಲಾಗುತ್ತದೆ. ಸಹಕಾರಿಯ ಹಿರಿಯ ಸದಸ್ಯರನ್ನು ವಿಶೇಷ ಸಾಧಕರನ್ನು ಗುರುತಿಸಿ ಗೌರವಿಸಲಾಗುತ್ತದೆ, ಸಹಕಾರಿ ಕ್ಷೇತ್ರದ ಬಗ್ಗೆ ಕಿರಿಯರಿಗೆ ಯುವಕರಿಗೆ ಅರಿವು ಮೂಡಿಸುವ ಕುರಿತಂತೆ ಪ್ರಬಂಧ ಸ್ಪರ್ಧೆಗಳನ್ನು, ಚರ್ಚಾಸ್ಪರ್ಧೆಗಳನ್ನು ಸಂವಾದ ಕಾರ್ಯಕ್ರಮಗಳನ್ನು, ಸಹಕಾರಿ ಜಾತಾಗಳನ್ನು, ಪರಿಣಿತರಿಂದ ಸಹಕಾರಿ ವಿಷಯಗಳ ಕುರಿತು ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಹಕಾರಿ ವಸ್ತುಪ್ರದರ್ಶನ ಮಳಿಗೆಗಳನ್ನು ಹಾಕಲಾಗುತ್ತದೆ. ಇದರಿಂದಾಗಿ ಸಹಕಾ–ರಿಗಳಲ್ಲಿ ಹೊಸ ಹುರುಪು ಮೂಡುತ್ತದೆ. ಸಹಕಾರ ಕ್ಷೇತ್ರದಲ್ಲಿ ಯುವಕರನ್ನು ಮಹಿಳೆಯರನ್ನು, ಹಿಂದುಳಿದ ವರ್ಗದವರನ್ನು ಬರಮಾಡಿಕೊಂಡು ಅವರುಗಳಿಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿ ಈ ಕ್ಷೇತ್ರದಿಂದ ಅವರಿಗೆ ಹೆಚ್ಚಿನ ಅವಕಾಶ ಪಡೆಯುವಂತೆ ಅವರಲ್ಲಿ ಜಾಗೃತಿಯನ್ನು ಮೂಡಿಸುವ ಹಾಗೂ ಯುವಕರಲ್ಲಿ ಸಹಕಾರಿ ನಾಯಕತ್ವವನ್ನು ರೂಪಿಸುವ ಕೆಲಸ ಈ ಸಂದರ್ಭದಲ್ಲಿ ಆಗುತ್ತದೆ.

ಹೀಗಾಗಿ ಸಹಕಾರ ಸಪ್ತಾಹದ ಆಚರಣೆ ಸಹಕಾರಿಗಳ ಜಾತ್ರೆಯಲ್ಲ ಅರಿವು ಮೂಡಿಸುವ ಕಮ್ಮಟ. ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಸಾರುವ ವೇದಿಕೆ. ದೇಶದ ಅಭಿವೃದ್ಧಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲು ನಾವು ಶಕ್ತರು, ನಾವು ಉತ್ತಮ ಆರ್ಥಿಕ ಸಂಘಟನೆಗಳು ಸದಸ್ಯರಿಗೆ ತೊಟ್ಟಿಲಿನಿಂದ ಚಟ್ಟದ ವರೆಗೆ ಸೇವೆ ಕೊಡಲು ಸಮರ್ಥರು ಎಂದು ಸಾರುವ ವೇದಿಕೆ. ಬನ್ನಿ ಸಪ್ತಾಹದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಿ. ಸಪ್ತಾಹದ ಯಶಸ್ವಿಗೆ ಕೈಜೋಡಿಸಿ.

## 72ನೇ ಅಖಿಲ ಭಾರತ ಸಹಕಾರ ಸಪ್ತಾಹ ರಾಜ್ಯ ಮಟ್ಟದ ಆಚರಣೆ ವಿವರ

| ದಿನಾಂಕ | ಸಹಕಾರ ಸಪ್ತಾಹದ ದಿನ | ಆಚರಿಸುವ ಸಂಸ್ಥೆಗಳು | ಸ್ಥಳ | ಸಹಕಾರ ಇಲಾಖೆಯ ಸಮನ್ವಯಾಧಿಕಾರಿಗಳು | ಸಹಕಾರ ಮಹಾಮಂಡಳದ ಸಮನ್ವಯಾಧಿಕಾರಿಗಳು |
|---|---|---|---|---|---|
| 14.11.2025 ಶುಕ್ರವಾರ | ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು. Promoting Digitalisation to enhance operation efficiency, Accountability and Transparency. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ವಸತಿ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಬೆಂಗಳೂರು | ಶ್ರೀ ಜಿ. ಉಮೇಶ್ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ | ಶ್ರೀ ಅಶ್ವತ್ಥ ನಾರಾಯಣ, ಕಾರ್ಯದರ್ಶಿ ಇವರ ಮೇಲ್ವಿಚಾರಣೆಯಲ್ಲಿ ಶ್ರೀ ಜೆ.ಜಿ. ಸೀನಪ್ಪ, ಅಧಿಕ್ಷಕರು |
| 15.11.2025 ಶನಿವಾರ | ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ Tribhuvan Sahakar University Research, and Training Transforming Cooperative Education | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಮತ್ತು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ರಾಯಚೂರು | ಡಾ॥ ಸುರೇಶ ಗೌಡ ಸಹಕಾರ ಸಂಘಗಳ ಅಪರ ನಿಬಂಧಕರು (ಕಾನೂನು ವಿಭಾಗ) | ಶ್ರೀ ಅರುಣ್ ಕುಮಾರ್ ಹರಸೂರು, ಪ್ರಾಂಶುಪಾಲರು ಕೆ.ಐ.ಸಿ.ಎಂ ಕಲಬುರಗಿ |
| 16.11.2025 ಭಾನುವಾರ | ಸಹಕಾರಿ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ. Strengthening Rural Development Through Cooperatives. | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ದಕ್ಷಿಣ ಕನ್ನಡ | ಶ್ರೀ ಪ್ರಸಾದ್ ರೆಡ್ಡಿ ಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ | ಶ್ರೀ ಲಕ್ಷ್ಮೀಕಾಂತ ಕಟ್ಟೀಮನಿ, ಎಸ್ಟೇಟ್ ಅಧಿಕಾರಿ |
| 17.11.2025 ಸೋಮವಾರ | ರಾಷ್ಟ್ರೀಯ ಸಹಕಾರಿ ನೀತಿಯ ಪರಿಸರ ವ್ಯವಸ್ಥೆ, ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ. National Cooperative Policy Ecosystem, Structured Roadmap for india's Cooperative. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಹೊಸಪೇಟೆ | ಶ್ರೀ ವಿಶ್ವನಾಥ ಮಲ್ಕೋಡ್ ಸಹಕಾರ ಸಂಘಗಳ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ | ಶ್ರೀ ಶರಣಬಸಪ್ಪ ಕಾಟ್ರಳ್ಳಿ, ಪ್ರಭಾರ ಸಹಕಾರ ಶಿಕ್ಷಣಾಧಿಕಾರಿ |

| | | | | | |
|---|---|---|---|---|---|
| 18.11.2025 ಮಂಗಳವಾರ | ಸಹಕಾರಿ ಉದ್ಯಮ ಶೀಲತೆಯಿಂದ ಯುವಕರು, ಮಹಿಳೆಯರು ಮತ್ತು ಅಬಲ ವರ್ಗದ ಸಬಲೀಕರಣ (ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ) Empowering youth, women and weaker sectors (Handicrafts, handloom, labour, fisherier etc.) throuth Cooperative Entrepreneurship. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳ ನಿ., ಮತ್ತು ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳ ನಿ., ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಹಾವೇರಿ | ಶ್ರೀ ಕಲ್ಲಪ್ಪ ಓಬಣ್ಣಗೋಳ್ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ | ಶ್ರೀ ಡಿ.ಆರ್ ವೆಂಕಟರಾಮು ಪ್ರಾಂಶುಪಾಲರು ಕೆ.ಐ.ಸಿ.ಎಂ ಧಾರವಾಡ |
| 19.11.2025 ಬುಧವಾರ | ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ. Expanding cooperative in emerging areas such as Tourism, Health, Green Energy, Platform coops, Kitchen coops and any other conceivable area. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಮತ್ತು ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಕೊಪ್ಪಳ | ಶ್ರೀ ಲಕ್ಷ್ಮೀಪತಯ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ & ಇತರೆ) | ಶ್ರೀ ಮಲ್ಲಯಶೆಟ್ಟಿ ಸಹಾಯಕ ಅಭಿಯಂತಕರು |
| 20.11.2025 ಗುರುವಾರ | ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು. Innvotive Cooperative Business models for global competitiveness. | ಕರ್ನಾಟಕ ರಾಜ್ಯ ಸಹಕಾರ ಲ್ಯಾಂಪ್ಸ್ ಮಹಾಮಂಡಳ ನಿ., ಮೈಸೂರು ಕೆ.ಎಂ.ಫ್ ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳನಿ., ಬೆಂಗಳೂರು ಮತ್ತು ಕರ್ನಾಟಕರ ರಾಜ್ಯ ಸಹಕಾರ ಮೀನುಗಾರರ ಮಹಾಮಂಡಳ ನಿ., ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಚಾಮರಾಜ ನಗರ | ಶ್ರೀ ಬಾಲಶೇಖರ್ ಹೆಚ್ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಮತ್ತು ಸಿ. ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ | ಶ್ರೀ ಮಲ್ಲರಾಜು ಪ್ರಭಾರ ಸಂಪಾದಕರು |

# ಸೌಹಾರ್ದ ಸಹಕಾರಿ ಕ್ಷೇತ್ರದ ಪರಿಚಯ

ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗದ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಾಂತರ ರೂಪಾಯಿ ಹಣವನ್ನು ಶೇರು, ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಲಾಗಿತ್ತು. ಗ್ರಾಮಕ್ಕೊಂದು ಪಂಚಾಯಿತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಾಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಸುರಿಯಲಾಗಿತ್ತು. ಆದರೂ ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಅನೇಕ ವೇದಿಕೆಗಳ ಮೂಲಕ ಚರ್ಚೆ ಆರಂಭವಾಯಿತು. ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆ ಎಂಬ ಸಹಕಾರಿಗಳ ಕೂಗು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ತನ್ನ ವರದಿಯಲ್ಲಿ "ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು" ಹೇಳಿತು. ಸಹಕಾರ ಚಳುವಳಿ ವಿಫಲವಾದರೂ ಜನಸಾಮಾನ್ಯರು ತಮ್ಮ ಆರ್ಥಿಕ ಏಳ್ಗೆಗಾಗಿ ತಾವೇ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ 1991 ರಲ್ಲಿ ವಿವಿಧ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಯೋಜನಾ ಆಯೋಗದಿಂದ ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ ಫಲವಾಗಿ ಯೋಜನಾ ಆಯೋಗದವರು ಕಳುಹಿಸಿದ ಮಾದರಿ ಸಹಕಾರಿ ಕಾಯ್ದೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲಾಯಿತು.

ಈ ಕಾಯ್ದೆಯೇ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997" ರಾಜ್ಯದಲ್ಲಿ 1-1-2001 ರಿಂದ ಜಾರಿಗೆ ಬಂದಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ಕಾಯ್ದೆಯಡಿಯಲ್ಲಿ 2002ರಿಂದ ಕಾರ್ಯನಿರ್ವಹಿಸುತ್ತಿದೆ.

**ಸೌಹಾರ್ದ ಸಹಕಾರಿಗಳ ವಿಶೇಷತೆಗಳು**

- ಸರಕಾರದ ಆರ್ಥಿಕ ನೆರವು ಪಡೆಯದೆ ತಮ್ಮ ಸದಸ್ಯರ ಹಣದಿಂದಲೇ ಸಹಕಾರಿಗಳು ಕಾರ್ಯ ನಿರ್ವಹಿಸುತ್ತವೆ.
- ಸಹಕಾರಿಯ ಸಂಪೂರ್ಣ ಒಡೆತನ, ನಿರ್ವಹಣೆ ಹಾಗೂ ನಿಯಂತ್ರಣ ಸದಸ್ಯರಿಗೆ, ಸಹಕಾರಿಗಳಿಗೆ ಹೆಚ್ಚು ಜವಾಬ್ದಾರಿ ಹಾಗು ಹೆಚ್ಚಿನ ವ್ಯವಹಾರಿಕ ಸ್ವಾತಂತ್ರ್ಯ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ, ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಸಿ ಮಾರ್ಗದರ್ಶನ ವ್ಯವಸ್ಥೆ.
- ಸಹಕಾರಿಯ ಸಿಬ್ಬಂದಿಯ ನೇಮಕಾತಿ, ವೇತನಶ್ರೇಣಿ ನಿರ್ಧರಿಸುವುದು, ಬಡ್ತಿ ಇತ್ಯಾದಿಗಳಿಗೆ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿಯನ್ನು ಸಹಕಾರಿಗಳಿಂದಲೇ ಶಾಸನಬದ್ಧವಾಗಿ ರಚಿತವಾಗಿರುವ ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ.
- ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ವೃತ್ತಿನಿರತ ಚಾರ್ಟರ್ಡ ಅಕೌಂಟೆಂಟರು ಮಾಡುತ್ತಾರೆ. ಮತ್ತು ಅವರು ಸಂಘದ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ಮತ್ತು ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವುದು ಕಡ್ಡಾಯ.
- ಸೌಹಾರ್ದ ಸಹಕಾರಿಗಳ ಸದಸ್ಯರು ಕನಿಷ್ಠ ವ್ಯವಹಾರ ಮಾಡುವುದು ಕಡ್ಡಾಯ. ಮತ್ತು ಸಾಮಾನ್ಯ ಸಭೆಗಳಿಗೆ ಹಾಜರಾಗುವುದು ಅವಶ್ಯಕ.
- ಸಹಕಾರಿಯ ನೊಂದಣೆ, ಉಪವಿಧಿಗಳ ತಿದ್ದುಪಡಿ, ವಿವಾದಗಳ ಇತ್ಯರ್ಥ, ಸಹಕಾರಿಯ ಕೋರಿಕೆಯ ಮೇರೆಗೆ ವಿಚಾರಣೆ ಮತ್ತು ಸಹಕಾರಿಯ ಸಮಾಪನೆ ಮಾತ್ರ ಸಹಕಾರಿ ನಿಬಂಧಕರ ಜವಾಬ್ದಾರಿ.
- ದೇಶದಲ್ಲಿಯೇ ನೂತನ ಮತ್ತು ವಿಶಿಷ್ಟವಾದ ಸಂಸ್ಥೆಯನ್ನು ಕಾಯ್ದೆಯಲ್ಲಿಯೇ ರಚನೆಗೊಂಡ ಸೌಹಾರ್ದ ಸಹಕಾರಿ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯ ಮೂಲಕ ಸೌಹಾರ್ದ ಸಹಕಾರಿಗಳ ಮೇಲುಸ್ತುವಾರಿ, ನಿಯಂತ್ರಣ, ತರಬೇತಿ ಮತ್ತು ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.
- ಕೋವಿಡ್-19ರ ಸಂದರ್ಭದ ಕಾಲದಲ್ಲಿಯೂ ಸಹ ಸಹಕಾರಿಗಳಿಗೆ ತಂತ್ರಜ್ಞಾನ ಬಳಸಿಕೊಂಡು ಆನ್‌ಲೈನ್ ತರಬೇತಿ/ ತಾಂತ್ರಿಕ ಶಿಕ್ಷಣವನ್ನು ಒದಗಿಸುವ ಕಾರ್ಯ ಸಂಯುಕ್ತ ಸಹಕಾರಿ ವತಿಯಿಂದ ನಡೆದಿರುತ್ತದೆ.
- ಸಹಕಾರಿಗಳ ಸಿಬ್ಬಂದಿಗಳಿಗಾಗಿ 6 ತಿಂಗಳ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಕಳೆದ 4 ವರ್ಷಗಳಿಂದ ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು, ಸಹಕಾರ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಯುವಕ/ ಯುವತಿಯರಿಗಾಗಿ ಈ ಕೋರ್ಸನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಒಂದನೇ ತಂಡದಲ್ಲಿ

181 ಜನ, 2ನೇ ತಂಡದಲ್ಲಿ 272, 3ನೇ ತಂಡದಲ್ಲಿ 404 ಹಾಗು 4ನೇ ತಂಡದಲ್ಲಿ 534 ಅಭ್ಯರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

- ದಿನಾಂಕ 05.01.2023 ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಡುವೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. 2023ನೇ ಸಾಲಿನಲ್ಲಿ ಒಂದನೇ ತಂಡವನ್ನು 634 ಅಭ್ಯರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಪ್ರಸ್ತುತ ಎರಡನೇ ತಂಡ ಪ್ರಾರಂಭವಾಗಿದ್ದು 294 ಅಭ್ಯರ್ಥಿಗಳು ಹಾಗೂ ಮೂರನೇ ತಂಡದಲ್ಲಿ 154 ಅಭ್ಯರ್ಥಿಗಳು ಪ್ರವೇಶ ಪಡೆದಿರುತ್ತಾರೆ.
- ಸೌಹಾರ್ದ ಸಹಕಾರಿ ನ್ಯಾಯಾಲಯ : ಕರ್ನಾಟಕ ರಾಜ್ಯ ಸರ್ಕಾರವು ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳನ್ನು ಇತ್ಯಥ-ರ್ಗೊಳಿಸುವ ಸಲುವಾಗಿ ಪ್ರತ್ಯೇಕ ಸೌಹಾರ್ದ ನ್ಯಾಯಾಲಯದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದರ ಮೂಲಕ ಸೌಹಾರ್ದ ಸಹಕಾರಿಗಳಲ್ಲಿ ಉಂಟಾಗುವ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸಲು ಕ್ರಮವಿಡಲಾಗುತ್ತಿದೆ.
- ಮೇಲ್ಕಂಡ ವಿಶೇಷತೆಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು, ಪತ್ತಿನ ಸಹಕಾರಿಗಳು, ಗ್ರಾಹಕರ ಸಹಕಾರಿಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ವಿವಿದ್ಧೋದ್ದೇಶ ಸಹಕಾರಿಗಳು, ಶೈಕ್ಷಣಿಕ ಸಹಕಾರಿಗಳು ಹೀಗೆ ಒಟ್ಟಾರೆ ಹಲವು ವಿಧವಾದ ಚಟುವಟಿಕೆಗಳ ಕ್ಷೇತ್ರದಲ್ಲಿ ವ್ಯಾಪಿಸಿವೆ. ರಾಜ್ಯದ ಎಲ್ಲ ಭಾಗಗಳಿಗೂ ತಲುಪಿ ಸಾಮಾಜಿಕ ಅಭಿವೃದ್ಧಿಗೆ ತಮ್ಮದೆ ಆದ ಕೊಡುಗೆಯನ್ನು ನೀಡುತ್ತಿವೆ.

### ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ, 1997ರ ಮುಖ್ಯಾಂಶಗಳು:

- ಸಹಕಾರಿಯ ಸಂಪೂರ್ಣ ಒಡೆತನ, ನಿರ್ವಹಣೆ, ನಿಯಂತ್ರಣ ಸದಸ್ಯರದ್ದೇ.
- ಸ್ವಸಹಾಯ ಮತ್ತು ಪರಸ್ಪರ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳ ರಚನೆ.
- ಸಹಕಾರಿ ತತ್ವಗಳಿಂದ ಮಾರ್ಗದರ್ಶನ. ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಕೆ.
- ಸಹಕಾರಿಗಳಿಗೆ ಹೆಚ್ಚು ಜವಾಬ್ದಾರಿ, ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ.
- ಸಹಕಾರಿಗಳು ಹೆಚ್ಚು ಸ್ಪರ್ಧಾತ್ಮಕ ಹಾಗೂ ಸ್ವಾವಲಂಬಿಯಾಗಲು ಪ್ರೋತ್ಸಾಹ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ.
- ನೋಂದಣಿ ಮತ್ತು ಸಮಾಪನೆ ಹೊರತು ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದ್ದ ಸರಕಾರದ ಎಲ್ಲಾ ನಿಯಂತ್ರಣ ಮತ್ತು ಹಸ್ತಕ್ಷೇಪಗಳ ನಿವಾರಣೆ.
- ಪೂರಕ ಸಂಸ್ಥೆ ಪ್ರಾರಂಭಿಸಲು ಹಾಗೂ ಇತರೆ ಸಂಸ್ಥೆಗಳ ನಡುವೆ ಸಹೋದ್ಯಮ ಹಾಗೂ ಪಾಲುದಾರಿಕೆ ಆರಂಭಿಸಲು ಪ್ರೋತ್ಸಾಹ.
- ಯಾವುದೇ ಇಪ್ಪತ್ತು ಅಥವಾ ಹೆಚ್ಚು ಸೌಹಾರ್ದ ಸಹಕಾರಿಗಳು ಸೇರಿ ಒಕ್ಕೂಟ ಸಹಕಾರಿಯಾಗಿ ಚಟುವಟಿಕೆ ನಡೆಸಲು ಅವಕಾಶ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿ ಸಹಕಾರಿಗಳಿಂದಲೇ ರಚಿತವಾದ ಸಂಯುಕ್ತ ಸಹಕಾ-ರಿಗೆ.
- ಲೆಕ್ಕಪರಿಶೋಧಕರು ಸಹಕಾರಿಗಳ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲೇ ಬೇಕು. ಲೆಕ್ಕಪರಿಶೋಧಕರಿಗೂ ಜವಾಬ್ದಾರಿ.
- ಸಹಕಾರಿಗಳು ಡಿ.ಸಿ.ಸಿ ಬ್ಯಾಂಕುಗಳಷ್ಟೇ ಅಲ್ಲದೇ ಯಾವುದೇ ಅನುಸೂಚಿತ ಬ್ಯಾಂಕಿನ ಜೊತೆಗೆ ವ್ಯವಹಾರ ಮಾಡಲು ಮುಕ್ತ ಅವಕಾಶ.
- ಸದಸ್ಯರಿಗೆ ಸಹಕಾರಿಯೊಂದಿಗೆ ಕನಿಷ್ಠ ವ್ಯವಹಾರ ಮಾಡುವ ಹಾಗೂ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವ ಜವಾಬ್ದಾರಿ.
- ಯಾವುದೇ ವ್ಯಕ್ತಿಯ ಸದಸ್ಯತ್ವವನ್ನು ಆಡಳಿತ ಮಂಡಳಿ ನಿರಾಕ-ರಿಸಿದರೆ ಮೇಲ್ಮನವಿ ಆಯಾ ಸಹಕಾರಿಯ ಸಾಮಾನ್ಯ ಸಭೆಗೆ. ಈ ವಿಷಯದಲ್ಲಿ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.
- ಯಾವುದೇ ಸಹಕಾರಿಯ ಆಡಳಿತ ಮಂಡಳಿಯ 1/3ರಷ್ಟು ಸದಸ್ಯರು ಅಥವಾ ಒಟ್ಟು ಅರ್ಹ ಸದಸ್ಯರಲ್ಲಿ 1/10 ಸದಸ್ಯರು ಅಥವಾ ಸಂಯುಕ್ತ ಸಹಕಾರಿ ಕೋರಿದಲ್ಲಿ ನಿಬಂಧಕರಿಂದ ವಿಚಾರಣೆ.
- ಸದಸ್ಯರೊಂದಿಗೆ ಉಂಟಾದ ವಿವಾದಗಳ ಪರಿಹಾರಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಲ್ಲಿ ಇರುವಂತೆ ಇಲಾಖೆಯ ಪಂಚಾಯಿತಿ ವ್ಯವಸ್ಥೆಯ ಯಥಾವತ್ ಮುಂದುವರಿಕೆ.

### ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಪಕ್ಷಿನೋಟ

ರಾಜ್ಯದಲ್ಲಿ ಈ 6594 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿವೆ. 1740 ಇ-ಸ್ಟಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ 1.25 ಕೋಟಿಗೂ ಹೆಚ್ಚು ರಾಜಸ್ವವನ್ನು ನೀಡುತ್ತಿದೆ. ಮುಂದುವರೆದು, ಇನ್ನೂ ಕೆಲವು ಸೌಹಾರ್ದ ಸಹಕಾರಿಗಳು ಕಾಮನ್ ಸರ್ವಿಸ್ ಸೆಂಟರ್ ಸೇವೆಯನ್ನು ಬಳಸಿಕೊಂಡು ರೈತರಿಗೆ/ಸಾರ್ವಜನಿಕರಿಗೆ, ಆರ್‌ಟಿಸಿ/ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಸೇವೆಯನ್ನು ಒದಗಿಸುತ್ತಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 75 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ.

### ಸಂಯುಕ್ತ ಸಹಕಾರಿಯ ವಿಶೇಷತೆಗಳು

- ಸಹಕಾರಿಗಳನ್ನು ಪ್ರವರ್ತಿಸುವುದು, ಸಂಘಟಿಸುವುದು ಹಾಗೂ ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಯನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.

- ಸಹಕಾರ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.
- ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು.
- ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು.
- ಸಹಕಾರಿ ವಿಚಾರಧಾರೆಯನ್ನು ಅನ್ವಯಿಸುವಂತೆ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು.
- ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಸೂಚನೆ ಒದಗಿಸುವುದು.
- ಸಹಕಾರಿಗಳ ಅಂಕಿ–ಅಂಶಗಳ ಬ್ಯಾಂಕಿನಂತೆ ವರ್ತಿಸುವುದು
- ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದು.
- ಅಗತ್ಯವಿರುವಾಗ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು,
- ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;
- ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು
- ಕಾಯ್ದೆಯಲ್ಲಿ ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು,
- ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;
- ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;
- ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು

ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳು : ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಸಂಯುಕ್ತ ಸಹಕಾರಿಯಿಂದ ಹಮ್ಮಿಕೊಳ್ಳುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳು – ಸಂಯುಕ್ತ ಸಹಕಾರಿಯವತಿಯಿಂದ ವಿಷಯಾಧಾರಿತ ತರಬೇತಿ, ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಾಗಾರ, ಕೌಶಲ್ಯಾಭಿವೃದ್ಧಿ ತರಬೇತಿ, ಅನುಪಾಲನಾ ವರದಿ ಕುರಿತು ತರಬೇತಿ, ಲೆಕ್ಕಪರಿಶೋಧನಾ ಪೂರ್ವ ತಯಾರಿ ಕುರಿತು ತರಬೇತಿ, ಆಡಳಿತ ಪರಿಣಿತಿ ತರಬೇತಿ, ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ತರಬೇತಿ, ನಷ್ಟದಿಂದ ಹೊರಬರುವ ಕುರಿತು ತರಬೇತಿ,ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ತರಬೇತಿ, ಪರಿಣಾಮಕಾರಿ ವ್ಯವಹಾರ ನಿರ್ವಹಣೆ ತರಬೇತಿ, ಜಿಲ್ಲಾ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಚಿಂತನ ಕಾರ್ಯಾಗಾರ, ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ, ಕ್ಲಸ್ಟರ್ ತರಬೇತಿ, ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಕುರಿತು ತರಬೇತಿ, ಇ–ಸ್ಟಾಂಪಿಂಗ್ ತರಬೇತಿ ಕಾರ್ಯಕ್ರಮ, ಲೆಕ್ಕಪತ್ರ/ದಾಖಲಾತಿ ನಿರ್ವಹಣೆ ಕುರಿತು ತರಬೇತಿ, ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ತರಬೇತಿ, ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳ ತರಬೇತಿ, ಸಭೆ ನಡವಳಿ ದಾಖಲಿಸುವ ಕುರಿತು ತರಬೇತಿ.

ಆರ್ಥಿಕ ನಿರ್ವಹಣೆ ಕುರಿತು ತರಬೇತಿ, ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಕುರಿತು ತರಬೇತಿ, ಸೌಹಾರ್ದ ಒಕ್ಕೂಟ ಸಹಕಾರಿಗಳ ಕಾರ್ಯಯೋಜನೆ ಮತ್ತು ಬಲವರ್ಧನೆಯ ತರಬೇತಿ, ತೆರಿಗೆ ಕಾಯ್ದೆಗಳಲ್ಲಿನ ಇತ್ತೀಚಿನ ಬದಲಾವಣೆಗಳ ಕುರಿತು ತರಬೇತಿ, ವೃತ್ತಿ ನೈಪುಣ್ಯತೆಯ ತರಬೇತಿ, ಬಡ್ಡಿಯೇತರ ಆದಾಯದ ಕುರಿತು ತರಬೇತಿ, ಮಾನವ ಸಂಪನ್ಮೂಲ ನಿರ್ವಹಣೆ ತರಬೇತಿ, ಗ್ರಾಹಕ ಸಂಬಂಧಗಳ ನಿರ್ವಹಣೆ ತರಬೇತಿ, ವ್ಯಾಪಾರ ಅಭಿವೃದ್ಧಿ ನಿರ್ವಹಣೆ ತರಬೇತಿ, ಪರಿಣಾಮಕಾರಿ ಸಂವಹನ ತರಬೇತಿ, ವ್ಯವಹಾರ ಅಭಿವೃದ್ಧಿ ನಿರ್ವಹಣೆ ತರಬೇತಿ, ಒತ್ತಡ ನಿರ್ವಹಣೆ ತರಬೇತಿ, ಚಿನ್ನದ ಮೌಲ್ಯಮಾಪನ ಕುರಿತು ತರಬೇತಿ, ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕುರಿತು ತರಬೇತಿ, ಚುನಾವಣಾ ಪೂರ್ವಸಿದ್ಧತಾ ತರಬೇತಿ, ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನೆ ಕಾರ್ಯಾಗಾರ, ಶಾಸನಾತ್ಮಕ ಕ್ರಮಗಳ ಬಗ್ಗೆ ತರಬೇತಿ, ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳು, ಮುಖ್ಯಕಾರ್ಯನಿರ್ವಾಹಕರ ಸಭೆಗಳು, ವಿವಿಧ ರೀತಿಯ ಸಭೆಗಳು, ಸಹಕಾರದಿಂದ ಸಮೃದ್ಧಿ ಎಂಬ ಘೋಷ ವಾಕ್ಯದೊಂದಿಗೆ ಸಹಕಾರ ಸಚಿವಾಲಯ ಸ್ಥಾಪಿಸುತ್ತಿರುವ ಕೇಂದ್ರ ಸರ್ಕಾರಕ್ಕೆ ಅಭಿನಂದಿಸಿ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯನ್ನು ಆಯೋಜಿಸಲಾಗಿದೆ. ಒಟ್ಟಾರೆ ಈ ಎಲ್ಲ ತರಬೇತಿ, ಶಿಕ್ಷಣ, ಸಭೆಗಳು, ಪ್ರಚಾರ ಕಾರ್ಯಚಟುವಟಿಕೆಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸಂಯುಕ್ತ ಸಹಕಾರಿಯಿಂದ ಹಮ್ಮಿಕೊಳ್ಳುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. 10 ದಿನಗಳ 23 'ವ್ಯಕ್ತಿತ್ವ ವಿಕಸನ ತರಬೇತಿ'ಗಳನ್ನು ನಡೆಸಲಾಗಿದೆ. ಸದರಿ ತರಬೇತಿಯಲ್ಲಿ 1229 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. 07 ದಿನಗಳ 'ಬೇಸಿಕ್ ಬ್ಯಾಂಕಿಂಗ್ ಕೋರ್ಸ್' 09 ಕೋರ್ಸ್‌ಗಳನ್ನು ನಡೆಸಲಾಗಿದ್ದು, ಸದರಿ ಕೋರ್ಸ್‌ನಲ್ಲಿ 490 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ತರಬೇತಿಗಳನ್ನು 2020ನೇ ಸಾಲಿನಿಂದ 2025ರ ವರೆಗೆ ತರಬೇತಿ ಹಾಗೂ ಇತರೆ ಕಾರ್ಯಕ್ರಮಗಳ ವಿವರ ಕೆಳಗಿನಂತಿವೆ.

| ಕ್ರ. ಸಂ | ವರ್ಷ | ತರಬೇತಿ /ಸಭೆಗಳು | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಪ್ರತಿನಿಧಿಗಳ ಸಂಖ್ಯೆ |
|---|---|---|---|---|
| 1 | 2020–21 | 276 | 3206 | 22565 |
| 2 | 2021–22 | 279 | 3780 | 25765 |
| 3 | 2022–23 | 2025 | 25765 | 34262 |
| 4 | 2023–24 | 369 | 12419 | 23845 |
| 5 | 2024–25 | 308 | 14608 | 30351 |

**ಪ್ರಚಾರ ಚಟುವಟಿಕೆಗಳು:**

ರಾಜ್ಯಮಟ್ಟದ/ ರಾಷ್ಟ್ರಮಟ್ಟದ ಅಂತರರಾಷ್ಟ್ರಮಟ್ಟದ ಸಹಕಾರಿ ಸೆಮಿನಾರ್‌ಗಳಲ್ಲಿ ಭಾಗವಹಿಸಿ ಅವರುಗಳು ಹೊರತರುವಂತಹ ಸ್ಮರಣ ಸಂಚಿಕೆಗೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಜಾಹಿರಾತು ನೀಡಲಾಗುತ್ತಿದೆ. ಸಂಯುಕ್ತ ಸಹಕಾ–ರಿಯು ತನ್ನದೆ ಆದ ಯೂ–ಟ್ಯೂಬ್ ಚಾನಲ್‌ನ್ನು ಹೊಂದಿದ್ದು, ಸೋಶಿಯಲ್ ಮೀಡಿಯಾದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕುರಿತು ಸಹಕಾರಿಗಳಿಗೆ ಉಪಯುಕ್ತ ಮಾಹಿತಿಯನ್ನು ಪ್ರಚಾರ ಮಾಡಲಾಗುತ್ತಿದೆ.

**ಸಂಯುಕ್ತ ಸಹಕಾರಿಯ ವೆಬ್‌ಸೈಟ್ (ಆಧುನಿಕ ತಂತ್ರಜ್ಞಾನದ ಅಳವಡಿಕೆ)** : ಸಂಯುಕ್ತ ಸಹಕಾರಿಯು ತನ್ನದೇ ಆದ ವೆಬ್‌ಸೈಟ www.souharda.coop ನ್ನು ಹೊಂದಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದ ಪೂರ್ಣ ವಿವರಗಳನ್ನು ವೆಬ್‌ಸೈಟ್ ಮೂಲಕವೇ ಪಡೆಯಬಹುದಾಗಿದೆ.

**ಸ್ವಾಭಿಮಾನಿ ಸಹಕಾರಿ (ಮಾಸ ಪತ್ರಿಕೆ)** : ಸಂಯುಕ್ತ ಸಹಕಾರಿಯು ಸ್ವಾಭಿಮಾನಿ ಸಹಕಾರಿ ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತದೆ. ಈ ಪತ್ರಿಕೆಯನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗುತ್ತಿದೆ. ಈ ಪತ್ರಿಕೆಯ ಮೂಲಕ ಸೌಹಾರ್ದ ಸಹಕಾರಿ ಚಟುವಟಿಕೆಗಳನ್ನು ಪ್ರಚಾರ ಮಾಡುವುದು, ಸಂಯುಕ್ತ ಸಹಕಾರಿಯ ಮಾರ್ಗದರ್ಶನಗಳನ್ನು ಸರಕಾರದ ಸಹಕಾರ ಇಲಾಖೆಯ ಮಹತ್ವದ ಸುತ್ತೋಲೆಗಳು ಹಾಗೂ ಸೂಚನೆಗಳನ್ನು ಪ್ರಕಟಿಸಲಾಗುತ್ತದೆ.

**ಪ್ರಕಟಣೆಗಳು** : ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸಂಯುಕ್ತ ಸಹಕಾರಿ ಕಾಲಕಾಲಕ್ಕೆ ಅಗತ್ಯವೆನಿಸುವ ಸಹಕಾ–ರಿಗಳಿಗೆ ಉಪಯುಕ್ತ ವೆನಿಸುವ 36 ವಿಧಗಳ ಪ್ರಕಟಣೆಗಳನ್ನು ಪ್ರಕಟಿಸುತ್ತಿದೆ. ಬಹುಮುಖ್ಯವಾಗಿ ಸೌಹಾರ್ದ ಸಹಕಾರಿ ಕಾಯ್ದೆಯ ಕನ್ನಡ ಹಾಗೂ ಇಂಗ್ಲೀಷ್ ಪ್ರತಿಗಳು, ಮಾದರಿ ಉಪವಿಧಿಗಳು, ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಸಂಯುಕ್ತ ಸಹಕಾರಿಯ, ಸರ್ಕಾರದ, ನಿಬಂಧಕರ ಸುತ್ತೋಲೆಗಳ ಸಂಗ್ರಹ, ಸಂಯುಕ್ತ ಸಹಕಾರಿಯ ಉಪವಿಧಿ, ಮಾದರಿ ಸಾಲದ ನಿಯಮಗಳು, ಮಾದರಿ ಠೇವಣಿ ನಿಯಮಗಳು, ಮಾದರಿ ಸೇವಾ ನಿಯಮಗಳು, ಸಹಕಾರಿಗಳಿಗೆ ಸಂಬಂಧಿಸಿದ ವಿವಿಧ ನ್ಯಾಯಾಲಯದ ತೀರ್ಪುಗಳು, ಮುಖ್ಯಕಾರ್ಯನಿರ್ವಾಹಕರ ಮಾರ್ಗದರ್ಶಿ ಹಾಗೂ ವಿವಿಧ ಕೈಪಿಡಿಗಳನ್ನು ಸದಸ್ಯ ಸಹಕಾರಿಗಳಿಗೆ ನೀಡುತ್ತಲಿದೆ.

**ಸದಸ್ಯ ಶಿಕ್ಷಣ ಯೋಜನೆ**

ರಾಜ್ಯದ ಸೌಹಾರ್ದ ಸಹಕರಿಗಳ ಸದಸ್ಯರುಗಳಿಗಿ ಸೌಹಾರ್ದ ಸಹಕಾರಿಗಳ ಸ್ಥಳದಲ್ಲಿಯೇ ಸದಸ್ಯರಿಗಾಗಿ ಸದಸ್ಯ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಗುತ್ತಿದೆ. ಸದಸ್ಯ ಶಿಕ್ಷಣ ತರಬೇತಿಯಲ್ಲಿ ಸಹಕಾರ ಕ್ಷೇತ್ರದ ಪರಿಚಯ, ಸದಸ್ಯರಿಗೆ ಸಂಬಂಧಿಸಿದ ಮಾಹಿತಿಗಳು–ಸದಸ್ಯ, ಸದಸ್ಯತ್ವ–ಜವಬ್ದಾರಿ –ಹಕ್ಕು –ಅನರ್ಹತೆ –ಅರ್ಹತೆ, ಸಹಕಾರಿ ಸಂಸ್ಥೆಗಳ ಸಭೆಗಳು, ಕೋರಂ ಮತ್ತು ನಡುವಳಿಕೆಗಳ ದಾಖಲಿಸುವುದು, ಕ್ರಮವಿಡುವುದು, ಸಹಕಾರಿ ವರ್ಷ–ಧ್ವಜ–ಸಪ್ತಾಹ–ಸೌಹಾರ್ದ ಸಹಕಾರಿ ದಿನ–ಅಂತರರಾಷ್ಟ್ರೀಯ ಸಹಕಾರಿ ದಿನ ಈ ವಿಷಯಗಳನ್ನು ಅಳವಡಿಸಲಾಗಿದೆ.

**ನಿಯಂತ್ರಣಾತ್ಮಕ ಚಟುವಟಿಕೆಗಳು :**

- ಅನರ್ಹಗೊಳಿಸಲಾದ ಅಥವಾ ತೆಗೆದು ಹಾಕಲಾದ ಒಂದು ಸಹಕಾರಿಯ ನಿರ್ದೇಶಕನ ಅಪೀಲನ್ನು ಪರಿಗಣಿಸುವುದು.
- ಅಗತ್ಯವಿರುವಾಗ ಸದಸ್ಯ ಸಹಕಾರಿಗಳ ಮಂಡಲಿ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು.
- ಸದಸ್ಯ ಸಹಕಾರಿಗಳಿಗೆ ನೀತಿ ಸಂಹಿತೆಯನ್ನು ರೂಪಿಸುವುದು.
- ಸದಸ್ಯ ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.
- ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು.
- ಸದಸ್ಯ ಸಹಕಾರಿಗಳ ಪರಿವೀಕ್ಷಣೆ, ಸಮಾಪನೆ ಹಾಗೂ ಮಂಡಲಿಯ ರದ್ದತಿ.

ಟಾಸ್ಕ್ ಫೋರ್ಸ್ : ಸಮಸ್ಯಾತ್ಮಕ ಸಹಕಾರ ಸಂಘಗಳಿಗೆ ಮಾರ್ಗದರ್ಶನ ಮಾಡಿ ಅವುಗಳು ಸಮಸ್ಯಗಳಿಂದ ಹೊರಗೆ ಬರುವಂತೆ ಹಾಗೂ ಸದಸ್ಯರಿಗೆ ಹಾಗೂ ಠೇವಣಿದಾರರಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಕ್ರಮವಿಡುವುದಕ್ಕೆ ಈ ಟಾಸ್ಕ್ ಫೋರ್ಸ್ ವಿಭಾಗವು ಕೆಲಸ ನಿರ್ವಹಿಸುತ್ತಿದೆ.

**ಕಾರ್ಯ ಸಾಧನೆಗಳು**

ದೇಶದಲ್ಲಿ ಸ್ವಾಯತ್ತ ಕಾಯ್ದೆಗಳ ಅಡಿಯಲ್ಲಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯು ದಿನಾಂಕ 01.01.2001ರಂದು ರಚನೆಯಾಗಿದ್ದು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ವೈಶಿಷ್ಟತೆ ಇಡೀ ದೇಶದಲ್ಲಿಯೇ ಭಿನ್ನವಾಗಿದ್ದು, ಸದಸ್ಯ ಸಹಕಾರಿಗಳಿಂದ ಆಯ್ಕೆಗೊಂಡ ಆಡಳಿತ ಮಂಡಳಿ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಶಾಸನಬದ್ಧ ಆಡಳಿತದ ನೇತೃತ್ವವಹಿಸಿರುವುದು ಇಡೀ ದೇಶದಲ್ಲಿ ಮಾದರಿ. ಕರ್ನಾಟಕ ಸರ್ಕಾರದ ಈ ಹೆಮ್ಮೆಯ ಸೌಹಾರ್ದ ಸಂಯುಕ್ತ ಸಹಕಾರಿ ಕ್ಷೇತ್ರದ ಸಾಧನೆಯತ್ತ ನಡೆಯುತ್ತಿದೆ.

ಸೌಹಾರ್ದ ಸಹಕಾರಿ ಕ್ಷೇತ್ರವನ್ನು "ಯುವಪೀಳಿಗೆಯ" ನವ ಸಹಕಾ–ರಿಗಳು ಎಂದು ಕರೆಯುತ್ತಾರೆ. ಏಕೆಂದರೆ ಯುವ ಜನಾಂಗ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ರಾಜ್ಯದಾದ್ಯಂತ ನೂರಾರುಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಹುಟ್ಟಿಹಾಕಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಸಾರಥ್ಯವನ್ನು ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅವಶ್ಯಕವೆನಿಸುವ ಎಲ್ಲ ಕಾನೂನು ಬದ್ಧ ಹಾಗೂ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಶಿಕ್ಷಣ, ತರಬೇತಿ, ಪ್ರಚಾರ ಹಾಗೂ ನಿಯಂತ್ರಣ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

- ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಅಭಿವೃದ್ಧಿದಾಯಕ

ಮುನ್ನಡೆಯುತ್ತಿರುವುದು ತಮಗೆಲ್ಲ ತಿಳಿದಿದೆ. ರಾಜ್ಯದಲ್ಲಿ ಈವರೆಗೆ 6000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣೆಯಾಗಿವೆ.

- ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 75 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ. ನೇರವಾಗಿ 1,00,000ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ.
- ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ 344 ಮಹಿಳಾ ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ.
- ಜಿಲ್ಲಾ ಸಂಪರ್ಕ ಕಚೇರಿಗಳು: ಸೌಹಾರ್ದ ಸಹಕಾರಿಗಳ ಜೊತೆಗೆ ನಿಕಟ ಸಂಪರ್ಕ ಹೊಂದುವ ದೃಷ್ಟಿಯಿಂದ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯನ್ನು ವೇಗವಾಗಿಸುವ ದೃಷ್ಟಿಯಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ.

**ಇ–ಸ್ಟಾಂಪಿಂಗ್ ವಿಭಾಗ**

ದಿನಾಂಕ 22.03.2010ರಂದು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಒಪ್ಪಂದ ಮಾಡಿಕೊಂಡು ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ದಿನಾಂಕ 25.04.2010ರಂದು ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಎಲೆಕ್ಟ್ರಾನಿಕ್ ಸ್ಟ್ಯಾಂಪ್ ಪೇಪರ್‌ನ್ನು ನೀಡಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಸಹಕಾರ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ದಿನಾಂಕ 31.03.2025ಕ್ಕೆ 1704ಕ್ಕೂ ಹೆಚ್ಚು ಇ–ಸ್ಟಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಸರ್ಕಾರದ ಬೊಕ್ಕಸಕ್ಕೆ ಪ್ರತಿದಿನ ಎರಡು ಕೋಟಿಗೂ ಹೆಚ್ಚು ರಾಜಸ್ವವನ್ನು ಸಂಗ್ರಹಿಸಿ ಜಮಾ ಮಾಡಲಾಗುತ್ತಿದೆ. ಕಳೆದ ಮಾರ್ಚ್ ಅಂತ್ಯಕ್ಕೆ ರೂ. 300 ಕೋಟಿಗೂ ಹೆಚ್ಚು ರಾಜಸ್ವವನ್ನು ಸಂಗ್ರಹ ಮಾಡಿ ರಾಜ್ಯ ಸರ್ಕಾರ ದ ಖಾತೆಗೆ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಮೂಲಕ ಜಮ ಮಾಡಲಾಗಿದೆ.

**ಸೌಹಾರ್ದ ಸಹಕಾರಿ ನ್ಯಾಯಾಲಯ ಹಾಗೂ ಸಂಚಾರಿ ಪೀಠ :** ದಿನಾಂಕ 08.01.2016 ರಂದು ದಿ.ಶ್ರೀ ಹೆಚ್. ಎಸ್. ಮಹದೇವಪ್ರಸಾದ ಮಾನ್ಯ ಸಹಕಾರಿ ಸಚಿವರಾಗಿದ್ದಾಗ ಸಂಯುಕ್ತ ಸಹಕಾರಿಗೆ ಸೌಹಾರ್ದ ಸಹಕಾರಿ ದಾವಾಪಂಚಾಯಿತಿ ನ್ಯಾಯಾಲಯವು ಜಾರಿಗೆ ಬಂದಿದ್ದು, 19.06.2016ರಂದು ಪ್ರಾರಂಭಗೊಂಡಿತ್ತು. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಿರುವುದನ್ನು ನ್ಯಾಯಾಲಯದ ಅವಶ್ಯಕತೆಯನ್ನು ಗಮನಿಸಿದ ಆಡಳಿತ ಮಂಡಳಿಯು ದಿನಾಂಕ 24–10–2017 ರಂದು ಅಂದಿನ ಸಹಕಾರ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿ ಇವರು ಬೆಳಗಾವಿ, ಸಂಚಾರಿ ನ್ಯಾಯಪೀಠವನ್ನು ಉದ್ಘಾಟಿಸಿ ಆರಂಭಿಸಲಾಯಿತು.

**ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿ :** ಸಂಯುಕ್ತ ಸಹಕಾರಿಯು ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಸ್ವಂತ ಕಟ್ಟಡವನ್ನು ಹೊಂದಿವುದರೊಂದಿಗೆ ಪ್ರಾಂತೀಯ ಕಚೇರಿಗಳಾದ ಬೆಂಗಳೂರು, ಕಲಬುರಗಿ, ಬೆಳಗಾವಿ ಪ್ರಾಂತೀಯ ಕಛೇರಿಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಿದ್ದು, ಮೈಸೂರು ಪ್ರಾಂತೀಯ ಕಛೇರಿಗೆ ನಿವೇಶನವನ್ನು ಹೊಂದಿದೆ.

**ಸ್ವಾಭಿಮಾನಿ ಸಹಕಾರಿ (ಮಾಸ ಪತ್ರಿಕೆ) :** ಸಂಯುಕ್ತ ಸಹಕಾರಿಯು ಸ್ವಾಭಿಮಾನಿ ಸಹಕಾರಿ ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತದೆ. ಈ ಪತ್ರಿಕೆಯನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗುತ್ತಿದೆ. ಈ ಪತ್ರಿಕೆಯ ಮೂಲಕ ಸೌಹಾರ್ದ ಸಹಕಾರಿ ಚಟುವಟಿಕೆಗಳನ್ನು ಪ್ರಚಾರ ಮಾಡುವುದು, ಸಂಯುಕ್ತ ಸಹಕಾರಿಯ ಮಾರ್ಗದರ್ಶನಗಳನ್ನು ಸರಕಾರದ ಸಹಕಾರ ಇಲಾಖೆಯ ಮಹತ್ವದ ಸುತ್ತೋಲೆಗಳು ಹಾಗೂ ಸೂಚನೆಗಳನ್ನು ಪ್ರಕಟಿಸಲಾಗುತ್ತದೆ.

**ಸಂಯುಕ್ತ ಸಹಕಾರಿಯ ಸುತ್ತೋಲೆಗಳು :** ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟದ ಕಾರ್ಯ ನಿರ್ವಹಿಸಲು ಅವಕಾಶವಾಗುವಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗುತ್ತಿದೆ. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಬೆಳವಣಿಗೆಗಾಗಿ ಆರ್ಥಿಕ ಸಬಲತೆಗಳ ಮಾನದಂಡ, ಠೇವಣಿ ಮತ್ತು ಸಾಲಗಳ ಮೇಲೆ ವಿಧಿಸುವ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ, ವರ್ಷಾಂತ್ಯದ ಆರ್ಥಿಕ ಮಾಹಿತಿ ಕಳುಹಿಸುವ ಹಾಗೂ ಇತರೆ ಸಂಗತಿಗಳ ಕುರಿತು, ಸೌಹಾರ್ದ ಸಹಕಾರಿ ಕಾಯ್ದೆ–1997ರ ತಿದ್ದುಪಡಿ ಕುರಿತು, ಲೆಕ್ಕಪರಿಶೋಧನೆ ಕುರಿತು ಮುಖ್ಯಕಾರ್ಯನಿರ್ವಾಹಕರ ಮಾರ್ಗದರ್ಶಿ ಕೈಪಿಡಿ ಹಾಗು ಆಡಳಿತಾತ್ಮಕವಾದ, ತರಬೇತಿಗಳ ಕುರಿತು ಸುತ್ತೋಲೆಗಳನ್ನು ಹೊರಡಿಸಲಾಗಿದೆ.

**ಸೌಹಾರ್ದ ಸಹಕಾರಿಗಳಿಗಾಗಿ ಯೋಜನೆಗಳು :** ಸಂಯುಕ್ತ ಸಹಕಾರಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಕುರಿತು ಗುಂಪು ಆರೋಗ್ಯ ವಿಮೆ, ಸಾಲಾವಿಮಾ ಯೋಜನೆ, ಜೀವಾ ವಿಮಾ ಯೋಜನೆ, ಅನೇಕ ಯೋಜನೆಗಳನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ ಇನ್ನು ಹಲವಾರು ಯೋಜನೆಗಳು ಪ್ರಕ್ರಿಯಲ್ಲಿವೆ.

**ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಅಧ್ಯಯನ ಮಾಡಿದ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಅಭಿಪ್ರಾಯ ಹಾಗೂ ಮೆಚ್ಚುಗೆ**

- ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ಏಶಿಯಾ ಫೆಸಿಫಿಕ್‌ಯಿಂದ ಅಧ್ಯಯನ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಬಗ್ಗೆ ಮೆಚ್ಚುಗೆ. ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (ಏಶಿಯಾ ಫೆಸಿಫಿಕ್)ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ಅಧ್ಯಯನಕ್ಕಾಗಿ ವೃತ್ತಿಯಲ್ಲಿ ವಕೀಲರು ಆಡಳಿತ ತಜ್ಞೆ ಶ್ರೀಮತಿ ಲಾರೆನ್ಸ ಹಮ್ಮನ್ಸವರು ಡಿಸೆಂಬರ 2017ರ ಮಾಹೆಯಲ್ಲಿ ಭೇಟಿ ನೀಡಿದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದಾರೆ. ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯು ಅನುಕರಣೆಗೆ ಯೋಗ್ಯ ಎಂದು ವ್ಯಕ್ತಪಡಿಸಿದರು.
- ಮೈಸೂರು ವಿಶ್ವ ವಿದ್ಯಾಲಯದವರಿಂದ ಮೌಲ್ಯಮಾಪನ ರಾಜ್ಯದ

ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ಪ್ರೊ.ಯಶವಂತ ಡೋಂಗ್ರೆಯವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಿದ್ದಾರೆ. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಸಂಯುಕ್ತ ಸಹಕಾರಿಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಕಾರ್ಯನಿರ್ವಹಿಸುವಲ್ಲಿ ಸಹಕಾರಿಗಳ ನಿರ್ದೇಶಕರು ಹಾಗು ಸಿಬ್ಬಂದಿಯವರಿಗೆ ಹೆಚ್ಚಿನ ತರಬೇತಿ ಕ್ಷೇತ್ರದ ಕಾರ್ಯಚಟುವಟಿ-ಕೆಗಳ ವ್ಯಾಪಕ ಪ್ರಚಾರ ಅವಶ್ಯಕ ಎಂದು ತಿಳಿದ್ದಾರೆ.

- ಎನ್‌ಸಿ ಯು ಐ ದವರಿಂದ ಸ್ವಾಯತ್ತ ಸಹಕಾರ ಕಾಯ್ದೆಗಳ ಅಧ್ಯಯನ ಹಾಗೂ ವೈಕುಂಠ ಮೆಹತಾ ಸಹಕಾರ ನಿರ್ವಹಣಾ ಸಂಸ್ಥೆಯ ವರದಿಯಂತೆ ದೇಶದಾದ್ಯಂತ 9 ರಾಜ್ಯಗಳಲ್ಲಿ ಸ್ವಾಯತ್ತ ಕಾಯ್ದೆ ಅಳವಡಿಸಿಕೊಂಡಿರುವುದನ್ನು ಸ್ವಾಯತ್ತ ಸಹಕಾರಿ ಕಾಯ್ದೆಗಳ ಅನುಷ್ಠಾನದ ಬಗ್ಗೆ ಎನ್.ಸಿ.ಯು.ಐ ನವರು ಪುಣೆಯ ವೈಕುಂಠ ಮೆಹತಾ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಮೂಲಕ ಅಧ್ಯಯನ ಮಾಡಿಸಿದ್ದಾರೆ. ಡಾ. ಪರಂಜ್ಯೋತಿಯವರು ಈ ಅಧ್ಯಯನದ ನೇತೃತ್ವವನ್ನು ವಹಿಸಿ ಸದರಿ ವರದಿಯಲ್ಲಿ ಕರ್ನಾಟಕದ ಸೌಹಾರ್ದ ಮಾದರಿ ಅತ್ಯಂತ ಯಶಸ್ವಿಯಾಗಿದೆ. ಇದು ಇತರೆ ರಾಜ್ಯಗಳಲ್ಲಿ ಅನುಸರಿಸಬಹುದಾಗಿದೆ. ಎಂದು ತಿಳಿದ್ದಾರೆ. ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- ಕೋ-ಆಪರೇಟಿವ್ ಡೆವಲೆಪ್ಮೆಂಟ್ ಫೋರಂ ಹೈದರಾಬಾದ್ : ಇವರು ರಾಷ್ಟ್ರದಲ್ಲಿ ಜಾರಿಯಲ್ಲಿ ಇರುವ 09 ರಾಜ್ಯಗಳ ಸ್ವಾಯತ್ತ ಕಾಯ್ದೆಗಳನ್ನು ಅಧ್ಯಯನ ಮಾಡಿ ಕರ್ನಾಟಕ ರಾಜ್ಯದಲ್ಲಿರುವ ವ್ಯವಸ್ಥೆ ಅತ್ಯಂತ ಉತ್ತಮ ಹಾಗೂ ಅನುಕರಣಿಯವಾಘಿದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ.
- ಸಹಕಾರಿ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ಕುರಿತು ಪಿಹೆಚ್‌ಡಿ : ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಡಾಕ್ಟರೇಟ್ ಮಾಡಿದ ಶ್ರೀ ಹೆಚ್. ಪಿ. ವೆಂಕಟೇಶ್, ಶ್ರೀ ನಾಗರಾಜ,ಮತ್ತು ಶ್ರೀ ಸಿದ್ಧಾರ್ಥ ಮೈಸೂರು, ಶ್ರೀ ಶ್ರೀನಿಧಿ ಶಿವಮೊಗ್ಗ, ಶ್ರೀ ರಾಜೇಶ್ ಉಡುಪಿ, ಇವರುಗಳು ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಕುರಿತು ಅಧ್ಯಯನ ನಡೆಸಿದ್ದಾರೆ ವರದಿ ಸಲ್ಲಿಸಿರುತ್ತಾರೆ. ಈ ಮಾದರಿಯ ಕಾಯ್ದೆ ಇತರೆ ರಾಜ್ಯಗಳಲ್ಲಿಯೂ ಸಹ ಅನುಸರಿಸುವಂತಹದ್ದು, ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದಲ್ಲದೆ ಹತ್ತಾರು ಪಿಜಿ ವಿದ್ಯಾರ್ಥಿಗಳು ಎಂಬಿಎ ವಿದ್ಯಾರ್ಥಿಗಳು ಈ ಸಂಸ್ಥೆಯ ಹಾಗೂ ಈ ವ್ಯವಸ್ಥೆಯ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಮಾಡಿದ್ದಾರೆ.
- ಚಾಣಕ್ಯ ವಿಶ್ವವಿದ್ಯಾಲಯ ಬೆಂಗಳೂರು ಇವರಿಂದ ಮೌಲ್ಯಮಾಪನ : ಸಂಯುಕ್ತ ಸಹಕಾರಿಯ ಡಿಸಿಬಿಎಂ ಕೋರ್ಸ್ ಕುರಿತು ಹಾಗೂ ಕಡಿಮೆ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಕುರಿತು ಮೌಲ್ಯಮಾಪನಕ್ಕೆ ನೀಡಲಾಗಿದೆ. ವರದಿ ನಿರೀಕ್ಷೆಯಲ್ಲಿದೆ.
- Autonomy governance empowerment: Study of Souharda cooperatives ಎಂಬ ಪುಸ್ತಕವನ್ನು ಚಾಣಕ್ಯ ವಿಶ್ವವಿದ್ಯಾಲಯ ಬೆಂಗಳೂರು ಇದರ ಕುಲಪತಿಗಳಾದ ಡಾ. ಯಶ್ವಂತ ಡೋಂಗ್ರೆ ಇವರು ಬರೆದಿದ್ದಾರೆ. ಈ ಪುಸ್ತಕ ಈಗ ಮುದ್ರಣ ಹಂತದಲ್ಲಿದ್ದು, ರಾವತ ಪಬ್ಲಿಕೇಷನ್ಸ್ ಇವರು ರಾಷ್ಟ್ರಮಟ್ಟದ ಪ್ರಕಾಶಕರು ಪ್ರಕಾಶನಗೊಳಿಸಲಿದ್ದಾರೆ. ಈ ಪುಸ್ತಕ ಸಧ್ಯದಲ್ಲೇ ಹೊರಬರಲಿದೆ.

ICA ಗ್ಲೋಬಲ್ ಕೋ-ಆಪರೇಟಿವ್ ಸಮಾವೇಶ : ನವದೆಹಲಿಯ ಭಾರತ್ ಮಂಟಪದಲ್ಲಿ ಪ್ರಪಂಚದಾದ್ಯಂತ 100 ದೇಶಗಳಿಂದ 3000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಮೂರು ದಿನಗಳ ಜಾಗತಿಕ ಸಹಕಾರಿ ಸಮ್ಮೇಳನವು ನಡೆಯಿತು. ಈ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿಎ, ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭಾಗವಹಿಸಿದ್ದರು.

39ನೇ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮಾವೇಶ : ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ ಗದಗ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಪೂಣೆ ಮತ್ತು ವೈಕುಂಠ ಮೆಹತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಪೂಣೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 03 ಮತ್ತು 04 ಜನವರಿ 2025 ರಂದು 2 ದಿನಗಳ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮಾವೇಶವನ್ನು ಏರ್ಪಡಿಸಿಲಾಗಿತ್ತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಹಕಾರಿ ಧ್ವಜಾರೋಹಣ, ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆ : ದಿನಾಂಕ 01.01.2025 ಸೌಹಾರ್ದ ಸಹಕಾರಿ ದಿನ ಹಾಗೂ ರಜತ ಮಹೋತ್ಸವದ ಅಂಗವಾಗಿ ಸಂಯುಕ್ತ ಸಹಕಾ-ರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ಹಾಗೂ ಕರ್ನಾಟಕದ 2025 ಸೌಹಾರ್ದ ಸಹಕಾರಿಗಳಲ್ಲಿ ಏಕಕಾಲದಲ್ಲಿ ಸಹಕಾರಿ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನ ತೀರ್ಪುಗಾರರಾದ ಡಾ.ಹರೀಶ್‌ರವರು ಹಾಜರಿದ್ದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರಿ ಧ್ವಜಾರೋಹಣದ ದಿನದಂದು 2025 ಸ್ಥಳಗಳಲ್ಲಿ ಏಕಕಾಲದಲ್ಲಿ ಸಹಕಾರಿ ಧ್ವಜವನ್ನು ಹಾರಿಸುವ ಮೂಲಕ ಬುಕ್ ಆಫ್ ರೆಕಾರ್ಡ್ಸ್‌ಗೆ

ಸೇರಿದೆ ಎಂದು ಘೋಷಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಅವರಿಗೆ ದಾಖಲೆ ಪತ್ರವನ್ನು ಹಸ್ತಾಂತರಿಸಿದರು.

ರಾಷ್ಟ್ರೀಯ ಸಹಕಾರ ಯೂನಿಯನ್ : ಪ್ರತಿ ವರ್ಷವು ಸಂಯುಕ್ತ ಸಹಕಾರಿಯಿಂದ ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ, ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ವಿವರಗಳನ್ನು ನೀಡಲಾಗುತ್ತಿದೆ.

ರಾಷ್ಟ್ರಮಟ್ಟದ ಸಹಕಾರದ ಸಂಸ್ಥೆಗಳೊಂದಿಗೆ ಸಮನ್ವಯ : ಇನಂಟರ್ ನ್ಯಾಷನಲ್ ಕೋ–ಆಪರೇಟಿವ್ ಅಲೋಯನ್ಸ್, ನ್ಯಾಷನಲ್ ಕೋಆಪರೇಟಿವ್ ಯೂನಿಯನ್ ಆಫ್ ಇಂಡಿಯಾ ಹಾಗೂ ದಿ ನ್ಯಾಷನಲ್ ಕೋ–ಆಪರೇಟಿವ್ ಡೆವಲಪ್ ಮೆಂಟ್ ಕೋ–ಆಪರೇಷನ್ (ಎನ್‌ಸಿಡಿಸಿ) ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಯುಕ್ತ ಸಹಕಾರಿಯು ನಿಕಟ ಸಂಪರ್ಕ ಹೊಂದಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ವಿವಿಧ ಇಲಾಖೆಗಳೊಂದಿಗೆ ಸಮನ್ವಯ: ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆ, ಸಹಕಾರ ಚುನಾವಣಾ ಪ್ರಾಧಿಕಾರ, ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ನಿರ್ವಹಣೆಗಾಗಿ ಸಕ್ಷಮ ಪ್ರಾಧಿಕಾರ ನೇಮಕ ಮಾಡುವ ಕಂದಾಯ ಇಲಾಖೆ, ಸಿಐಡಿ ಸೇ–ರಿದಂತೆ ಇತರೇ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಅಗತ್ಯ ಮಾಹಿತಿಯನ್ನು ಒದಗಿಸುವ ಹಾಗೂ ಪಡೆಯುವ ಕಾರ್ಯವನ್ನು ನಡೆಸಲಾಗುತ್ತಿದೆ.

**ಸೌಹಾರ್ದ ಸಹಕಾರಿಗಳ ನೋಂದಣಿ ವಿವರ :** 2024–25ನೇ ಸಾಲಿನಲ್ಲಿ ಒಟ್ಟು 280 ಸೌಹಾರ್ದ ಸಹಕಾರಿಗಳು ನೂತನವಾಗಿ ನೋಂದಣಿಗೊಂಡಿರುತ್ತದೆ.

**ಇ–ಸ್ಟಾಂಪಿಂಗ್ ಮಾಹಿತಿ :** 2024–25ರ ವರ್ಷಾಂತ್ಯದಂತೆ ಒಟ್ಟು 1704, ಸೌಹಾರ್ದ ಕ್ಷೇತ್ರದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿವೆ. 29 ಎಸಿಸಿಗಳು ಸ್ವ–ಇಚ್ಛೆಯಿಂದ ಇ–ಸ್ಟಾಂಪಿಂಗ್ ಕೇಂದ್ರಗಳನ್ನು ಇ–ಸ್ಟಾಂಪಿಂಗ್ ಕೇಂದ್ರಗಳನ್ನು ಸ್ಥಗಿತಗೊಳಿಸಿರುತ್ತವೆ.

**ಸೌಹಾರ್ದ ದಾವಾ ಪಂಚಾಯ್ತಿ ನ್ಯಾಯಾಲಯದ ಪ್ರಕರಣಗಳ ವಿವರ :** 2024–25ನೇ ಸಾಲಿನಲ್ಲಿ ಹೊಸದಾಗಿ 5170 ದಾವಾ ಪ್ರಕರಣಗಳು ದಾಖಲಾಗಿವೆ. 2024–25ನೇ ಸಾಲಿನಲ್ಲಿ ಒಟ್ಟು 9500 ದಾವಾ ಪ್ರಕರಣಗಳು ಇತ್ಯರ್ಥಗೊಂಡಿವೆ. 2024–25ರ ವರ್ಷಾಂತ್ಯಕ್ಕೆ 2921 ದಾವಾ ಪ್ರಕರಣಗಳು ಬಾಕಿ ಇರುತ್ತವೆ.

**ಸೌಹಾರ್ದ ಸಹಕಾರಿಗಳ ಬೇಟಿ :** 2024–25ನೇ ಸಾಲಿನಲ್ಲಿ ಒಟ್ಟು 3596 ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಾಗಿರುತ್ತದೆ.

**ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು, ಸಲಹೆ ಮತ್ತು ಮಾರ್ಗದರ್ಶನ :** 2024–25ನೇ ಸಾಲಿನಲ್ಲಿ ಕೇಂದ್ರ ಕಛೇರಿಯಿಂದ 83 ಹಾಗೂ ಪ್ರಾಂತೀಯ ಕಛೇರಿಯಿಂದ 127 ಹಾಗೂ ಪ್ರಾಂತೀಯ ಕಛೇರಿಯಿಂದ 254 ಒಟ್ಟು 381 ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶನ ನೀಡಲಾಗಿರುತ್ತದೆ.

**ಪರಿವೀಕ್ಷಣೆ :** 2024–25ನೇ ಸಾಲಿನಲ್ಲಿ ಕೇಂದ್ರ ಕಛೇರಿಯಿಂದ 22 ಹಾಗೂ ಪ್ರಾಂತೀಯ ಕಛೇರಿಗಳಿಂದ 48 ಪರಿವೀಕ್ಷಣೆಯನ್ನು ಒಟ್ಟು 70 ಸಹಖಾರಿಗಳ ಪರಿವೀಕ್ಷಣೆ ನಡೆಸಲಾಗಿದೆ.

**ಶಾಖಾ ಅನುಮತಿ :** 2024–25ನೇ ಸಾಲಿನಲ್ಲಿ ಒಟ್ಟು 134 ಸಹಕಾ–ರಿಗಳಿಮದ 330 ಶಾಖೆಗಳನ್ನು ಆರಂಭಿಸಲು ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು ಅದರಲ್ಲಿ 173 ಶಾಖೆಗಳು ಅನುಮೋದನೆಗೊಂಡಿರುತ್ತದೆ. ಮತ್ತು 157 ಶಾಖೆಗಳ ಪ್ರಸ್ತಾವನೆಯನ್ನು ನಿರಾಕರಿಸಲಾಗಿರುತ್ತದೆ.

**ಸಮಾಪನೆ ಮತ್ತು ನೋಂದಣಿ ರದ್ದತಿ :** 76 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದತಿಯಾಗಿರುತ್ತದೆ.

**ವಿಶೇಷಾಧಿಕಾರಿಗಳ ನೇಮಕ :** 2024–25ನೇ ಸಾಲಿನಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

**ಟಾಸ್ಕ್ ಫೋರ್ಸ್ ಕಾರ್ಯ ಚಟುವಟಿಕೆ :** ಟಾಸ್ಕ್ ಫೋರ್ಸ್ ವಿಭಾಗದ ನಿರಂತರ ಪ್ರಯತ್ನದಿಂದ 19 ಸೌಹಾರ್ದ ಸಹಕಾರಿಗಳಿಗೆ ರಾಜ್ಯ ಸರ್ಕಾರವು ಕೆಪಿಐಡಿ ಕಾಯ್ದೆ ಪ್ರಾಧಿಕಾರವನ್ನು ನೇಮಕ ಮಾಡಿರುತ್ತದೆ. ಸಂಯುಕ್ತ ಸಹಕಾರಿಯು ಕಾಯ್ದೆ/ನಿಯಮ ಹಾಗೂ ಠೇವಣಿ ಹಣ ಮರುಪಾವತಿಸಿದ 15 ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

| ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಅಂಕಿ ಅಂಶಗಳು | |
|---|---|
| ಈ ಕೆಳಗಿನ ಅಂಕಿ ಅಂಶಗಳು ದಿನಾಂಕ 31–03–2025 ರಂತೆ ಇರುವ ಅಂದಾಜು ಅಂಕಿ–ಅಂಶಗಳಾಗಿರುತ್ತವೆ. | |
| ಸೌಹಾರ್ದ ಸಹಕಾರಿಗಳ ಸಂಖ್ಯೆ | 6500 |
| ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ | 1704 |
| ಶೇರು ಬಂಡವಾಳ ರೂ. | 1630 ಕೋಟಿ |
| ಕಾಯ್ದಿಟ್ಟ ನಿಧಿಗಳು ರೂ. | 3992 ಕೋಟಿ |
| ಠೇವಣಿಗಳು ರೂ. | 44,793 ಕೋಟಿ |
| ಪಡೆದ ಸಾಲ ರೂ | 568 ಕೋಟಿ |
| ನೀಡಿದ ಸಾಲ ರೂ. | 35,747 ಕೋಟಿ |
| ದುಡಿಯುವ ಬಂಡವಾಳ ರೂ. | 51,064 ಕೋಟಿ |
| ಲಾಭ ರೂ. | 735 ಕೋಟಿ |
| ಸದಸ್ಯರ ಸಂಖ್ಯೆ | 75 ಲಕ್ಷ |
| ಉದ್ಯೋಗದಲ್ಲಿರುವವರು | 1,00,000 |

# ಜಾಗತಿಕ ಸನ್ನಿವೇಶದಲ್ಲಿ ಸಹಕಾರ ಚಳವಳಿ

# (Cooperatives in Global Scenario)

## "ವಿಭಜನೆಯ ಹನಿಗಳು ಮಾಯವಾಗುತ್ತವೆ, ಸಹಕಾರದ ಹನಿಗಳು ಸಮುದ್ರವಾಗುತ್ತವೆ."

## ಸಹಕಾರ ಸಂಸ್ಥೆಗಳ ಸಾಧನೆಗಳು, ಅವಕಾಶಗಳು ಮತ್ತು ಸವಾಲುಗಳು - ಯುವಕರ ಪಾತ್ರ

– ಅನುವಾದ ಶ್ರೀಮತಿ ಶೋಭ ಆರ್, ಸಹ ಪ್ರಧಾನ ವ್ಯವಸ್ಥಾಪಕಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

### ಹಿನ್ನೆಲೆ (Backdrop)

- ಬಂಡವಾಳಶಾಹಿ ಮತ್ತು ಸಮಾಜವಾದದ ತೀವ್ರ ಪರಿಣಾಮಗಳಿಂದಾಗಿ ಸಹಕಾರಿ ಚಳುವಳಿ ಮೂರನೇ ವಲಯವಾಗಿ ಹೊರಹೊಮ್ಮಿತು.
- "ಸಹಕಾರ" ಎಂಬ ಪದವು "ಒಟ್ಟಾಗಿ ವಾಸಿಸುವುದು ಮತ್ತು ಒಟ್ಟಾಗಿ ಕೆಲಸ ಮಾಡುವುದು" ಎಂಬ ತತ್ವವನ್ನು ಸೂಚಿಸುತ್ತದೆ; ಇದು ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ಫಲವಾಗಿದೆ.
- ರಾಬರ್ಟ್ ಓವನ್ (Robert Owen) ಅವರನ್ನು ಸಹಕಾರ ಚಳವಳಿಯ ಪಿತಾಮಹ ಎಂದು ಕರೆಯಲಾಗುತ್ತದೆ. ಅವರು ತಮ್ಮ "ರಿಪೋರ್ಟ್ ಆನ್ ದ ಪೂರ್ (Report on the Poor)" ಕೃತಿಯಲ್ಲಿ ಸಹಕಾರದ ಆರ್ಶಗಳನ್ನು ಪ್ರಸ್ತಾಪಿಸಿದರು.
- 1844ರಲ್ಲಿ, ಇಂಗ್ಲೆಂಡಿನ ರೋಚ್ಡೇಲ್ ಪಟ್ಟಣದಲ್ಲಿ 28 ಜನ ನೇಕಾರರು ಚಾರ್ಟಿಸ್ಟ್ ಸಭಾಂಗಣದಲ್ಲಿ ಸೇರಿ, ಪ್ರಾಥಮಿಕ ಬಂಡವಾಳ ರ28 ಪೌಂಡ್‌ಗಳೊಂದಿಗೆ ಮೊದಲ ಗ್ರಾಹಕ ಸಹಕಾರ ಸಂಸ್ಥೆ "ರೋಚ್ಡೇಲ್ ಈಕ್ವಿಟೇಬಲ್ ಪಯನಿರ್ಸ್ ಸೊಸೈಟಿ (Rochdale Equitable Pioneers Society)"ಯನ್ನು ಸ್ಥಾಪಿಸಿದರು. ಈ ಚಳುವಳಿಗೆ ರಾಬರ್ಟ್ ಓವನ್ ಅವರ ಆದರ್ಶಗಳು ಪ್ರೇರಣೆಯಾಗಿದ್ದವು.
- ಸಹಕಾರ ಸಂಸ್ಥೆ ಎಂದರೆ — ಸೀಮಿತ ಸಂಪನ್ಮೂಲಗಳನ್ನು ಹೊಂದಿರುವ ಸದಸ್ಯರು ಒಟ್ಟಾಗಿ ಸೇರಿ, ಸಾಮೂಹಿಕವಾಗಿ ಆರ್ಥಿಕ ಗುರಿಗಳನ್ನು ಸಾಧಿಸುವ ಸಂಘಟನೆಯಾಗಿದೆ.
- ಸಹಕಾರ ಚಳುವಳಿಯ ಮೂಲ ತತ್ವಗಳು — ಪರಸ್ಪರ ಸಹಾಯ (Mutual Help), ಸಾಮೂಹಿಕ ವಾಣಿಜ್ಯ (Collective Bargaining), ಮತ್ತು ಒಬ್ಬರಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬನು (Each for All, All for Each) ಎಂಬುದಾಗಿದೆ.

### ಮೂಲ ಮೌಲ್ಯಗಳು (Basic Values)

- ಸ್ವಸಹಾಯ (Self-help)
- ಸ್ವ–ಜವಾಬ್ದಾರಿ (Self-responsibility)
- ಪ್ರಜಾಸತ್ತಾತ್ಮಕತೆ (Democracy)
- ಸಮಾನತೆ, ಸಮಾನಾವಕಾಶ ಮತ್ತು ಸಹಕಾರ (Equality, Equity, and Solidarity)

### ತತ್ವಗಳು (Principles)

- ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ (Voluntary and open membership)
- ಪ್ರಜಾಸತ್ತಾತ್ಮಕ ಸದಸ್ಯರ ನಿಯಂತ್ರಣ (Democratic member control)
- ಸದಸ್ಯರ ಆರ್ಥಿಕ ಪಾಲ್ಗೊಳ್ಳುವಿಕೆ (Member economic participation)
- ಸ್ವಾಯತ್ತತೆ ಮತ್ತು ಸ್ವತಂತ್ರತೆ (Autonomy and independence)
- ಶಿಕ್ಷಣ, ತರಬೇತಿ ಮತ್ತು ಪ್ರಚಾರ (Education, training and publicity)
- ಸಹಕಾರಗಳ ನಡುವೆ ಸಹಕಾರ (Cooperation among cooperatives)
- ಸಾಮಾಜಿಕ ಕಳಕಳಿ (Concern for community)

### ಜಾಗತಿಕ ಸನ್ನಿವೇಶ – ಸಾಧನೆಗಳು (Global Scenario – Achievements)

- ಸಹಕಾರ ಚಳುವಳಿ ವಿಶ್ವದಾದ್ಯಂತ 100ಕ್ಕೂ ಹೆಚ್ಚು ದೇಶಗಳಲ್ಲಿ 1.4 ಮಿಲಿಯನ್ (14 ಲಕ್ಷ) ಸಹಕಾರ ಸಂಸ್ಥೆಗಳನ್ನು ಒಳಗೊಂಡಿದ್ದು, ಒಟ್ಟು 1 ಬಿಲಿಯನ್ (100 ಕೋಟಿ) ಜನರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿದೆ. ಈ ಸಹಕಾರ ಸಂಸ್ಥೆಗಳು ಸುಮಾರು 100 ಮಿಲಿಯನ್ (10 ಕೋಟಿ) ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತಿವೆ.
- ಅಮೆರಿಕಾದಲ್ಲಿ (USA) ಸುಮಾರು 30,000 ಸಹಕಾರ ಸಂಸ್ಥೆಗಳು ಇದ್ದು, 100 ಮಿಲಿಯನ್ (10 ಕೋಟಿ) ಸದಸ್ಯರು 73,000 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲಿನ ರೈತರ ಉತ್ಪನ್ನಗಳ ಸುಮಾರು 30% ಉತ್ಪಾದನೆ 3,400 ರೈತ ಸಹಕಾರ ಸಂಘಗಳ ಮೂಲಕ ಮಾರುಕಟ್ಟೆಗೆ ಬರುತ್ತದೆ.
- ಚೀನಾದಲ್ಲಿ ಸುಮಾರು 80,000 ಸಹಕಾರ ಸಂಸ್ಥೆಗಳು ಇದ್ದು, 180 ಮಿಲಿಯನ್ (18 ಕೋಟಿ) ಸದಸ್ಯರನ್ನು ಒಳಗೊಂಡಿವೆ.
- ಭಾರತವು ವಿಶ್ವದ ಅತಿ ದೊಡ್ಡ ಸಹಕಾರ ಚಳವಳಿಯ ದೇಶ, ಸುಮಾರು 6,00,000 ಸಹಕಾರ ಸಂಸ್ಥೆಗಳು ಹಾಗೂ 250 ಮಿಲಿಯನ್ (25 ಕೋಟಿ) ಸದಸ್ಯರನ್ನು ಹೊಂದಿರುವ ಮುಂಚೂಣಿಯಲ್ಲಿದೆ.
- ವಿಶ್ವದ ವಿವಿಧ ಖಂಡಗಳಲ್ಲಿ ಸಹಕಾರ ಸಂಸ್ಥೆಗಳ ಪ್ರಮುಖ ಕ್ಷೇತ್ರಗಳು (Key Sectors of Cooperatives Globally):

| ಖಂಡ | ಮುಖ್ಯ ಕ್ಷೇತ್ರಗಳು |
|---|---|
| ಯುರೋಪ್ | ಕೃಷಿ, ಗ್ರಾಹಕ, ಸಾಲ ಮತ್ತು ಬ್ಯಾಂಕಿಂಗ್ |
| ಅಮೆರಿಕಾ | ಕೃಷಿ, ಸಾಲ, ಗ್ರಾಹಕ ಸೇವೆಗಳು |
| ಆಫ್ರಿಕಾ | ಕೃಷಿ, ಸಾಲ ಮತ್ತು ಬ್ಯಾಂಕಿಂಗ್, ವಸತಿ, ಹಾಲು, ಕಲೆಗಾರರು |

| | |
|---|---|
| ಏಶಿಯಾ–ಪೆಸಿಫಿಕ್ | ಕೃಷಿ, ಸಾಲ ಮತ್ತು ಬ್ಯಾಂಕಿಂಗ್, ಹಾಲು, ಮೀನುಗಾರಿಕೆ, ಬಟ್ಟೆ, ಆರೋಗ್ಯ, ಕಲೆಗಾರರು |

- ICA ವಿಶ್ವದ 300 ಯಶಸ್ವಿ ಸಹಕಾರ ಸಂಸ್ಥೆಗಳನ್ನು ಅಧ್ಯಯನ ಮಾಡಿ, ಅವುಗಳ ಯಶಸ್ಸಿನ ಪ್ರಮುಖ ಕಾರಣಗಳನ್ನು ಗುರುತಿಸಿದೆ:

✓ ಜಾಗೃತ ಮತ್ತು ಸಕ್ರಿಯ ಸದಸ್ಯತ್ವ (Enlightened membership)

✓ ವೃತ್ತಿಪರವಾಗಿ ಅರ್ಹ ನಿರ್ವಹಣೆ (Professionally qualified management)

✓ ನೈತಿಕ ಆಡಳಿತ (Ethical governance)

- 300 ಜಾಗತಿಕ ಸಹಕಾರ ಸಂಸ್ಥೆಗಳ ಒಟ್ಟು ಆದಾಯವು 1 ಟ್ರಿಲಿಯನ್ ಅಮೆರಿಕನ್ ಡಾಲರ್ (ಸುಮಾರು ₹50 ಲಕ್ಷ ಕೋಟಿ) ಆಗಿದೆ.
- ವಿಶ್ವದ ಅತಿ ದೊಡ್ಡ ಬ್ಯಾಂಕುಗಳು ಸಹಕಾರ ಬ್ಯಾಂಕುಗಳಾಗಿವೆ. ( ಫ್ರಾನ್ಸ್, ಹಾಲೆಂಡ್ ಮತ್ತು ಜಪಾನ್)
- ಜಾಗತಿಕ ಮಟ್ಟದ 300 ಸಹಕಾರ ಸಂಸ್ಥೆಗಳಲ್ಲಿ 28 ಸಂಸ್ಥೆಗಳು ಏಷ್ಯಾ–ಪೆಸಿಫಿಕ್, ಜಪಾನ್ – 14, ಆಸ್ಟ್ರೇಲಿಯಾ – 3, ನ್ಯೂಜಿಲ್ಯಾಂಡ್ – 2, ಕೊರಿಯಾ – 2, ಸಿಂಗಾಪುರ್ – 1, ಚೀನಾ – 1, ಭಾರತ – 4 (IFFCO, AMUL, NAFED, MARKFED, AP)
- ಸಹಕಾರ ಸಂಸ್ಥೆಗಳು ವಿಶ್ವದಾದ್ಯಂತ ಮಾರುಕಟ್ಟೆ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನ ಹೊಂದಿವೆ:

– ನಾರ್ವೆ: ಹಾಲಿನ ಉತ್ಪಾದನೆಯ 99% ಸಹಕಾರಿ ಸಂಸ್ಥೆಗಳ ಮೂಲಕ

– ಹಾಲೆಂಡ್: ಡಚ್ ಹೂಗಳ 95% ಸಹಕಾರಿ ಸಂಸ್ಥೆಗಳ ಮೂಲಕ ಮಾರಾಟ

– ಸ್ವಿಟ್ಜರ್ಲ್ಯಾಂಡ್: ವಿಶ್ವದ ಎರಡನೇ ಅತಿ ದೊಡ್ಡ ಸಹಕಾರಿ ಉದ್ಯೋಗದಾತ

– ಇಸ್ರೇಲ್: ಜಗತ್ತಿನ ಅತಿ ದೊಡ್ಡ 5ನೇ ಹನಿ ನೀರಾವರಿ (drip irrigation) ಸಾಧನ ತಯಾರಕರು

– ಮಲೇಶಿಯಾ: ಸಹಕಾರಿ ಶಾಲೆಗಳ ಜಾಲ

– ಆಸ್ಟ್ರೇಲಿಯಾ: ಸಂಗೀತ ಸಹಕಾರಿ ಸಂಘಗಳು

– ಥೈಲ್ಯಾಂಡ್: ಪರಿಸರ ಪ್ರವಾಸೋದ್ಯಮ ಸಹಕಾರಿ ಸಂಘಗಳು

– ಭಾರತ: ಹಾಲು ಮತ್ತು ಸೂಪರ್ ಸಹಕಾರಿ ಸಂಸ್ಥೆಗಳು

– ಚೀನಾ: ಗ್ರಾಮೀಣ ಆರ್ಥಿಕತೆಯು ಸಹಕಾರಿ ಸಂಸ್ಥೆಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿದೆ

**ಅವಕಾಶಗಳು (Opportunities)**

- ಸಹಕಾರಿ ಸಂಸ್ಥೆಗಳು ಗ್ರಾಮೀಣ ಬಡವರ ಸಬಲೀಕರಣದ ಪ್ರಮುಖ ಕೀಲಿಕೈಯಾಗಿವೆ. ಸಹಕಾರಿ ಆಸ್ಪತ್ರೆಗಳಲ್ಲಿ ಮಗುವಿನ ಜನನದಿಂದ ಹಿಡಿದು, ಸಮಾಜದ ಸಂಪೂರ್ಣ ಸಾಮಾಜಿಕ–ಆರ್ಥಿಕ ರಚನೆಯು ಸಹಕಾರದ ತತ್ವಶಾಸ್ತ್ರವನ್ನು ಆಧರಿಸಿದೆ– ಮರಣ ವಿಧಿವಿಧಾನಗಳನ್ನು ಸಹ ನಿರ್ವಹಿಸುತ್ತದೆ.
- ಸಹಕಾರಿ ಸಂಸ್ಥೆಗಳು ಯಾವುದೇ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

– ಹಾಲು ಸಹಕಾರಿ ಸಂಸ್ಥೆಗಳು (ಗುಜರಾತ್, ಕರ್ನಾಟಕದಂತೆ)

– ನೀರಾವರಿ ಸಹಕಾರಿ ಸಂಸ್ಥೆಗಳು – (ಮಹಾರಾಷ್ಟ್ರದಂತೆ)

– ತಂತ್ರಜ್ಞಾನ ಉನ್ನತೀಕರಣ – (ಕುಶಲಕರ್ಮಿಗಳು, ಜೈವಿಕ ರಸಗೊಬ್ಬರ, ಕೃಷಿ ಉಪಕರಣಗಳು, ಬಯೋಗ್ಯಾಸ್ ಇತ್ಯಾದಿ)

– ನೀರು ಬಳಕೆದಾರರ ಸಹಕಾರಿ ಸಂಸ್ಥೆಗಳು –(ಕರ್ನಾಟಕ ದಂತೆ)

**ಮುಖ್ಯ ಹಸ್ತಕ್ಷೇಪದ ಕ್ಷೇತ್ರಗಳು (Major Areas of Interventions):**

- ಸಹಕಾರಿ ಸಾಲ (Cooperative Credit)
- ಸಹಕಾರಿ ಮಾರುಕಟ್ಟೆ (Cooperative Marketing)
- ಸಹಕಾರಿ ಸಂಸ್ಕರಣೆ (Cooperative Processing)
- ಸಹಕಾರಿ ಸಂಗ್ರಹಣೆ (Cooperative Storage)
- ಸಹಕಾರಿ ಕೃಷಿ (Cooperative Farming)
- ಗ್ರಾಹಕ ಸಹಕಾರಿ ಸಂಸ್ಥೆಗಳು (Consumer Cooperatives)
- ವಸತಿ ಸಹಕಾರಿ ಸಂಸ್ಥೆಗಳು (Housing Cooperatives)
- ಕಾರ್ಮಿಕ ಮತ್ತು ನಿರ್ಮಾಣ ಸಹಕಾರಿ ಸಂಸ್ಥೆಗಳು (Labour & Construction Cooperatives)
- ಮೀನುಗಾರರ ಸಹಕಾರಿ ಸಂಸ್ಥೆಗಳು (Fishermen Cooperatives)
- ಗ್ರಾಮೀಣ ವಿದ್ಯುತ್ ಸಹಕಾರಿ ಸಂಸ್ಥೆಗಳು (Rural Electric Cooperatives)
- ಸಹಕಾರಿ ಆಸ್ಪತ್ರೆಗಳು (Cooperative Hospitals)
- ಸಹಕಾರಿ ಶಿಕ್ಷಣ ಸಂಸ್ಥೆಗಳು (Cooperative Educational Institutions)

**ಉಪಯುಕ್ತ ಸಹಕಾರಿ ಸಂಸ್ಥೆಗಳು (Utility Cooperatives)**

- ಇಂತಹ ಸಂಸ್ಥೆಗಳು ನೀರು, ವಿದ್ಯುತ್ ಮತ್ತು ದೂರಸಂಪರ್ಕ ಸೇವೆಗಳನ್ನು ತಮ್ಮ ಸದಸ್ಯರಿಗೆ ಒದಗಿಸುತ್ತವೆ.

**ವಿದ್ಯುತ್ ಸಂಕಷ್ಟ (Power Crisis)**

- ಭಾರತವು ವಿದ್ಯುತ್ ಉತ್ಪಾದನೆಯಲ್ಲಿ 11ನೇ ಅತಿದೊಡ್ಡ ದೇಶ, ಆದರೆ ವಿದ್ಯುತ್ ಬಳಕೆಯಲ್ಲಿ 6ನೇ ಅತಿದೊಡ್ಡ ದೇಶವಾಗಿದೆ.
- ಭಾರತದಲ್ಲಿ ಸುಮಾರು 40 ಕೋಟಿ ಜನರಿಗೆ ವಿದ್ಯುತ್ ಸೌಲಭ್ಯ ಲಭ್ಯವಿಲ್ಲ.
- ಈಗಾಗಲೇ ಸುಮಾರು 5,00,000 ಗ್ರಾಮಗಳು ವಿದ್ಯುದ್ದೀಕರಣಗೊಳಿಸಲ್ಪಟ್ಟಿವೆ, ಆದರೆ ಇನ್ನೂ 1,00,000 ಗ್ರಾಮಗಳು ವಿದ್ಯುದ್ದೀಕರಣಗೊಳಿಸಲು ಬಾಕಿ ಇರುತ್ತದೆ.
- ಆದ್ದರಿಂದ, ವಿದ್ಯುತ್ ಉತ್ಪಾದನೆಯ ಗುರಿಯನ್ನು ಸಾಧಿಸಲು ಸಹಕಾರಿ ಸಂಸ್ಥೆಗಳಿಗೆ ಇದು ಒಂದು ಉತ್ತಮ ಅವಕಾಶವಾಗಿದೆ.
- ಅಮೆರಿಕಾ, ಜರ್ಮನಿ, ಶ್ರೀಲಂಕಾ ಮತ್ತು ಇಂಡೋನೇಷ್ಯಾಗಳಲ್ಲಿ ಸೌರ ಸಹಕಾರ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

✓ ಸಿಡ್ನಿ ಎನರ್ಜಿ ಕೋ ಆಪರೇಟಿವ್ಸ್ – ಆಸ್ಟ್ರೇಲಿಯಾ

✓ ಗ್ರೇಟರ್ ರಿವರ್ ಎನರ್ಜಿ ಕೋಆಪರೇಟಿವ್ಸ್ – ಅಮೆರಿಕಾ

✓ ಮೌಂಟ್ ಪ್ಲೀಸೆಂಟ್ ಸೌರ ಕೋಆಪರೇಟಿವ್ಸ್ – ಅಮೆರಿಕಾ

✓ ಗಾಳಿ ಶಕ್ತಿ ಸಹಕಾರ ಸಂಸ್ಥೆಗಳು – ಅಮೆರಿಕಾ, ಜರ್ಮನಿ, ನೆದರ್ಲ್ಯಾಂಡ್ಸ್, ಡೆನ್ಮಾರ್ಕ್

✓ ಡೆನ್ಮಾರ್ಕ್ನ ವಿಶ್ವದ ಅತಿದೊಡ್ಡ ಸಮುದ್ರತೀರ ಗಾಳಿ ಶಕ್ತಿ ಯೋಜನೆ,

ಸಹಕಾರ ಮಾದರಿಯಲ್ಲಿ 1,00,000 ಸದಸ್ಯರೊಂದಿಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

**ಸಹಕಾರಿ ಸಂಸ್ಥೆಗಳ ಮುಂದೆ ಇರುವ ಸವಾಲುಗಳು (Challenges before Cooperatives)**

("ವೈಯಕ್ತಿಕವಾಗಿ ನಾವು ಒಂದು ಹನಿ, ಒಟ್ಟಾಗಿ ನಾವು ಒಂದು ಸಾಗರ")

- ಬಂಡವಾಳದ ಆಧಾರವನ್ನು ಬಲಪಡಿಸುವುದು (Strengthening of capital base)
- ಉತ್ತಮ ಹಣಕಾಸು ನಿರ್ವಹಣೆ (Sound financial management)
- ಜಾಗೃತಿ ಮೂಡಿಸುವುದು (Creating awareness)
- ನೈತಿಕ ನಾಯಕತ್ವ (Ethical leadership)
- ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ (Democratic functioning)
- ರಾಜಕೀಯ ಹಸ್ತಕ್ಷೇಪ (Political intervention)
- ಹೊಣೆಗಾರಿಕೆ ಮತ್ತು ಉತ್ತರದಾಯಕತೆ (Accountability)
- ಪರಿಣಾಮಕಾರಿ ಆಡಳಿತ (Effective governance)
- ವೃತ್ತಿಪರ ನಿರ್ವಹಣೆ (Professional management)
- ಗುಣಮಟ್ಟದ ಮಾನವ ಸಂಪನ್ಮೂಲ (Qualitative human resources)
- ಸಮರ್ಪಕ ವ್ಯವಸ್ಥೆಗಳು ಮತ್ತು ವಿಧಾನಗಳು (Systems and procedures)
- ವ್ಯವಹಾರದ ವೈವಿಧ್ಯೀಕರಣ (Business diversification)
- ತರಬೇತಿ (Training)
- ಲೆಕ್ಕಪರಿಶೋಧನೆ (Audit)

**ಸಹಕಾರ ಚಳವಳಿಯಲ್ಲಿ ಯುವಕರ ಪಾತ್ರ (Role of Youths in Cooperation)**

- ಸಹಕಾರ ಚಳವಳಿಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಮಹತ್ವವನ್ನು ಮೊದಲ ಬಾರಿಗೆ 1945ರಲ್ಲಿ ಸಹಕಾರ ಯೋಜನಾ ಸಮಿತಿಯು ಒತ್ತಿ ಹೇಳಿತು.
- ಯುವಜನರಿಗೆ ಸಹಕಾರದಲ್ಲಿ ಶಿಕ್ಷಣ ನೀಡುವ ಸಲುವಾಗಿ, ರಾಜ್ಯ ಸರ್ಕಾರಗಳಿಗೆ ವಿವಿಧ ಸಂದರ್ಭಗಳಲ್ಲಿ ಕೆಳಗಿನ ಶಿಫಾರಸ್ಸುಗಳು ನೀಡಲ್ಪಟ್ಟವು –

– NCERT ಯಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಮಾಜ ಅಧ್ಯಯನ (Social Studies) ಪಠ್ಯಪುಸ್ತಕಗಳ ಮೂಲಕ ಸಹಕಾರದ ಸರಳ ಪಾಠಗಳ ಬೋಧನೆಯನ್ನು ಪರಿಚಯಿಸಬಹುದು.

– ಬಿಎ (ಅರ್ಥಶಾಸ್ತ್ರ), ಬಿಕಾಂ, ಕೃಷಿ ಕೋರ್ಸ್‌ಗಳು, ಗ್ರಾಮೀಣಾಭಿವೃದ್ಧಿ ಕೋರ್ಸ್‌ಗಳು, ಕಿರು ಸಾಲ (Micro-credit), ಸ್ವಸಹಾಯ ಸಂಘಗಳು (SHG), ಪರಿಸರ ವಿಜ್ಞಾನ ಇತ್ಯಾದಿ ಪಠ್ಯಕ್ರಮಗಳಲ್ಲಿ ಸಹಕಾರವನ್ನು ಐಚ್ಛಿಕ ವಿಷಯವಾಗಿ ಪರಿಚಯಿಸಬೇಕು.

– ಜೊತೆಗೆ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ಮತ್ತು ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ (Master's degree) ಪ್ರಾರಂಭಿಸಿ, ಸಹಕಾರ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಮತ್ತು ನೇಮಕಾತಿ ಬೆಂಬಲ ಒದಗಿಸಬೇಕು.

– ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಹಕಾರದ ಅಂಗಡಿಗಳು, ಕ್ಯಾಂಟೀನ್ಗಳು, ಕ್ರೆಡಿಟ್ ಸಹಕಾರ ಸಂಘಗಳು ಮುಂತಾದವುಗಳನ್ನು ಸಂಘಟಿಸಿ ಸಹಕಾರದ ಕಾರ್ಯಪದ್ಧತಿಯ ಪ್ರಾಯೋಗಿಕ ಅನುಭವ ನೀಡಬೇಕು.

– ಸಹಕಾರ ವಿಷಯವನ್ನು ಸರ್ಕಾರಿ ಸೇವಾ ಆಯೋಗ (Public Service Commission) ಪರೀಕ್ಷೆಯ ವಿಷಯವಾಗಿ ಸೇರಿಸಬೇಕು.

- 1960 ರಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಕೋಆಪರೇಟಿವ್ ಟ್ರೈನಿಂಗ್ (NCCT), ನವದೆಹಲಿಯು ವಿಶ್ವವಿದ್ಯಾಲಯ ವಿದ್ಯಾರ್ಥಿಗಳಲ್ಲಿ ಸಹಕಾರದ ಬಗ್ಗೆ ಆಸಕ್ತಿ ಮೂಡಿಸಲು ಚರ್ಚೆ ಮತ್ತು ಪ್ರಬಂಧ ಸ್ಪರ್ಧೆಗಳ ಯೋಜನೆ ಪ್ರಾರಂಭಿಸಿತು. ಈ ಸ್ಪರ್ಧೆಗಳು ದೇಶದಾದ್ಯಂತ ಜನಪ್ರಿಯತೆ ಪಡೆದಿವೆ, ಅನೇಕ ವಿಶ್ವವಿದ್ಯಾಲಯಗಳು ಸಿದ್ಧಗೊಂಡ ತಂಡಗಳೊಂದಿಗೆ ಭಾಗವಹಿಸುತ್ತಿವೆ

✓ ಚರ್ಚಾ ಸ್ಪರ್ಧೆಯ ಜೊತೆಗೆ, 1971 ರಿಂದ NCCT, ನವದೆಹಲಿಯು "ಸಹಕಾರ ಸಿಂಪೋಸಿಯಂ" (Symposium on Cooperation) ಎಂಬ ಸಹಕಾರದ ಕುರಿತು ವಿಚಾರ ಸಂಕಿರಣವನ್ನು ಸಹ ಆಯೋಜಿಸುತ್ತಿದೆ. ಈ ಚರ್ಚೆಗಳು, ಪ್ರಬಂಧ ಸ್ಪರ್ಧೆಗಳು ಮತ್ತು ವಿಚಾರ ಸಂಕಿರಣಗಳು ಯುವಕರಲ್ಲಿ ಸಹಕಾರದ ತತ್ವದ ಬಗ್ಗೆ ಚಿಂತನೆಗೆ ಪ್ರೇರಣೆ ನೀಡಿವೆ ಹಾಗೂ ಸಹಕಾರವನ್ನು ಉದ್ಯೋಗೋನ್ಮುಖ ವಿಷಯವನ್ನಾಗಿ ಪರಿಗಣಿಸುವಂತೆ ಮಾಡಿವೆ. ಇವುಗಳು ಈಗ ಹಿಂದಿ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಆಯೋಜಿಸಲಾಗುತ್ತಿವೆ.

✓ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಸದಸ್ಯತ್ವದೊಂದಿಗೆ ಸಹಕಾರ ಅಂಗಡಿಗಳನ್ನು ಸಂಘಟಿಸಬೇಕು. ಇಂತಹ ಅಂಗಡಿಗಳಲ್ಲಿ ಭಾಗವಹಿಸುವುದು ಸಹಭಾವನೆ, ಪರಸ್ಪರ ಸಹಾಯ ಮತ್ತು ಪ್ರಜಾಸತ್ತಾತ್ಮಕ ನಿರ್ವಹಣೆ ಬಗ್ಗೆ ಅರಿವು ಮೂಡಿಸುತ್ತದೆ. ಜೊತೆಗೆ, ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳು, ಪುಸ್ತಕಗಳು ಮುಂತಾದವುಗಳನ್ನು ಸಮರ್ಪಕ ಬೆಲೆಗೆ ಲಭ್ಯವಾಗುತ್ತದೆ. ಜಪಾನ್ನಲ್ಲಿ ನೂರಕ್ಕೂ ಹೆಚ್ಚು ಎಲ್ಲ ವಿಶ್ವವಿದ್ಯಾಲಯಗಳು ಇಂತಹ ಸಹಕಾರ ಅಂಗಡಿಗಳನ್ನು ಹೊಂದಿವೆ. ಈ ಅಂಗಡಿಗಳು ಪುಸ್ತಕಗಳು, ಉಪಕರಣಗಳು ಹಾಗೂ ಇತರ ವಸ್ತುಗಳನ್ನು ಆಮದು ಮಾಡಿ ಸದಸ್ಯರಿಗೆ ಸಮಂಜಸವಾದ ಬೆಲೆಗೆ ಮಾರಾಟ ಮಾಡುತ್ತವೆ. ಜಪಾನ್‌ನಲ್ಲಿ ಸಹಕಾರಿ ಅಂಗಡಿಗಳು ಮತ್ತು ಖಾಸಗಿ ಅಂಗಡಿಗಳ ನಡುವಿನ ಬೆಲೆ ವ್ಯತ್ಯಾಸವು ಶೇಕಡಾ 30% ರಿಂದ 40% ರವರೆಗೆ ಇರುತ್ತದೆ.

✓ ಭಾರತದಲ್ಲಿ ಶಿಕ್ಷಣದ ವೆಚ್ಚ ನಿರಂತರವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಸಹಕಾರಿ ಅಂಗಡಿಗಳನ್ನು ಸ್ಥಾಪಿಸುವುದರ ಮೂಲಕ ಸಹಕಾರ ಚಳುವಳಿಯನ್ನು ದೇಶಾದ್ಯಂತ ಒಂದು ಆಂದೋಲನವಾಗಿ ಪ್ರಾರಂಭಿಸಬೇಕು.

✓ **ಇನ್ನೊಂದು ಮಾತು (One Word More)**

ಸಹಕಾರ ಚಳವಳಿಯ ಚಕ್ರಗಳನ್ನು ಬಲಪಡಿಸುವುದಕ್ಕೆ ಯುವಕರ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಗತ್ಯ. ದೇಶದಾದ್ಯಂತ ಸಹಕಾರ ಸಂಘಗಳ ದೈನಂದಿನ ಕಾರ್ಯಗಳಲ್ಲಿ ಯುವಕರ ಭಾಗವಹಿಸುವಿಕೆಯನ್ನು ಪಠ್ಯಕ್ರಮದ ಒಂದು ಅಂಗವಾಗಿ ರೂಪಿಸಬೇಕು. ಯಾವುದೇ ದೇಶದ ಏಕೀಕರಣ ಮತ್ತು ಅಭಿವೃದ್ಧಿ ಸಹಕಾರ ಮಾದರಿಯ ಮೂಲಕವೇ ಸಾಧ್ಯ, ಮತ್ತು ಅದನ್ನು ಬಲಪಡಿಸಲು ಯುವಕರು ಮುಂದಾಳತ್ವ ಪಾತ್ರವಹಿಸಬೇಕು.

**72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂಗವಾಗಿ ರಾಷ್ಟ್ರೀಯ ಸಹಕಾರಿ ಯೂನಿಯನ್ ಕಳುಹಿಸಿರುವ ಮಾರ್ಗಸೂಚಿಯಂತೆ 7 ದಿನಗಳ 7 ವಿಷಯಗಳ ಬಗ್ಗೆ ತಜ್ಞರು ಬರೆದಿರುವ ಲೇಖನಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಲಾಗಿದೆ**

## 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಗಳಿಗೆ ಮಾರ್ಗಸೂಚಿಗಳು

## ಧ್ಯೇಯ :ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು

# Cooperatives as Vehicles for Atmanirbhar Bharat

**ಮೂಲ : ಎನ್‌ಸಿಯುಐ, ನವದೆಹಲಿ**

**ಅನುವಾದ : ಶ್ರೀ ಸಂತೋಷ ಹೆಚ್.ಜಿ., ಹಿರಿಯ ಸಹಾಯಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

**ಪರಿಚಯ:**

ಭಾರತೀಯ ಸಹಕಾರಿ ಚಳವಳಿಯ ಸರ್ವೋಚ್ಚ ಸಂಸ್ಥೆಯಾದ ರಾಷ್ಟ್ರೀಯ ಸಹಕಾರಿ ಒಕ್ಕೂಟ (NCUI) ದೇಶದಲ್ಲಿ ಸಹಕಾರಿ ಸಿದ್ಧಾಂತ ಮತ್ತು ಚೈತನ್ಯವನ್ನು ಪ್ರಚಾರ ಮಾಡಲು ಪ್ರತಿ ವರ್ಷ ನವೆಂಬರ್ 14 ರಿಂದ 20 ರವರೆಗೆ ಅಖಿಲ ಭಾರತ ಸಹಕಾರಿ ಸಪ್ತಾಹವನ್ನು ಆಚರಿಸುತ್ತದೆ ಮತ್ತು ಪ್ರಾಯೋಜಿಸುತ್ತದೆ. ಈ ವರ್ಷ ಭಾರತೀಯ ಸಹಕಾರಿ ಚಳವಳಿಯು ರಾಷ್ಟ್ರವ್ಯಾಪಿ 72ನೇ ಅಖಿಲ ಭಾರತ ಸಹಕಾರಿ ಸಪ್ತಾಹವನ್ನು ಆಚರಿಸುತ್ತಿದೆ. 07 ದಿನಗಳು ನಡೆಯುವ ಆಚರಣೆಯು ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಸ್ಪರ್ಧೆಗಳು ಮತ್ತು ವಿಚಾರ ಸಂಕಿರಣಗಳಂತಹ ವ್ಯಾಪಕ ಶ್ರೇಣಿಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ ಇವೆಲ್ಲವೂ ಸಾರ್ವಜನಿಕರಲ್ಲಿ ಸಹಕಾರಿ ಜಾಗೃತಿಯನ್ನು ಬೆಳೆಸುವ ಮತ್ತು ವಿವಿಧ ಹಂತಗಳಲ್ಲಿ ಸಹಕಾರಿ ಚಳುವಳಿಯನ್ನು ಬಲಪಡಿಸುವ ಗುರಿಯನ್ನು ಹೊಂದಿರುತ್ತದೆ. ಈ ಕಾರ್ಯಕ್ರಮಗಳು ಯಶಸ್ವಿನ ಕಥೆಗಳನ್ನು ಪ್ರದರ್ಶಿಸಲು, ಹೆಚ್ಚುತ್ತಿರುವ ಸ್ಪರ್ಧಾತ್ಮಕ ಆರ್ಥಿಕತೆಯಲ್ಲಿ ಉದಯೋನ್ಮುಖ ಸವಾಲುಗಳ ಕುರಿತು ಚರ್ಚಿಸಲು ಮತ್ತು ಸುಸ್ಥಿರ ಬೆಳವಣಿಗೆಗೆ ಕಾರ್ಯತಂತ್ರದ ಕ್ರಿಯಾ ಯೋಜನೆಗಳನ್ನು ರೂಪಿಸಲು ಅಮೂಲ್ಯವಾದ ಅವಕಾಶಗಳನ್ನು ಒದಗಿಸುತ್ತವೆ.

ರಾಜ್ಯಮಟ್ಟದ ಕಾರ್ಯಕ್ರಮಗಳಿಂದ ಹೊರಹೊಮ್ಮುವ ಶಿಫಾರಸ್ಸುಗಳು ಆಡಳಿತವನ್ನು ಸುಧಾರಿಸುವಲ್ಲಿ, ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಮತ್ತು ದೇಶಾದ್ಯಂತ ಸಹಕಾರಿ ಸಂಸ್ಥೆಗಳ ಒಟ್ಟಾರೆ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ನಿರೀಕ್ಷೆಯಿರುತ್ತದೆ.

2021 ರಲ್ಲಿ ಸ್ಥಾಪನೆಯಾದ ಸಹಕಾರ ಸಚಿವಾಲಯವು, ಭಾರತದಲ್ಲಿ ಸಹಕಾರಿ ಚಳುವಳಿಗೆ ಮೀಸಲಾದ ನೀತಿ ಮತ್ತು ಆಡಳಿತಾತ್ಮಕ ಚೌಕಟ್ಟನ್ನು ಒದಗಿಸುವ ಮೂಲಕ, ಸಹಕಾರಿ ಸಂಸ್ಥೆಗಳಿಗೆ 'ವ್ಯಾಪಾರ ಮಾಡುವ ಸುಲಭತೆ'ಯನ್ನು ಸುವ್ಯವಸ್ಥಿತಗೊಳಿಸುವ ಮೂಲಕ ಮತ್ತು 'ಸಹಕಾರ ಸೇ ಸಮೃದ್ಧಿ' (ಸಹಕಾರದ ಮೂಲಕ ಸಮೃದ್ಧಿ) ಎಂಬ ದೃಷ್ಟಿಕೋನವನ್ನು ಸಾಧಿಸಲು ಅವುಗಳ ಅಡಿಪಾಯವನ್ನು ಬಲಪಡಿಸುವ ಮೂಲಕ ಕೊಡುಗೆ ನೀಡುತ್ತದೆ. ಬಹು–ರಾಜ್ಯ ಸಹಕಾರಿ ಸಂಘಗಳ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಸಕ್ರಿಯಗೊಳಿಸುವುದು, ಗಣಕೀಕರಣದ ಮೂಲಕ ವಲಯವನ್ನು ಆಧುನೀಕರಿಸುವುದು ಮತ್ತು ಪ್ರಾಥಮಿಕ ಕೃಷಿ ಸಾಲ ಸಂಘಗಳನ್ನು (PACS) ಸಾಮಾನ್ಯ ಸೇವಾ ಕೇಂದ್ರಗಳಾಗಿ (CSCs) ಬಳಸಿಕೊಳ್ಳುವ ಮೂಲಕ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸುವುದು ಪ್ರಮುಖ ಕೊಡುಗೆಗಳಲ್ಲಿ ಸೇರಿವೆ.

ಮುಂದಿನ ದಶಕದಲ್ಲಿ ಸಹಕಾರಿ ಚಳುವಳಿಗೆ ಮಾರ್ಗದರ್ಶನ ನೀಡಲು, ಸಹಕಾರದ ಮೂಲಕ ಸಮೃದ್ಧಿಯನ್ನು ಸಾಧಿಸುವ ದೃಷ್ಟಿಕೋನದೊಂದಿಗೆ, ಇದು ಇತ್ತೀಚೆಗೆ ರಾಷ್ಟ್ರೀಯ ಸಹಕಾರ ನೀತಿ–2025 ಅನ್ನು ಸಹ ಪ್ರಾರಂಭಿಸಿದೆ. ಈ ವರ್ಷ, ಸಹಕಾರಿ ವಾರವನ್ನು "ಆತ್ಮ ನಿರ್ಭರ ಭಾರತಕ್ಕೆ ವಾಹನಗಳಾಗಿ ಸಹಕಾರಿಗಳು" ಎಂಬ ಥೀಮ್ (ಧ್ಯೇಯ) ದೊಂದಿಗೆ ಆಚರಿಸಲಾಗುತ್ತಿದೆ. ಈ ವಿಷಯವು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಸಹಕಾರಿಗಳ ಪ್ರಮುಖ ಪಾತ್ರವನ್ನು ಒತ್ತಿಹೇಳುತ್ತದೆ, ವಿಶೇಷವಾಗಿ ಕೃಷಿ, ಗ್ರಾಮೀಣ ಸಾಲ, ಸೂಕ್ಷ್ಮ ಉದ್ಯಮಗಳು ಮತ್ತು ಮಹಿಳಾ ಸಬಲೀಕರಣದಂತಹ ಕ್ಷೇತ್ರಗಳಲ್ಲಿ. ಸ್ಥಳೀಯ ಸಮುದಾಯಗಳನ್ನು ಸಬಲೀಕರಣಗೊಳಿಸಲು, ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸಲು ಮತ್ತು ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಲು ಸಹಕಾರಿಗಳು ಮೂಲಾಧಾರವಾಗಿ ಕಾರ್ಯನಿರ್ವಹಿಸುತ್ತವೆ.

ಆಡಳಿತ ಸಮಸ್ಯೆಗಳು, ಅಸಮರ್ಪಕ ವೃತ್ತಿಪರ ನಿರ್ವಹಣೆ ಮತ್ತು ರಾಜಕೀಯ ಹಸ್ತಕ್ಷೇಪದಂತಹ ಭಾರತದಲ್ಲಿ ಸಹಕಾರಿ ಚಳುವಳಿ ಎದುರಿಸುತ್ತಿರುವ ಸವಾಲುಗಳ ಹೊರತಾಗಿಯೂ, ಕಾರ್ಯತಂತ್ರದ ನೀತಿ ಮಧ್ಯಸ್ಥಿಕೆಗಳು, ಡಿಜಿಟಲ್ ರೂಪಾಂತರ ಮತ್ತು ಸಾಮರ್ಥ್ಯ–ನಿರ್ಮಾಣ ಉಪಕ್ರಮಗಳ ಮೂಲಕ ಪುನರುಜ್ಜೀವನಕ್ಕೆ ಅಪಾರ ಸಾಮರ್ಥ್ಯವಿದೆ. ಈ ಪ್ರಯತ್ನಗಳನ್ನು PM-KISAN, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM), ಮತ್ತು ಇತರ ಸಹಕಾರಿ ಅಭಿವೃದ್ಧಿ ಯೋಜನೆಗಳಂತಹ ಪ್ರಮುಖ ಸರ್ಕಾರಿ ಕಾರ್ಯಕ್ರಮಗಳೊಂದಿಗೆ ಜೋಡಿಸುವ ಮೂಲಕ ಮತ್ತುಬಹು–ಪಾಲುದಾರರ ಪಾಲುದಾರಿಕೆಗಳನ್ನು ಬೆಳೆಸುವ ಮೂಲಕ, ಸಹಕಾರಿಗಳು ಸಾಮಾಜಿಕ–ಆರ್ಥಿಕ ಪ್ರಗತಿಯ ಕ್ರಿಯಾತ್ಮಕ ಸಂಸ್ಥೆಗಳಾಗಿ ಹೊರಹೊಮ್ಮಬಹುದು.

ದೇಶವು ಸ್ವಾವಲಂಬಿ ಆರ್ಥಿಕತೆಯನ್ನು ನಿರ್ಮಿಸುವತ್ತ ಸಾಗುತ್ತಿರುವಾಗ, ಸಹಕಾರಿ ವಲಯವು ಆತ್ಮನಿರ್ಭರ ಭಾರತದ ಪರಿಕಲ್ಪನೆಯಲ್ಲಿ ಕಲ್ಪಿಸಲಾಗಿರುವ ಸಮಗ್ರ ಬೆಳವಣಿಗೆಯನ್ನು ಸಾಧಿಸುವಲ್ಲಿ, ಸಮಾನ ಸಂಪನ್ಮೂಲ ವಿತರಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಮತ್ತು ಸಾಮೂಹಿಕ ಸಮೃದ್ಧಿಯ ಮನೋಭಾವವನ್ನು ಬಲಪಡಿಸುವಲ್ಲಿ ಪರಿವರ್ತನಾತ್ಮಕ ಪಾತ್ರವನ್ನು ವಹಿಸಲು ಸಜ್ಜಾಗಿದೆ. 72ನೇ ಸಹಕಾರಿ ಸಪ್ತಾಹದ ಆಚರಣೆಯ ವಿಶಾಲ ಮಾರ್ಗಸೂಚಿಗಳನ್ನು ದಿನಾಂಕವಾರು ನಾಮಕರಣದ ಅಡಿಯಲ್ಲಿ ವಿವರಿಸಲಾಗಿದೆ. ಈ ಮಾರ್ಗಸೂಚಿಗಳ ಆಧಾರದ ಮೇಲೆ, ರಾಜ್ಯ ಸಹಕಾರಿ ಸಂಘಗಳು, ಜಿಲ್ಲಾ ಸಂಘಗಳು, ರಾಜ್ಯ ಮಟ್ಟದ ಸಹಕಾರಿ ಒಕ್ಕೂಟಗಳು, ಜೆಸಿಟಿಸಿಗಳು ಇತ್ಯಾದಿಗಳು ಸಹಕಾರಿ ಸಪ್ತಾಹವನ್ನು ಆಚರಿಸಲು ಸಮಗ್ರ ಯೋಜನೆಯನ್ನು ರೂಪಿಸಲಾಗಿದೆ.

# 14ನೇ ನವೆಂಬರ್ 2025
# ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು:
# Promoting Digitalisation to Enhance Operational Efficiency, Accountability and Transparency

– ಅನುವಾದ :ಶ್ರೀ ಶಿವಕುಮಾರ ಬಿರಾದಾರ, ಹಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

**ಪರಿಚಯ:**

ವೇಗವಾಗಿ ರೂಪಾಂತರಗೊಳ್ಳುತ್ತಿರುವ ತಂತ್ರಜ್ಞಾನ ಯುಗದಲ್ಲಿ, ಡಿಜಿಟಲೀಕರಣವು ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಪ್ರಮುಖ ವಾಹಕವಾಗಿ ಪರಿಣಮಿಸಿದೆ. ಸರ್ಕಾರದ ಸಂಸ್ಥೆಗಳಿಂದ ಸಹಕಾರ ಸಂಘಗಳು ಮತ್ತು ಖಾಸಗಿ ಉದ್ಯಮಗಳವರೆಗೆ, ಡಿಜಿಟಲ್ ಸಾಧನಗಳನ್ನು ಅಳವಡಿಸಿಕೊಳ್ಳುವುದು ಈಗ ಆಯ್ಕೆಯ ವಿಷಯವಲ್ಲ ಅದು ಪರಿಣಾಮಕಾರಿ ಆಡಳಿತ ಮತ್ತು ಶಾಶ್ವತ ಬೆಳವಣಿಗೆಯ ಅಗತ್ಯವಾಗಿದೆ. ಕೃತಕ ಬುದ್ಧಿಮತ್ತೆ (AI), ಯಂತ್ರ ಕಲಿಕೆ (ML), ಇಂಟರ್‌ನೆಟ್ ಆಫ್ ಥಿಂಗ್ಸ್ (IoT) ಮತ್ತು ಕ್ಲೌಡ್ ಕಂಪ್ಯೂಟಿಂಗ್ ಮುಂತಾದ ತಂತ್ರಜ್ಞಾನಗಳ ಸಂಯೋಜನೆಯು ಸಂಸ್ಥೆಗಳ ಕಾರ್ಯಪದ್ಧತಿ, ಸಂವಹನ ಮತ್ತು ಮೌಲ್ಯ ವಿತರಣೆಯಲ್ಲಿ ಕ್ರಾಂತಿಯನ್ನು ತಂದಿದೆ.

**1. ಡಿಜಿಟಲೀಕರಣದ ಮೂಲಕ ಕಾರ್ಯದಕ್ಷತೆಯನ್ನು ಹೆಚ್ಚಿಸುವುದು:**

ಡಿಜಿಟಲೀಕರಣವು ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸುವುದರ ಮೂಲಕ, ಕಾರ್ಯಪದ್ಧತಿಗಳನ್ನು ಸುಗಮಗೊಳಿಸುವುದರ ಜೊತೆಗೆ ಮಾನವೀಯ ಹಸ್ತಕ್ಷೇಪವನ್ನು ಕಡಿಮೆ ಮಾಡುವುದರ ಮೂಲಕ ಕಾರ್ಯದಕ್ಷತೆಯನ್ನು ಹೆಚ್ಚಿಸುತ್ತದೆ. ಇದು ಸಂಸ್ಥೆಗಳಿಗೆ ವೆಚ್ಚ ಕಡಿತಗೊಳಿಸಲು, ಉತ್ಪಾದಕತೆ ಹೆಚ್ಚಿಸಲು ಮತ್ತು ಡೇಟಾ ಆಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಸಂಪ್ರದಾಯಬದ್ಧ ವ್ಯವಸ್ಥೆಗಳನ್ನು ಡಿಜಿಟಲ್ ಕಾರ್ಯವಾಹಿಗಳಿಂದ ಬದಲಿಸುವುದರಿಂದ, ಸಂಸ್ಥೆಗಳು ಚುರುಕುತನ ಮತ್ತು ಸವಾಲುಗಳಿಗೆ ಪ್ರತಿಕ್ರಿಯಿಸಲು ಹೆಚ್ಚಿನ ಸಿದ್ಧತೆಯನ್ನು ಪಡೆಯುತ್ತವೆ.

**ಮುಖ್ಯ ಪ್ರಯೋಜನಗಳು:**

- ವೆಚ್ಚ ಕಡಿತ: ಕೈಯಿಂದ ಮಾಡುವ ಕೆಲಸಗಳ ಸ್ವಯಂಚಾಲಿತಗೊಳಿಸುವಿಕೆ ಮತ್ತು ಕ್ಲೌಡ್ ವ್ಯವಸ್ಥೆಗಳ ಅಳವಡಿಕೆ ನಿರ್ವಹಣಾ ಹಾಗೂ ಆಡಳಿತ ವೆಚ್ಚಗಳನ್ನು ಕಡಿತಗೊಳಿಸುತ್ತದೆ.
- ಉತ್ಪಾದಕತೆ ಹೆಚ್ಚಳ: ಸ್ವಯಂಚಾಲಿತ ವ್ಯವಸ್ಥೆಗಳು ಪುನರಾವರ್ತನೆಯಾಗುವ ಕೆಲಸಗಳನ್ನು ವೇಗವಾಗಿ ಮುಗಿಸಲು ಮತ್ತು ದೋಷಗಳನ್ನು ಕಡಿಮೆ ಮಾಡಲು ಸಹಕರಿಸುತ್ತವೆ.
- ಗುಣಮಟ್ಟದ ಸುಧಾರಣೆ: ಡಿಜಿಟಲ್ ಸಾಧನಗಳು ಖಚಿತತೆ ಮತ್ತು ಸಾಂದರ್ಭಿಕತೆಯನ್ನು ಖಾತ್ರಿಪಡಿಸುತ್ತವೆ.
- ಮಾಹಿತಿ ಆಧಾರಿತ ನಿರ್ಧಾರಗಳು: ಡೇಟಾ ವಿಶ್ಲೇಷಣೆ ತಕ್ಷಣದ ಒಳನೋಟಗಳನ್ನು ಒದಗಿಸಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿಸುತ್ತದೆ.
- ಅನ್ವಯಶೀಲತೆ: ಡಿಜಿಟಲ್ ವ್ಯವಸ್ಥೆಗಳು ಹೊಸ ಸವಾಲುಗಳಿಗೆ ವೇಗವಾಗಿ ಹೊಂದಿಕೊಳ್ಳಲು ಸಹಾಯ ಮಾಡುತ್ತವೆ.

**ಕಾರ್ಯಗತಗೊಳಿಸುವ ತಂತ್ರಗಳು:**

- ಸ್ವಯಂಚಾಲಿತ ತಂತ್ರಜ್ಞಾನದಲ್ಲಿ ಹೂಡಿಕೆ: RPA (Robotic Process Automation) ಮತ್ತು AI (Artificial Intelligence) ಬಳಸಿ ಆಡಳಿತ ಮತ್ತು ಕಾರ್ಯಾಚರಣಾ ಪ್ರಕ್ರಿಯೆಗಳನ್ನು ಸುಗಮಗೊಳಿಸಿ.
- ಕ್ಲೌಡ್ ಆಧಾರಿತ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಿ: ವಿಭಿನ್ನ ತಂಡಗಳ ನಡುವೆ ಸಹಕಾರವನ್ನು ಸುಲಭಗೊಳಿಸಿ.
- ಡೇಟಾ ವಿಶ್ಲೇಷಣೆಯನ್ನು ಬಳಸಿ: ಯಂತ್ರ ಕಲಿಕೆ ಬಳಸಿ ಸಂಪನ್ಮೂಲಗಳ ಬಳಕೆಯನ್ನು ಆಪ್ಟಿಮೈಸ್ ಮಾಡಿ.
- IoT (Internet of Things) ಮತ್ತು ಹೊಸ ತಂತ್ರಜ್ಞಾನಗಳ ಪ್ರಯೋಜನ ಪಡೆದುಕೊಳ್ಳಿ: ನೈಜ ಕಾಲದ ಡೇಟಾ ಸಂಗ್ರಹಣೆ ಮತ್ತು ಸಂಪರ್ಕತೆಯನ್ನು ಸಾಧಿಸಿ.
- ಸಹಕಾರವನ್ನು ಉತ್ತೇಜಿಸಿ: ಡಿಜಿಟಲ್ ವೇದಿಕೆಗಳ ಮೂಲಕ ಪಾಲುದಾರರ ನಡುವಿನ ಸಂವಹನವನ್ನು ಬಲಪಡಿಸಿ.

**2. ಡಿಜಿಟಲ್ ಸಾಧನಗಳ ಮೂಲಕ ಪಾರದರ್ಶಕತೆಯ ವೃದ್ಧಿ:**

ಪಾರದರ್ಶಕತೆ ಉತ್ತಮ ಆಡಳಿತದ ಮೂಲಾಧಾರವಾಗಿದೆ. ಡಿಜಿಟಲೀಕರಣವು ವ್ಯವಹಾರಗಳನ್ನು ಸ್ವಯಂಚಾಲಿತಗೊಳಿಸುವುದರ ಮೂಲಕ, ಡೇಟಾವನ್ನು ಕೇಂದ್ರೀಕರಿಸುವುದರ ಜೊತೆಗೆ ಮಾಹಿತಿಯನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡುವುದರ ಮೂಲಕ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ. ಇದರಿಂದ ವೈಯಕ್ತಿಕ ಹಸ್ತಕ್ಷೇಪ

ಕಡಿಮೆಯಾಗುತ್ತದೆ, ಭ್ರಷ್ಟಾಚಾರ ನಿಯಂತ್ರಣವಾಗುತ್ತದೆ ಮತ್ತು ಸಾರ್ವಜನಿಕರ ವಿಶ್ವಾಸ ನಿರ್ಮಾಣವಾಗುತ್ತದೆ.

**ಡಿಜಿಟಲೀಕರಣವು ಪಾರದರ್ಶಕತೆಯನ್ನು ಹೇಗೆ ಹೆಚ್ಚಿಸುತ್ತದೆ:**

- ಪ್ರಕ್ರಿಯೆಯ ಸ್ವಯಂಚಾಲಿತಗೊಳಿಸುವಿಕೆ: ಮಾನವೀಯ ಹಸ್ತಕ್ಷೇಪ ಕಡಿಮೆ ಆಗುವುದರಿಂದ ಪ್ರಕ್ರಿಯೆಗಳ ನಿಷ್ಪಕ್ಷಪಾತತೆ ಹೆಚ್ಚುತ್ತದೆ.
- ಡೇಟಾ ಲಭ್ಯತೆ: ಓಪನ್ ಡೇಟಾ ಪ್ಲಾಟ್‌ಫಾರ್ಮ್‌ಗಳು ಹಣಕಾಸು ಮತ್ತು ಕಾರ್ಯಪದ್ಧತಿಯ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುತ್ತವೆ.
- ನೈಜ ಕಾಲದ ಮೇಲ್ವಿಚಾರಣೆ: ನಿಧಿಗಳ ಹರಿವು ಮತ್ತು ಸರಬರಾಜು ಸರಪಳಿಯ ಮೇಲ್ವಿಚಾರಣೆ ವಿಶ್ವಾಸವನ್ನು ಹೆಚ್ಚಿಸುತ್ತದೆ.
- ಮಾನದಂಡೀಕರಣ: ಸಮಾನ ಡಿಜಿಟಲ್ ದಾಖಲೆಗಳು ಪರಿಶೀಲನೆಗೆ 'ಏಕ ಸತ್ಯದ ಮೂಲ' ಆಗಿ ಕಾರ್ಯನಿರ್ವಹಿಸುತ್ತವೆ.

**ಉದಾಹರಣೆಗಳು:**

- ಆರೋಗ್ಯ: ಡಿಜಿಟಲ್ ಖರೀದಿ ವ್ಯವಸ್ಥೆಗಳು ಔಷಧ ವಿತರಣೆ ಪ್ರಕ್ರಿಯೆಯ ಪಾರದರ್ಶಕತೆಯನ್ನು ಖಾತ್ರಿಪಡಿಸುತ್ತವೆ.
- ಸಾರ್ವಜನಿಕ ಖರ್ಚು: ಆನ್‌ಲೈನ್ ಟ್ರ್ಯಾಕಿಂಗ್ ಸಾಧನಗಳು ಬಜೆಟ್‌ನ ಸರಿಯಾದ ಬಳಕೆಯನ್ನು ಖಚಿತಪಡಿಸುತ್ತವೆ.
- ಶಿಕ್ಷಣ: ಡೇಟಾ ಪೋರ್ಟಲ್‌ಗಳು ಶಾಲಾ ನಿಧಿ ಬಳಕೆ ಮತ್ತು ಹಾಜರಾತಿ ಪಾರದರ್ಶಕತೆಯನ್ನು ಸುಧಾರಿಸುತ್ತವೆ.
- ಮುಕ್ತ ಆಡಳಿತ: ಅನೇಕ ಸರ್ಕಾರಗಳು ನೈಜ ಕಾಲದ ಡೇಟಾವನ್ನು ಪ್ರಕಟಿಸುತ್ತಿವೆ.

**ಪ್ರಯೋಜನಗಳು:**

- ಭ್ರಷ್ಟಾಚಾರ ಮತ್ತು ದುರ್ನಡತೆ ಕಡಿಮೆಯಾಗುತ್ತದೆ.
- ಸಾರ್ವಜನಿಕರ ವಿಶ್ವಾಸ ಹೆಚ್ಚುತ್ತದೆ.
- ನೀತಿ ನಿರ್ಧಾರ ಪ್ರಕ್ರಿಯೆ ಹೆಚ್ಚು ಮಾಹಿತಿ ಪೂರ್ಣವಾಗುತ್ತದೆ.
- ನಾಗರಿಕರ ಸಕ್ರಿಯ ಭಾಗವಹಿಸುವಿಕೆಗೆ ಉತ್ತೇಜನ.

**3. ಡಿಜಿಟಲ್ ಪರಿವರ್ತನೆಯ ಮೂಲಕ ಹೊಣೆಗಾರಿಕೆಯನ್ನು ಉತ್ತೇಜಿಸುವುದು:**

ಡಿಜಿಟಲೀಕರಣವು ಪಾರದರ್ಶಕ ಮತ್ತು ಪರಿಶೀಲನೀಯ ದಾಖಲೆಗಳನ್ನು ರಚಿಸುವುದರ ಮೂಲಕ ಹೊಣೆಗಾರಿಕೆಯನ್ನು ಬಲಪಡಿಸುತ್ತದೆ. ಪ್ರತಿಯೊಂದು ವ್ಯವಹಾರ ಅಥವಾ ನಿರ್ಧಾರ ಟ್ರೇಸ್ ಆಗುವಂತಾಗುತ್ತದೆ. ಇದು ವಂಚನೆಗೆ ಅವಕಾಶವನ್ನು ಕಡಿಮೆಮಾಡಿ, ನೈತಿಕ ಆಡಳಿತವನ್ನು ಉತ್ತೇಜಿಸುತ್ತದೆ.

**ಹೊಣೆಗಾರಿಕೆಯನ್ನು ಹೆಚ್ಚಿಸುವ ಕ್ರಮಗಳು:**

- ಪಾರದರ್ಶಕ ಆಡಿಟ್ ಮಾರ್ಗಗಳು: ಪ್ರತಿಯೊಂದು ವ್ಯವಹಾರದ ಡಿಜಿಟಲ್ ದಾಖಲೆಗಳು ಪರಿಣಾಮಕಾರಿ ಪರಿಶೀಲನೆಗೆ ಸಹಕಾರ ನೀಡುತ್ತವೆ.
- ಮಾನವ ದೋಷಗಳ ಕಡಿತ: ಸ್ವಯಂಚಾಲಿತ ವ್ಯವಸ್ಥೆಗಳು ದೋಷಗಳ ಸಾಧ್ಯತೆಯನ್ನು ತಗ್ಗಿಸುತ್ತವೆ.
- ನೈಜ ಕಾಲದ ಮೇಲ್ವಿಚಾರಣೆ: ಡ್ಯಾಶ್‌ಬೋರ್ಡ್‌ಗಳು ತಕ್ಷಣದ ಕ್ರಮ ಕೈಗೊಳ್ಳಲು ನೆರವಾಗುತ್ತವೆ.
- ಡೇಟಾ ಮಾನದಂಡೀಕರಣ: ಸಾಮಾನ್ಯ ಡೇಟಾ ಚೌಕಟ್ಟುಗಳು ಇಲಾಖೆಗಳ ನಡುವೆ ಸಮ್ಮಿಲಿತ ಕಾರ್ಯಸಾಧ್ಯತೆಯನ್ನು ಒದಗಿಸುತ್ತವೆ.
- ನಾಗರಿಕ ಪ್ರತಿಕ್ರಿಯಾ ವ್ಯವಸ್ಥೆಗಳು: ಆನ್‌ಲೈನ್ ಪೋರ್ಟಲ್‌ಗಳ ಮೂಲಕ ಜನರು ನೇರ ಪ್ರತಿಕ್ರಿಯೆ ನೀಡಬಹುದು.

**ಉದಾಹರಣೆಗಳು:**

- ಸಾರ್ವಜನಿಕ ಹಣಕಾಸು ವ್ಯವಸ್ಥೆ: ಡಿಜಿಟಲ್ ಬಜೆಟ್ ನಿರ್ವಹಣೆ ನಿಧಿಗಳ ಸರಿಯಾದ ಬಳಕೆಯನ್ನು ಖಚಿತಪಡಿಸುತ್ತದೆ.
- ಶಿಕ್ಷಣ: ಡಿಜಿಟಲ್ ಮೇಲ್ವಿಚಾರಣೆ ಹಾಜರಾತಿ ಮತ್ತು ಪ್ರಮಾಣಪತ್ರಗಳ ವಿಶ್ವಾಸಾರ್ಹತೆಯನ್ನು ಸುಧಾರಿಸುತ್ತದೆ.
- ಎನ್‌ಜಿಓಗಳು: ದಾನಿಗಳ ಮತ್ತು ಸದಸ್ಯರ ಪಾರದರ್ಶಕ ಸಂವಹನವನ್ನು ಖಚಿತಪಡಿಸುತ್ತವೆ.
- ನಿಗಮ ಆಡಳಿತ: ಡಿಜಿಟಲ್ ದಾಖಲೆಗಳು ಒಳಾಂಗಣ ಹೊಣೆಗಾರಿಕೆಯನ್ನು ಬಲಪಡಿಸುತ್ತವೆ.

**ಫಲಿತಾಂಶಗಳು:**

- ನೈತಿಕ ಮಾನದಂಡಗಳು ಮತ್ತು ವಿಶ್ವಾಸ ಹೆಚ್ಚಾಗುತ್ತದೆ.
- ಕಾರ್ಯದಕ್ಷತೆ ಮತ್ತು ಸಂಪನ್ಮೂಲಗಳ ಸರಿಯಾದ ಬಳಕೆ.
- ಶಾಶ್ವತ ಪರಿಣಾಮಕ್ಕಾಗಿ ಬಲವಾದ ಆಡಳಿತ ವ್ಯವಸ್ಥೆ.

**ಸಾರಾಂಶ**

ಡಿಜಿಟಲೀಕರಣವು ಕೇವಲ ತಾಂತ್ರಿಕ ಸುಧಾರಣೆ ಅಲ್ಲ – ಅದು ಒಂದು ಪರಿವರ್ತನಾ ತಂತ್ರವಾಗಿದೆ. ಇದು ಸಂಸ್ಥೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ ಮತ್ತು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಲು ಶಕ್ತಗೊಳಿಸುತ್ತದೆ. ಡಿಜಿಟಲ್ ಸಾಧನಗಳನ್ನು ಅಳವಡಿಸಿಕೊಳ್ಳುವುದರಿಂದ ಸಂಸ್ಥೆಗಳು ತಮ್ಮ ಕಾರ್ಯಕ್ಷಮತೆಯನ್ನು ಸುಧಾರಿಸಿ, ವಿಶ್ವಾಸವನ್ನು ನಿರ್ಮಿಸುವುದರ ಜೊತೆಗೆ ಎಲ್ಲಾ ಹಿತಾಸಕ್ತಿಗಳಿಗೆ ಉತ್ತಮ ಫಲಿತಾಂಶಗಳನ್ನು ಒದಗಿಸಬಹುದು. ಸಾರ್ವಜನಿಕ ಆಡಳಿತದಿಂದ ಹಿಡಿದು ಸಹಕಾರ ಚಳವಳಿಗಳು ಹಾಗೂ ಖಾಸಗಿ ವಲಯದವರೆಗೆ – ಡಿಜಿಟಲೀಕರಣವು ಹೆಚ್ಚು ಒಳಗೊಂಡ, ಕ್ರಿಯಾಶೀಲ ಮತ್ತು ಶಾಶ್ವತ ಭವಿಷ್ಯಕ್ಕೆ ದಾರಿ ತೆರೆದಿದೆ.

## 15ನೇ ನವೆಂಬರ್ 2025

# ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ : ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ:'

# (Tribhuvan Sahakar University: Research and Training Transforming Cooperative Education)

– ಅನುವಾದ: ಡಾ.ಗುರುಸ್ವಾಮಿ, ಕೆ.ಸಿ.ಎಸ್.,ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಬೆಂಗಳೂರು.

"ಒಂದು ಮಗುವನ್ನು ಗ್ರಾಮದ ಪ್ರಮುಖ ಸ್ಥಳದಲ್ಲಿ ಕುಳ್ಳಿರಿಸಿ, ಅದರ ಮುಗ್ದತೆಯನ್ನು ನೋಡಿ ಅರಿಯುವುದರ" ಮೂಲಕ ಪ್ರಾರಂಭವಾದ ಶಿಕ್ಷಣ ಮತ್ತು ತರಬೇತಿ ಅತೀ ಪುರಾತನವಾದದ್ದು. ಋಷಿಮುನಿಗಳ ಆಶ್ರಮದಲ್ಲಿ ವೇದೋಪನಿಶತ್ತುಗಳ ಮತ್ತು ಶಸ್ತ್ರಾಭ್ಯಾಸಗಳಿಂದ ಮೊದಲ್ಗೊಂಡು, ಇಂದು ಸಾಮಾಜಿಕ ಕಳಕಳಿ ಮತ್ತು ಅಭಿವೃದ್ಧಿಯ ಚಿಂತನೆಯೊಡನೆ ಜ್ಞಾನ–ವಿಜ್ಞಾನದ ಆವಿಷ್ಕಾರದೊಂದಿಗೆ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ ಬೇಡಿಕೆಯು ಹೆಚ್ಚುತ್ತಾ ಎಲ್ಲಾ ರಂಗಗಳಿಗೂ ಅನಿವಾರ್ಯವಾಗಿದ್ದು, ಅದಕ್ಕೆ ಸಹಕಾರ ಕ್ಷೇತ್ರವೂ ಹೊರತಾಗಿಲ್ಲ. ಒಂದು ವ್ಯವಸ್ಥಿತವಾದ ಪದ್ಧತಿಯ ಮೂಲಕ ಜ್ಞಾನಾರ್ಜನೆಯ ಗುರಿ ಸಾಧನೆಗಾಗಿ ವಿದ್ಯಾಭ್ಯಾಸ ಪಡೆಯುವ ಮತ್ತು ಭೋದಿಸುವ ಕಾರ್ಯವೇ "ಶಿಕ್ಷಣ"ವೆನ್ನಬಹುದು. ಒಂದು ನಿರ್ದಿಷ್ಟ ಕೌಶಲ್ಯ ಅಥವಾ ಪರಿಣಿತಿಯನ್ನು ಪಡೆಯುವ ಗುರಿಸಾಧನೆಗಾಗಿ ವಿದ್ಯಾಭ್ಯಾಸ ಗಳಿಸುವ ಮತ್ತು ಭೋದಿಸುವ ಕಾರ್ಯವೇ "ತರಬೇತಿ" ಎನಿಸಿಕೊಳ್ಳುತ್ತದೆ. ವಿಚಾರ ಪೂರ್ಣ ಅಧ್ಯಯನದಿಂದ ಸತ್ಯವನ್ನು ತಿಳಿಯುವ, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ, ಹೊಸ ಅರಿವನ್ನು ಕಂಡುಕೊಳ್ಳಲು ವ್ಯವಸ್ಥಿತ ಮತ್ತು ಸಂಘಟಿತ ರೀತಿಯಲ್ಲಿ ಅಧ್ಯಯನ ಮಾಡುವ ಪ್ರಕ್ರಿಯೆಯೇ "ಸಂಶೋಧನೆ".

ಶಿಕ್ಷಣವು ಶೈಕ್ಷಣಿಕ ಅಧ್ಯಯನಕ್ಕೆ (Academic Studies) ಸಂಬಂಧಿಸಿದ ತಾತ್ವಿಕ ವಿದ್ಯಾಭ್ಯಾಸ (Theoretical learning) ವಾಗಿರುತ್ತದೆ. ತರಬೇತಿಯು ನಿಶ್ಚಿತವಾದ ಕೌಶಲ್ಯ(Skill) ಹೆಚ್ಚಿಸಲು ಪ್ರಯೋಗದ ಅನ್ವಯಿಸುವಿಕೆ (Practical Application) ಹೊಂದಿರುತ್ತದೆ. ಶಿಕ್ಷಣ ಮತ್ತು ತರಬೇತಿಯ ಹಿನ್ನೆಲೆಯಲ್ಲಿ ಕಾರ್ಯದಕ್ಷತೆಯನ್ನು ಹೆಚ್ಚಿಸುವ, ಸಮಸ್ಯೆಗಳನ್ನು ಕಂಡುಹಿಡಿದು, ಪರಿಹಾರ ಸೂಚಿಸುವ ಕಾರ್ಯವು ಸಂಶೋಧನೆಯಿಂದ ಸಾಧ್ಯವಾಗುತ್ತದೆ. ಆಡಳಿತ, ವ್ಯವಸ್ಥಾಪನೆ, ಬ್ಯಾಂಕಿಂಗ್, ಪತ್ತು, ಮಾರಾಟ, ಉತ್ಪಾದನೆ, ಗ್ರಾಹಕ, ಹೈನುಗಾರಿಕೆ, ಮೀನುಗಾರಿಕೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಭಿನ್ನಕಾರ್ಯಗಳನ್ನು ಒಳಗೊಂಡಿರುವ ಸಹಕಾರ ಕ್ಷೇತ್ರಕ್ಕೆ ಶಿಕ್ಷಣ, ತರಬೇತಿ ಮತ್ತು ಸಂಶೋಧನೆ ಅನಿವಾರ್ಯ ಹಾಗೂ ಅತ್ಯಾವಶ್ಯಕವಾಗಿದೆ.

19ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಆಧುನಿಕ ಸಹಕಾರ ಚಳುವಳಿಯ ಮೂಲಪುರುಷ ರಾಬರ್ಟ್ ಓವೆನ್ ನೇತೃತ್ವದಲ್ಲಿ ಪ್ರಾರಂಭವಾದ ಸಹಕಾರ ಚಳುವಳಿಯಲ್ಲಿ ರೂಪಿತವಾದ "ರಾಕ್‌ಡೇಲ್ ತತ್ವ"ಗಳಲ್ಲಿ ಶಿಕ್ಷಣ ಮತ್ತು ಪ್ರಚಾರಕ್ಕೆ ಪ್ರಮುಖ ಆದ್ಯತೆಯನ್ನು ನೀಡಲಾಯಿತು. ಸಹಕಾರ ಚಳುವಳಿಯನ್ನು ಪ್ರೋತ್ಸಾಹಿಸುವ ಮತ್ತು ಮಾರ್ಗದರ್ಶನವನ್ನು ನೀಡುವ ಉದ್ದೇಶದಿಂದ ಪ್ರಾರಂಭವಾದ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು (International Cooperative Alliance-ICA) "ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ"ವನ್ನು ಸಹಕಾರದ ಏಳು ತತ್ವಗಳಲ್ಲಿ 5ನೇ ತತ್ವವಾಗಿ ಅಂಗೀಕರಿಸಿತು.

ಭಾರತದಲ್ಲಿ ಸಹಕಾರ ಚಳುವಳಿಯು ಪ್ರಾರಂಭವಾಗುವ ಮೊದಲು ಸರ್. ಫೆಡ್ರಿಕ್ ನಿಕೊಲ್ಸನ್‌ರವರು 1899 ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ "ಸಹಕಾರ ಶಿಕ್ಷಣ"ದ ಮಹತ್ವದ ಬಗ್ಗೆ ತಿಳಿಸಿದ್ದರು. ಆನಂತರ 1915 ರಲ್ಲಿ ಸರ್.ಇ.ಡಿ.ಮ್ಯಾಕ್ಲಗನ್ ಸಮಿತಿ ವರದಿ, 1928ರ ರಾಯಲ್ ಕಮಿಷನ್ ವರದಿ, 1935 ರ ಮಾಲ್‌ಕಾಮ್ ಡಾರ್ಲಿಂಗ್ ವರದಿಗಳಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿಯು ಸಹಕಾರ ಚಳುವಳಿಗೆ ಅತ್ಯಾವಶ್ಯಕವೆಂದು ತಿಳಿಸಲಾಯಿತು. 1961ರಲ್ಲಿ ಸ್ಥಾಪನೆಯಾದ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ (National Cooperative Union of India-NCUI) ಸಹಕಾರ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಪ್ರಮುಖ ಸಂಸ್ಥೆಯಾಗಿದ್ದು, ರಾಷ್ಟ್ರಮಟ್ಟದಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್, ರಾಜ್ಯಮಟ್ಟದಲ್ಲಿ ರಾಜ್ಯ ಸಹಕಾರ ಮಹಾಮಂಡಳಗಳು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಯೂನಿಯನ್‌ಗಳು ಸಹಕಾರಿಗಳಿಗೆ, ನೌಕರರಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತಾ ಬಂದಿವೆ. ರಾಷ್ಟ್ರೀಯ ಸಹಕಾರ ತರಬೇತಿ ಸಂಸ್ಥೆ (National Council for Cooperative Training-NCCT) ಯ ಆಡಳಿತಕ್ಕೆ ಒಳಪಟ್ಟ, ವೈಕುಂಠ ಮೆಹತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಪುಣೆ (Vaikunth Mehta National Institute of Cooperative Management, Pune-VAMNICOM) ಪ್ರಾದೇಶಿಕ ಸಹಕಾರ ಆಡಳಿತ ತರಬೇತಿ ಸಂಸ್ಥೆಗಳು (Regional Institute of Cooperative Management-RICM) ಮತ್ತು ಸಹಕಾರ ಆಡಳಿತ ತರಬೇತಿ ಸಂಸ್ಥೆಗಳು (Institute of Cooperative Management-ICM) ಸಹಕಾರಿಗಳಿಗೆ & ಅಧಿಕಾರಿಗಳಿಗೆ ತರಬೇತಿ ನೀಡುತ್ತಿವೆ.

ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ (ನಿ) ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ (ನಿ) ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ತರಬೇತಿ ಕೇಂದ್ರ, ಬೆಂಗಳೂರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಬ್ಯಾಂಕಿಂಗ್ ಬೆಂಗಳೂರು, ಬ್ಯಾಂಕರ್ಸ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಮಂಗಳೂರು, ಕರ್ನಾಟಕ ಹಾಲು ಮಹಾಮಂಡಳ (ನಿ) ಬೆಂಗಳೂರು, ಆರ್.ಐ.ಸಿ.ಎಂ ಬೆಂಗಳೂರು ಇತ್ಯಾದಿ ಸಂಸ್ಥೆಗಳು ಸಹಕಾರ ತರಬೇತಿ ಮತ್ತು ಶಿಕ್ಷಣವನ್ನು ನೀಡುತ್ತಿವೆ.

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ದೇಶದ ಸಹಕಾರಿ ಚಳುವಳಿಯನ್ನು ವೃತ್ತಿಪರಗೊಳಿಸುವ, ಶಿಕ್ಷಣ,ತರಬೇತಿ ಮತ್ತು ಸಂಶೋಧನೆಯನ್ನು ಸಮನ್ವಯಗೊಳಿಸಿ ಸಹಕಾರಿ ವಲಯದ ಆಧುನೀಕರಣ ಮತ್ತು ಗ್ರಾಮೀಣ ಅಭಿವೃದ್ಧಿ ಸಾಧಿಸುವ ಪ್ರಮುಖ ಉದ್ದೇಶದಿಂದ "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ ಮಸೂದೆ.2025"ನ್ನು ಸಂಸತ್ತಿನಲ್ಲಿ ಅಂಗೀಕರಿಸಿ, ಗುಜರಾತಿನ ಆನಂದ್ ಗ್ರಾಮೀಣ ನಿರ್ವಹಣಾ ಸಂಸ್ಥೆ (IRMA) ಯನ್ನು ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿ,

ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿದ ಸಂಸ್ಥೆ ಎಂದು ಘೋಷಿಸಲಾಗಿದೆ. ಇದು ಭಾರತದ ಸಹಕಾರಿ ವಲಯಕ್ಕೆ ಮೀಸಲಾಗಿರುವ ಮೊದಲ ರಾಷ್ಟ್ರೀಯ ವಿಶ್ವವಿದ್ಯಾಲಯವಾಗಿದೆ.

೦) ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ (Tribhuvan Sahkari University) ದ ಪ್ರಾಮುಖ್ಯತೆ.

ಭಾರತದಲ್ಲಿ ಸುಮಾರು 8,45,716 ಸಹಕಾರ ಸಂಸ್ಥೆಗಳು ನೋಂದಣೆಯಾಗಿದ್ದು. ಸುಮಾರು 31 ಕೋಟಿಗೂ ಹೆಚ್ಚು ಜನರು ಸದಸ್ಯರಾಗಿದ್ದಾರೆ. ಅಂದಾಜು 25 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಗಳಿದ್ದಾರೆ. ಆದರೆ ಸಹಕಾರಿಗಳ ಮತ್ತು ಸಿಬ್ಬಂದಿಗಳ ಶಿಕ್ಷಣ, ತರಬೇತಿ ವ್ಯವಸ್ಥೆ ಏಕರೂಪವಾಗಿರದೆ, ವಿವಿಧ ಪದ್ಧತಿಗಳನ್ನು ಅನುಸರಿಸಿ ಬಿಡಿ ಬಿಡಿಯಾಗಿ ವಿಸ್ತರಿಸಿಕೊಂಡಿದ್ದು, ಗುಣಮಟ್ಟದಲ್ಲಿ ಉತ್ತಮ ಸ್ಥಿತಿ ಕಾಯ್ದುಕೊಳ್ಳದೆ ತರಬೇತಿಗೊಂಡ ಮಾನವ ಸಂಪನ್ಮೂಲದ ಕೊರತೆ ತೀವ್ರವಾಗಿದೆ. ಸಹಕಾರಿಗಳು ಕೃಷಿ ಸಾಲ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಮಾರಾಟ, ರಫ್ತು, ಗ್ರಾಮೀಣ ಹಣಕಾಸು ಮುಂತಾದ ವಲಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ವಲಯವಾರು ತರಬೇತಿ, ಸಂಶೋಧನೆ ಅಗತ್ಯವಿದೆ. ಅಲ್ಲದೆ ಆಡಳಿತ, ವ್ಯವಸ್ಥಾಪನೆ, ಆಡಿಟ್ ಮುಂತಾದ ವಿಷಯಗಳಲ್ಲಿ ಏಕರೂಪದ ಶಿಕ್ಷಣ ವ್ಯವಸ್ಥೆ ಅನುಷ್ಠಾನಗೊಳ್ಳಬೇಕಾಗಿದೆ. ಆದ್ದರಿಂದ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಕೇವಲ ಪದವಿ ನೀಡುವ ವಿಶ್ವವಿದ್ಯಾಲಯವಲ್ಲ; ಬದಲಿಗೆ ಇದು ಉನ್ನತಮಟ್ಟದ ಕ್ರಮಬದ್ಧವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ ನೀತಿ ನಿರ್ಮಾಣದ ಜ್ಞಾನ ಕೇಂದ್ರವಾಗಿರಲಿದೆ.

**ঃ) ಉದ್ದೇಶಗಳು ಮತ್ತು ಕಾರ್ಯತತ್ಪರತೆ :**

1. ಶಿಕ್ಷಣ ಮತ್ತು ತರಬೇತಿ : ಸಹಕಾರಿ ಆಡಳಿತ ನಿರ್ವಹಣೆ, ಹಣಕಾಸು, ಕಾನೂನು, ಆಡಿಟ್, ಮಾರುಕಟ್ಟೆ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪದವಿ, ಡಿಪ್ಲೋಮಾ ಮತ್ತು ಪ್ರಮಾಣ ಪತ್ರಗಳ ಕೋರ್ಸ್‌ಗಳ ಮೂಲಕ ಉತ್ತಮ ಶಿಕ್ಷಣ ಮತ್ತು ತರಬೇತಿಯನ್ನು ನೀಡುವುದು. ಸಹಕಾರಿ ಆಡಳಿತ ಮಂಡಳಿ ಸದಸ್ಯ-ರಿಗೆ, ನೌಕರರಿಗೆ ನವೀಕೃತ ತರಬೇತಿ ನೀಡುವುದು. ರಾಷ್ಟ್ರ ಮಟ್ಟದಲ್ಲಿ ಗುಜರಾತ್‌ನ ಆನಂದ್ ಕ್ಯಾಂಪಸ್‌ನಲ್ಲಿ, ರಾಜ್ಯ ಮಟ್ಟ ಮತ್ತು ಜಿಲ್ಲಾ ಹಾಗೂ ಗ್ರಾಮೀಣ ಮಟ್ಟದಲ್ಲಿ ತರಬೇತಿ ಕೇಂದ್ರಗಳನ್ನು ಕೇಂದ್ರ ಘಟಕ(ಹಬ್) ಮತ್ತು ಹಲವಾರು ಉಪಘಟಕಗಳ (ಸ್ಪೋಕ್ಸ್) ಜೊತೆ ಸಂಪರ್ಕ ಹೊಂದಿ ಅತ್ಯುತ್ತಮ ಶಿಕ್ಷಣ ಮತ್ತು ತರಬೇತಿ ನೀಡುವುದು.
2. ಸಂಶೋಧನೆ ಮತ್ತು ನೀತಿ ನಿರೂಪಣೆ : ಸಹಕಾರಿಗಳ ಆಡಳಿತ, ವ್ಯವಹಾರದ ಮಾದರಿ, ಡಿಜಿಟಲ್ ರೂಪಾಂತರ, ಗ್ರಾಮೀಣ ಜೀವನೋಪಾಯ ಮುಂತಾದ ವಿಷಯಗಳಲ್ಲಿ ಸಂಶೋಧನೆ ನಡೆಸುವುದು ಮತ್ತು ಈ ಬಗ್ಗೆ ಅಂತರರಾಷ್ಟ್ರೀಯ ಸಹಕಾರಿ ಸಂಸ್ಥೆಗಳ ಸಹಯೋಗದಿಂದ ಕಾರ್ಯಯೋಜನೆ ರೂಪಿಸುವುದು.
3. ವೃತ್ತಿ ನೈಪುಣ್ಯತೆ ಮತ್ತು ದಕ್ಷತೆ : ಸಹಕಾರಿ ಶಿಕ್ಷಣದ ಪಠ್ಯಕ್ರಮವನ್ನು ಅಮೂಲಾಗ್ರವಾಗಿ ಪರಿಷ್ಕರಿಸಿ ಸೂಕ್ತಮಾನದಂಡಗಳನ್ನು ಸೂಚಿಸುವುದು. ತಂತ್ರಜ್ಞಾನ ಆಧಾರಿತ ಇ-ಲರ್ನಿಂಗ್ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಬಲಪಡಿಸುವುದು.
4. ವಲಯ ಮಟ್ಟದ ತರಬೇತಿಯಲ್ಲಿ ನವೀನತೆ : ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಕೃಷಿ, ಮಾರುಕಟ್ಟೆ, ಬ್ಯಾಂಕಿಂಗ್, ರಫ್ತು ಇತ್ಯಾದಿ ವಲಯಗಳಿಗೆ ಉತ್ಕೃಷ್ಟತೆಯ "ವಿಶೇಷ ಶಾಲೆ"ಗಳನ್ನು ಸ್ಥಾಪಿಸುವುದು. ಮಹಿಳೆಯರು, ಯುವಕರು ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಉದ್ಯಮಶೀಲತೆ ಮತ್ತು ತರಬೇತಿಯಲ್ಲಿ ಅವಕಾಶ ಕಲ್ಪಿಸುವುದು.

**ಅ) ಪಠ್ಯಕ್ರಮ ಮತ್ತು ತರಬೇತಿ ಮಾದರಿ:**

1. ಪ್ರಮಾಣಪತ್ರ ಕೋರ್ಸ್‌ಗಳು : ಸಹಕಾರಿ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ಒಂದೆರಡು ವಾರಗಳ ತರಬೇತಿ ನೀಡುವುದು.
2. ಡಿಪ್ಲೊಮಾ ಕೋರ್ಸ್‌ಗಳು: ಸಹಕಾರಿ ಸಂಸ್ಥೆಗಳ ಮಧ್ಯಮ ಮಟ್ಟದ ನಿರ್ವಹಣಾ ಸಿಬ್ಬಂದಿಗಳಿಗೆ, ಯುವಕ-ಯುವತಿಯರಿಗೆ ಕೆಲವು ತಿಂಗಳುಗಳ ತರಬೇತಿ ನೀಡುವುದು.
3. ಕ್ಷೇತ್ರಾಧಾರಿತ ಕಲಿಕೆ: ಸ್ಥಳೀಯ ಸಹಕಾರಿಗಳಲ್ಲಿ ಪ್ರಾಯೋಗಿಕವಾಗಿ ಒಂದೆರಡು ದಿನಗಳ ತರಬೇತಿ ನೀಡುವುದು.
4. ಉದ್ಯಮಶೀಲತಾ ತರಬೇತಿ: ಸಹಕಾರಿ ವಲಯದಲ್ಲಿ ಸ್ಟಾರ್ಟ್ ಅಪ್‌ಗಳ ಪ್ರಾರಂಭಕ್ಕೆ ಪೂರಕವಾದ ತರಬೇತಿ ನೀಡುವುದು.
5. ಪದವಿ ಮತ್ತು ಸ್ನಾತಕೋತ್ತರ ಪದವಿ: ಸಹಕಾರಿ ನಿರ್ವಹಣೆ, ಹಣ-ಕಾಸು, ಕಾನೂನು, ಡಿಜಿಟಲೀಕರಣ ಮುಂತಾದ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವುದು.
6. ಸಂಶೋಧನಾ ಪದವಿ: ಸಹಕಾರಿಯ ಆಡಳಿತ ಮತ್ತು ಪಾರದರ್ಶಕತೆ, ಮಾರುಕಟ್ಟೆ ಮತ್ತು ಮೌಲ್ಯ ಸರಪಳಿ ವೃದ್ಧಿ, ಡಿಜಿಟಲ್ ರೂಪಾಂತರ ಮತ್ತು ಫಿನ್‌ಟೆಕ್, ಮಹಿಳಾ-ಯುವ ಸಬಲೀಕರಣ, ಹವಾಮಾನ ವೈಪರೀತ್ಯ ನೀತಿ ಮತ್ತು ಕಾನೂನು ಹಾಗೂ ಸುಸ್ಥಿರ ಸಹಕಾರಿ ಮಾದರಿಗಳ ಬಗ್ಗೆ ಸಂಶೋಧನೆ ನಡೆಸಿ ಎಂ.ಫಿಲ್ ಮತ್ತು ಪಿಹೆಚ್‌ಡಿ ಪದವಿಗಳನ್ನು ನೀಡುವುದು.

**ಆ)ಸಂಶೋಧನೆ ಮತ್ತು ತರಬೇತಿಯ ಮೂಲಕ ಪರಿವರ್ತನೆ:**

ಶಿಕ್ಷಣ-ತರಬೇತಿ-ಸಂಶೋಧನೆಯಿಂದ ಸಹಕಾರಿ ಸಂಸ್ಥೆಗಳಲ್ಲಿ ಈ ಕೆಳಗಿನ ಬದಲಾವಣೆಗಳನ್ನು ನಿರೀಕ್ಷಿಸಬಹುದಾಗಿದೆ.

1. ಸಂಶೋಧನೆಯಿಂದ ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಮತ್ತು ಸಕ್ಕರೆ ವಲಯದಲ್ಲಿನ ಸಹಕಾರಿ ಸಂಸ್ಥೆಗಳಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಹೆಚ್ಚುತ್ತದೆ.
2. ದೇಶದಾದ್ಯಂತ ಸಹಕಾರಿ ಶಿಕ್ಷಣದಲ್ಲಿ ಏಕರೂಪತೆ ಉಂಟಾಗಿ, ವೃತ್ತಿಪರ ಮಾನವ ಸಂಪನ್ಮೂಲ ಹೆಚ್ಚಾಗಿ ಕಾರ್ಯದಲ್ಲಿ ದಕ್ಷತೆ, ನೈಪುಣ್ಯತೆ ಮತ್ತು ಪಾರದರ್ಶಕತೆ ಹೆಚ್ಚಾಗುತ್ತದೆ.
3. ಸಂಶೋಧನಾ ಫಲಿತಾಂಶಗಳಿಂದ ನೀತಿ-ನಿರೂಪಣೆ, ಕಾನೂನು ಸುಧಾರಣೆ ಮತ್ತು ಡಿಜಿಟಲ್ ಪರಿವರ್ತನೆಯಲ್ಲಿ ಸಹಕಾರಿ ಸಂಸ್ಥೆಗಳು ಉನ್ನತಿ ಸಾಧಿಸುತ್ತವೆ.
4. ಗ್ರಾಮೀಣ ಉದ್ಯಮ ಶೀಲತೆ, ಉದ್ಯೋಗ ಸೃಷ್ಟಿ ಮತ್ತು ಸ್ವಾವಲಂಬನೆಗೆ ಉತ್ತೇಜನ ನೀಡುವುದರ ಮೂಲಕ ಗ್ರಾಮೀಣ ಯುವಕರು, ಮಹಿಳೆಯರು, ಅಲ್ಪಸಂಖ್ಯಾತರು, ಹಿಂದುಳಿದವರು, ದೀನ ದಲಿತರು, ರೈತರು, ಕಾರ್ಮಿಕರ ಸಬಲೀಕರಣ ಸಾಧ್ಯವಾಗುತ್ತದೆ.

ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು, ಸಿದ್ಧಾಂತ(ಖ್ಷಿಜಿಂಡಿಥಿ) ಮತ್ತು ಪ್ರಾಯೋಗಿಕ(ಕಡಿಚಿಣಛಿಚಿಟ) ಅಂತರವನ್ನು ಕಡಿಮೆ ಮಾಡುವ, ಗ್ರಾಮೀಣ ಪ್ರದೇಶಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯುವ, ಪಠ್ಯಕ್ರಮದಲ್ಲಿ ಏಕರೂಪತೆ ಮತ್ತು ಗುಣಮಟ್ಟದಲ್ಲಿ ಶ್ರೇಷ್ಠತೆ ಕಾಪಾಡುವ, ಸಂಶೋಧನೆಯ ಪರಿಣಾಮಗಳನ್ನು ತಳಮಟ್ಟದಲ್ಲಿ ಅಳವಡಿಸುವ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಭಾರತದ ಸಹಕಾರಿ ಚಳುವಳಿಯ ಆಧುನೀಕರಣ ಮತ್ತು ಗ್ರಾಮೀಣ ಅಭಿವೃದ್ಧಿಯ ಮೂಲಕ "ಸಹಕಾರದಿಂದ ಸಮೃದ್ಧಿ" ಎಂಬ ಘೋಷ ವಾಕ್ಯಕ್ಕೆ ಸಾಕ್ಷಿಭೂತವಾಗಿ ಕಾರ್ಯನಿರ್ವಹಿಸಲಿ ಎನ್ನುವುದು ಎಲ್ಲಾ ಸಹಕಾರಿಗಳ ಬಯಕೆಯಾಗಿದೆ.

## 16 ನವೆಂಬರ್ 2025

## ವಿಷಯ: ಸಹಕಾರದ ಮೂಲಕ ಗ್ರಾಮೀಣ ಅಭಿವೃದ್ಧಿಯನ್ನು ಬಲಪಡಿಸುವುದು

# Strengthening Rural Development through Cooperatives

ಅನುವಾದ: ಶ್ರೀ ವಿಶ್ವನಾಥ ಎಂ. ಸಹಾಯಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

**ಪರಿಚಯ:**

ಗ್ರಾಮೀಣ ಭಾರತ ಅನೇಕ ಪರಸ್ಪರ ಸಂಬಂಧಿತ ಸವಾಲುಗಳನ್ನು ಎದುರಿಸುತ್ತಿದೆ ವಿಭಜಿತ ಭೂಮಿಯ ಮಾಲೀಕತ್ವ, ಋತುವಾರಿ ಮತ್ತು ಅನೌಪಚಾರಿಕ ಉದ್ಯೋಗ, ಕೃಷಿ ಉತ್ಪನ್ನಗಳಿಗೆ ಕಡಿಮೆ ಮೌಲ್ಯವರ್ಧನೆ, ಸಾಲ ಮತ್ತು ಮಾರುಕಟ್ಟೆಗಳಿಗೆ ಸೀಮಿತ ಪ್ರವೇಶ, ಹಾಗೂ ಅಸಮರ್ಪಕ ಡಿಜಿಟಲ್ ಮತ್ತು ಭೌತಿಕ ಮೂಲಸೌಕರ್ಯ. ಇಂತಹ ಪರಿಸ್ಥಿತಿಯಲ್ಲಿ ಸಹಕಾರಿ ಸಂಸ್ಥೆಗಳು ಅತ್ಯಂತ ಪರಿಣಾಮಕಾರಿ ಸಾಧನಗಳಾಗಿವೆ. ಅವು ಸಂಪನ್ಮೂಲಗಳನ್ನು ಒಟ್ಟುಗೂಡಿಸಿ, ವ್ಯವಹಾರ ವೆಚ್ಚಗಳನ್ನು ಕಡಿಮೆಮಾಡಿ, ಅಪಾಯ ಹಂಚಿಕೊಳ್ಳುವ ಮತ್ತು ಉತ್ಪಾದಕರಿಗೆ ಒಟ್ಟುಗೂಡಿದ ವಾಟಾ ಶಕ್ತಿಯನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿವೆ.

ಈಗಿನ ನೀತಿನ ಕ್ಷಣದಲ್ಲಿ ಸಹಕಾರ ಆಡಳಿತ, ಹಣಕಾಸು ಮತ್ತು ಡಿಜಿಟಲ್ ಸಿದ್ಧತೆಯನ್ನು ಪುನರ್ ಕಲ್ಪನೆ ಮಾಡಲು ಭಾರತ ಸರ್ಕಾರ ಕೈಗೊಂಡಿರುವ ನಾನಾ ಕ್ರಮಗಳ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಹಿಂದಿನಿಗಿಂತಲೂ ಹೆಚ್ಚಿನ ಪಾತ್ರ ವಹಿಸಬಹುದು. ಅವು ಗ್ರಾಮೀಣ ಸಮೃದ್ಧಿ, ಸಮಾವೇಶಿತ ಉದ್ಯೋಗ ಮತ್ತು ಶಕ್ತಿಯುತ ಸ್ಥಳೀಯ ಆರ್ಥಿಕತೆಯ ಎಂಜಿನ್‌ಗಳಾಗಿ ರೂಪಾಂತರಗೊಳ್ಳಲು ಸಾಧ್ಯತೆ ಹೊಂದಿವೆ.

ಕಳೆದ ಕೆಲವು ವರ್ಷಗಳಲ್ಲಿ, ಕೇಂದ್ರ ಸರ್ಕಾರವು ಸಹಕಾರಿ ಕ್ಷೇತ್ರಕ್ಕೆ ನೀಡುತ್ತಿದ್ದ ಆಕಸ್ಮಿಕ ಅಥವಾ ತಾತ್ಕಾಲಿಕ ಬೆಂಬಲದಿಂದ ದೂರವಾಗಿ, ವ್ಯವಸ್ಥಾತ್ಮಕ ದೃಷ್ಟಿಕೋಣದತ್ತ ಹೆಜ್ಜೆ ಇಟ್ಟಿದೆ. ಸಹಕಾರ ಸಚಿವಾಲಯದ ಸ್ಥಾಪನೆ ಮತ್ತು ಇತ್ತೀಚಿನ ರಾಷ್ಟ್ರೀಯ ಸಹಕಾರ ನೀತಿ 2025 (National Cooperative Policy 2025) ರೂಪಣೆ, ಚದುರಿದ ಹಸ್ತಕ್ಷೇಪಗಳಿಂದ ಏಕೀಕೃತ ಚಟುವಟಿಕೆ ಚೌಕಟ್ಟಿನತ್ತ ನಡೆದ ಮಹತ್ವದ ಬದಲಾವಣೆಯನ್ನು ಸೂಚಿಸುತ್ತವೆ.

ಈ ನೀತಿಯು ಸ್ಪಷ್ಟವಾಗಿ ವಿವಿಧ ಸಚಿವಾಲಯಗಳ ಯೋಜನೆಗಳನ್ನು ಪರಸ್ಪರ ಸಂಯೋಜಿಸುವುದು, ಕಂಪನಿಗಳಿಗಿಂತ ತೆರಿಗೆ ಸಂಬಂಧಿತವಾಗಿ ಹಿನ್ನಡೆಯಲ್ಲಿರುವ ಸಹಕಾರಿಗಳಿಗೆ ತೆರಿಗೆಭಾರ ಕಡಿಮೆಮಾಡುವುದು ಮತ್ತು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕ್‌ಗಳು (PACS)ಗಳನ್ನು ಮುಂಚೂಣಿ ಸೇವಾ ಸಂಸ್ಥೆಗಳಾಗಿ ಬಲಪಡಿಸುವುದನ್ನು ಉದ್ದೇಶಿಸಿದೆ.

ಇದಲ್ಲದೆ, ರಾಷ್ಟ್ರೀಯ ಸಹಕಾರ ನೀತಿ 2025 ಸಹಕಾರಿಗಳನ್ನು ಪ್ರಾಥಮಿಕ ಉತ್ಪಾದನೆಯ ಪಾರ್ಶ್ವದಿಂದ ಮೀರಿಸಿ, ಮೌಲ್ಯ ಸರಪಳಿ ಚಟುವಟಿಕೆಗಳನ್ನು (value-chain activities) ಕೈಗೊಳ್ಳಲು ಉತ್ತೇಜನ ನೀಡುತ್ತದೆ ಹಾಗೂ ವಿವಿಧ ಯೋಜನೆಗಳನ್ನು ಒಗ್ಗೂಡಿಸುವ ಮತ್ತು ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸಮಗ್ರ ಚೌಕಟ್ಟನ್ನು ರೂಪಿಸುತ್ತದೆ.

ನೀತಿಯ ಜೊತೆಯಲ್ಲಿ, ಹಣಕಾಸು ಸಾಧನಗಳ ವ್ಯಾಪ್ತಿಯನ್ನೂ ವಿಸ್ತರಿಸಲಾಗಿದೆ.

ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (NCDC) ಸಹಕಾರಿ ಯೋಜನೆಗಳಿಗೆ ಹಣಕಾಸು ಒದಗಿಸುವ ಪ್ರಮುಖ ಸಂಸ್ಥೆಯಾಗಿ ವರ್ಷದಿಂದ ವರ್ಷಕ್ಕೆ ತನ್ನ ಸಾಲ ವಿತರಣೆ ಪ್ರಮಾಣದಲ್ಲಿ ಗಣನೀಯ ಏರಿಕೆಯನ್ನು ವರದಿ ಮಾಡಿದೆ. ಇದು ಕೃಷಿ, ಪೂರಕ ಚಟುವಟಿಕೆಗಳು ಮತ್ತು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಸಹಕಾರಿಗಳಿಗೆ ನೀಡುವ ಸಾಲದ ಪ್ರಮಾಣವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶವನ್ನು ಹೊಂದಿದೆ.

ಇದಲ್ಲದೆ, NCDC ಯ ಸಾಲ ನೀಡುವ ಸಾಮರ್ಥ್ಯವನ್ನು ಬಲಪಡಿಸಲು ಕೇಂದ್ರ ಸರ್ಕಾರದ ಅನುದಾನ (grant-in-aid) ಯೋಜನೆಗಳು ಮತ್ತು ಅನುಮೋದನೆಗಳು ಸರ್ಕಾರದ ಸಹಕಾರಿ ಹಣಕಾಸಿನ ಉದ್ದೇಶವನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಕಾರ್ಯಾಚರಣೆಯ ದೃಷ್ಟಿಯಿಂದ, ಸಹಕಾರ ಸಚಿವಾಲಯವು ಕಂಅಖಗಳನ್ನು ಬಹುಉದ್ದೇಶ ಕೇಂದ್ರಗಳಾಗಿ ಪರಿವರ್ತಿಸಲು ಮಾದರಿ ನಿಯಮಾವಳಿಗಳನ್ನು (Model Bye-laws) ಜಾರಿಗೊಳಿಸಿದೆ. ಇದರ ಜೊತೆಗೆ, ಕಂಪ್ಯೂಟರೀಕರಣ ಮತ್ತು ಡಿಜಿಟಲ್ ಪ್ಲಾಟ್ಫಾರ್ಮ್‌ಗಳ ಮೂಲಕ ಸದಸ್ಯರ ನೋಂದಣಿ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದೆ.

ಕಂಅಖಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ (Common Service Centres) ರೂಪಿಸುವ ಕಲ್ಪನೆಗೆ ಉತ್ತೇಜನ ನೀಡಲಾಗಿದ್ದು, ಇದರ ಮೂಲಕ ಗ್ರಾಮ ಮಟ್ಟದಲ್ಲಿ ಸಾಲ, ಒಳ ಹರಿವು ಸರಬರಾಜು, ಮಾರ್ಕೆಟಿಂಗ್, ವಿಸ್ತರಣೆ ಸೇವೆಗಳು ಮತ್ತು ಕೆಲವು ಸಾರ್ವಜನಿಕ

ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

ಈ ಕ್ರಮಗಳು ಕಳೆದ ಹಲವಾರು ದಶಕಗಳಿಂದ PACSಗಳಲ್ಲಿ ಕಂಡುಬಂದ ಸದ್ಬಳಕೆಯಾಗದೆ ಇರುವ ಮತ್ತು ಸ್ಥಗಿತಾವಸ್ಥೆಯನ್ನು ಸರಿಪಡಿಸುವ ಉದ್ದೇಶ ಹೊಂದಿದ್ದು, ಗ್ರಾಮೀಣ ಸಹಕಾರಿ ಪುನರುಜ್ಜೀವನದ ಕೇಂದ್ರಬಿಂದುವಾಗಿ ಅವುಗಳನ್ನು ರೂಪಿಸಲು ವಿನ್ಯಾಸಗೊಳಿಸಲಾಗಿದೆ.

**1. ಆರ್ಥಿಕ ಒಕ್ಕೂಟ ಮತ್ತು ಮೌಲ್ಯ ಸರಪಳಿ ಏಕೀಕರಣ**

ಸಹಕಾರಿಗಳು ಸಣ್ಣ ಉತ್ಪಾದಕರು ವಿಭಜಿತ ಮತ್ತು ಅಸಂಘಟಿತ ಉತ್ಪಾದನೆಯ ಕಾರಣದಿಂದ ನಷ್ಟ ಅನುಭವಿಸುತ್ತಾರೆ. ಸಹಕಾರಿಗಳು ಈ ಸಮಸ್ಯೆಯನ್ನು ನಿವಾರಿಸಲು ಸಮೂಹ ಖರೀದಿ, ಸಂಸ್ಕರಣೆ, ಮಾರ್ಕೆಟಿಂಗ್ ಮತ್ತು ಸಂಗ್ರಹಣೆ ಕ್ಷೇತ್ರಗಳಲ್ಲಿ ಆರ್ಥಿಕ ಪ್ರಮಾಣದ ಪ್ರಯೋಜನ (Economies of scale) ಪಡೆಯಲು ಉತ್ಪಾದನೆಗಳನ್ನು ಒಟ್ಟುಗೂಡಿಸಬಹುದು.

ಸಹಕಾರಿಗಳು ಗ್ರೇಡಿಂಗ್, ಶೀತಲ ಸರಪಳಿ (Cold Chain), ಮೌಲ್ಯವರ್ಧನೆ (Value Addition) ಮುಂತಾದ ಮೂಲ ಸಂಸ್ಕರಣೆ ಕಾರ್ಯಗಳಲ್ಲಿ ಸಂಯುಕ್ತ ಹೂಡಿಕೆ ಮಾಡಿದಾಗ, ಅವರು ಉತ್ಪನ್ನದ ಬೆಲೆಯಲ್ಲಿ ಹೆಚ್ಚಿನ ಹಂಚಿಕೆಯನ್ನು ಪಡೆಯಲು, ಕೃಷಕರ ಆದಾಯವನ್ನು ಹೆಚ್ಚಿಸಲು, ಮತ್ತು ಸ್ಥಳೀಯ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ ಸಹಕಾರಿ ನೀತಿ 2025 (NCP 2025) ಈ ಮಾರ್ಗವನ್ನು ಬಲಪಡಿಸುತ್ತದೆ – ಏಕೆಂದರೆ ಅದು ಸಹಕಾರಿಗಳಿಗೆ ವಿಭಾಗ–ನಿರ್ದಿಷ್ಟ ಪ್ರೋತ್ಸಾಹಗಳು (sector-specific incentives) ಲಭ್ಯವಾಗುವಂತೆ ಮಾಡುತ್ತದೆ ಹಾಗೂ ತೆರಿಗೆ ಭಾರವನ್ನು ಕಡಿಮೆ ಮಾಡುವ ಮೂಲಕ ಸಹಕಾರಿಗಳ ಆರ್ಥಿಕ ಸ್ಥಿರತೆಯನ್ನು ಹೆಚ್ಚಿಸುತ್ತದೆ.

**2. ಗ್ರಾಮೀಣ ಅಗತ್ಯಗಳಿಗೆ ಲಭ್ಯವಾಗುವ ದೀರ್ಘಾವಧಿ ಹಣಕಾಸು**

ಪಾರಂಪರಿಕ ಗ್ರಾಮೀಣ ಸಾಲ ವ್ಯವಸ್ಥೆ ಬಹುಪಾಲು ಅನೌಪಚಾರಿಕ ಅಥವಾ ಅಲ್ಪಾವಧಿಯ ಆಗಿರುವುದರಿಂದ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಬೇಕಾದ ದೀರ್ಘಾವಧಿ ಬಂಡವಾಳದ ಕೊರತೆ ಉಂಟಾಗುತ್ತದೆ.

ಈಗ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (NCDC) ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಸಾಲದ ದಾರಿಗಳನ್ನು ವಿಸ್ತರಿಸಿ, ಸಹಕಾರಿ ಯೋಜನೆಗಳಿಗೆ ನೆರೆಯ ಹಣಕಾಸು (direct financing) ಒದಗಿಸಲು ಅವಕಾಶ ನೀಡುತ್ತಿವೆ. ಇದರ ಮೂಲಕ ಸಹಕಾರಿಗಳಿಗೆ ಕೃಷಿ, ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಗ್ರಾಮೀಣ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSMEs) ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಸುಲಭ ಬಡ್ಡಿದರದ ಕಾರ್ಯಾಚರಣಾ ಬಂಡವಾಳ (working capital) ಒದಗಿಸಲು ಸಾಧ್ಯವಾಗುತ್ತದೆ.

ಇಂತಹ ಕಡಿಮೆ ಬಡ್ಡಿದರದ, ಯೋಜನೆ ಆಧಾರಿತ ಸಾಲಗಳು ಸಹಕಾರಿಗಳಿಗೆ ಯಂತ್ರೋಪಕರಣಗಳು, ಪ್ಯಾಕಿಂಗ್ ಲೈನ್‌ಗಳು ಮತ್ತು ಸಂಗ್ರಹಣಾ ಸೌಲಭ್ಯಗಳಂತಹ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲು ಸಹಾಯಮಾಡುತ್ತವೆ ಇದರಿಂದ ಅವರು ಬಲವಂತದ ತುರ್ತು ಮಾರಾಟದ (distress sales) ಅವಲಂಬನೆ ತಪ್ಪಿಸಿ, ಸ್ಥಿರ ಆದಾಯ ಮತ್ತು ಲಾಭದಾಯಕತೆ ಸಾಧಿಸಬಹುದು.

**3. ಸ್ಥಳೀಯ ಸೇವಾ ವಿತರಣೆ ಮತ್ತು ಸಾಮಾಜಿಕ ರಕ್ಷಣಾ ವ್ಯವಸ್ಥೆ**

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು (PACS) ಹಾಗೂ ಇತರ ಪ್ರಾಥಮಿಕ ಸಹಕಾರಿಗಳು ಗ್ರಾಮೀಣ ಪ್ರದೇಶದಲ್ಲಿ ಸೇವಾ ವಿತರಣೆಗಾಗಿ ಅತ್ಯಂತ ಸೂಕ್ತವಾದ ಸಂಸ್ಥೆಗಳು. ಇವು ಬೀಜ ವಿತರಣೆ, ಕೃಷಿ ಒಳನಾಡು ಸರಬರಾಜು, ಬೆಳೆ ವಿಮೆ ಸಹಾಯ, ತರಕಾರಿಗಳ ಶೀತ ಸರಪಳಿ (cold chain), ರಸಗೊಬ್ಬರ ವಿತರಣೆ, ಮತ್ತು ಸರ್ಕಾರದ ಸಾರ್ವಜನಿಕ ಹಕ್ಕುಪತ್ರಗಳ (public entitlements) ವಿತರಣೆ ಮೊದಲಾದ ಅನೇಕ ಸೇವೆಗಳನ್ನು ಒದಗಿಸಲು ಸಮರ್ಥವಾಗಿವೆ.

ಕಂಅಖಗಳನ್ನು ಡಿಜಿಟಲೀಕರಿಸಿ ಹಾಗೂ ತರಬೇತಿ ನೀಡಿ, ಅವುಗಳನ್ನು ಸಾಮಾನ್ಯ ಸೇವಾ ಕೇಂದ್ರಗಳ ರೂಪದಲ್ಲಿ ಕಾರ್ಯನಿರ್ವಹಿಸಲು ಸಜ್ಜುಗೊಳಿಸಿದಾಗ, ಗ್ರಾಮೀಣ ನಾಗರಿಕರಿಗೆ ಸೇವೆಗಳು ಸುಲಭವಾಗಿ ದೊರಕುತ್ತವೆ ಮತ್ತು ಸಹಕಾರಿಗಳಿಗೆ ಸೇವಾ ಶುಲ್ಕದ ರೂಪದಲ್ಲಿ ಆದಾಯದ ಹೊಸ ಮೂಲ ಸೃಷ್ಟಿಯಾಗುತ್ತದೆ.

ಈ ಉದ್ದೇಶಕ್ಕಾಗಿ, ಭಾರತ ಸರ್ಕಾರ ತಯಾರಿಸಿರುವ ಮಾದರಿ ಉಪನಿಯಮಗಳು ಮತ್ತು ಕಂಪ್ಯೂಟರೀಕರಣ ಅಭಿಯಾನಗಳು ಕಂಅಖಗಳನ್ನು ಪುನರ್ಜೀವಗೊಳಿಸಲು ಹಾಗೂ ಅವುಗಳನ್ನು ಗ್ರಾಮೀಣ ಅಭಿವೃದ್ಧಿಯ ಕೇಂದ್ರ ಬಿಂದುಗಳಾಗಿ ರೂಪಾಂತರಗೊಳಿಸಲು ವಿನ್ಯಾಸಗೊಳಿಸಲಾಗಿದೆ.

**4. ಸರ್ವಸಮಾವೇಶಿತ ಉದ್ಯೋಗ ಮತ್ತು ಲಿಂಗ ಸಬಲೀಕರಣ**

ಸಹಕಾರಿಗಳು ಮಹಿಳೆಯರು, ಯುವಕರು ಹಾಗೂ ಅಸಂಘಟಿತ ಕಾರ್ಮಿಕರ ಆರ್ಥಿಕ ಪಾಲ್ಗೊಳ್ಳುವಿಕೆಗೆ ವೇದಿಕೆ ಆಗಿವೆ. ಮಹಿಳಾ ಸ್ವಸಹಾಯ ಗುಂಪುಗಳ ಒಕ್ಕೂಟಗಳು, ಮಹಿಳಾ ಹಾಲು ಉತ್ಪಾದನಾ ಹಾಗೂ ಹಸ್ತಶಿಲ್ಪ ಸಹಕಾರಿಗಳು, ಯುವಕರ ಕೃಷಿ ಆಧಾರಿತ ಸ್ಟಾರ್ಟ್‌ಅಪ್‌ಗಳು, ಮತ್ತು ಕಾರ್ಮಿಕ ಸಹಕಾರಿಗಳು ಈ ದಿಕ್ಕಿನಲ್ಲಿ ಪ್ರಾಮುಖ್ಯ ಪಾತ್ರವಹಿಸುತ್ತವೆ.

ಸರ್ವಸಮಾವೇಶಿತ ಯೋಜನೆಗಳ ಮೇಲಿನ ನೀತಿ ಕೇಂದ್ರೀಕರಣ ಹಾಗೂ ಹಾಲು, ಮೀನುಗಾರಿಕೆ, ಆಹಾರ ಸಂಸ್ಕರಣೆ ಮುಂತಾದ ಸಹಾಯಕ ಕ್ಷೇತ್ರಗಳಲ್ಲಿ ಸಹಕಾರಿಗಳ ಬಳಕೆ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ

ನೈಪುಣ್ಯ ಮತ್ತು ಅರೆ–ನೈಪುಣ್ಯ ಉದ್ಯೋಗಗಳ ಬೇಡಿಕೆಯನ್ನು ಉಂಟುಮಾಡುತ್ತದೆ. ಇದರ ಮೂಲಕ ಗ್ರಾಮೀಣ ಆದಾಯವನ್ನು ಸ್ಥಿರಗೊಳಿಸಲು ಹಾಗೂ ನಗರಗಳತ್ತ ನಡೆಯುವ ಬಲವಂತದ ವಲಸೆಯನ್ನು ತಡೆಯಲು ಸಹಕಾರಿಯಾಗುತ್ತದೆ.

ಈ ರೀತಿಯ ಸಹಕಾರಿ ಚಳವಳಿಗಳು ಮಹಿಳೆಯರ ಸಬಲೀಕರಣ, ಯುವಕರ ಉದ್ಯಮಶೀಲತೆ, ಮತ್ತು ಗ್ರಾಮೀಣ ಆರ್ಥಿಕ ಪುನರುಜ್ಜೀವನಕ್ಕೆ ನೇರವಾಗಿ ದಾರಿ ಮಾಡಿಕೊಡುತ್ತವೆ.

ಪುನರುಜ್ಜೀವಿತ ನೀತಿಗಳು ಮತ್ತು ಹಣಕಾಸು ಅವಕಾಶಗಳು ಸಹಕಾರಿ ಕ್ಷೇತ್ರದಲ್ಲಿನ ಸಂರಚನಾತ್ಮಕ ಅಡೆತಡೆಗಳನ್ನು ಸ್ವಯಂಚಾಲಿತವಾಗಿ ನಿವಾರಣೆ ಮಾಡುವುದಿಲ್ಲ. ಅನೇಕ ಸಾಮಾನ್ಯ ಮತ್ತು ಪುನರಾವರ್ತಿತ ಸಮಸ್ಯೆಗಳು ಇನ್ನೂ ಮುಂದುವರಿದಿವೆ, ಉದಾಹರಣೆಗೆ

- **ಆಡಳಿತದ ಕೊರತೆಗಳು**

ಅಸಮರ್ಪಕ ಚುನಾವಣೆಗಳು, ರಾಜಕೀಯ ಹಸ್ತಕ್ಷೇಪ, ದುರ್ಬಲ ಲೆಕ್ಕಪತ್ರ ವ್ಯವಸ್ಥೆ ಮತ್ತು ಅಸ್ಪಷ್ಟ ಖರೀದಿ ಕ್ರಮಗಳು ಅನೇಕ ಸಹಕಾರಿ ಸಂಸ್ಥೆಗಳ ಸದಸ್ಯರ ವಿಶ್ವಾಸವನ್ನು ಕುಗ್ಗಿಸಿವೆ. ಸದಸ್ಯ ಶಿಕ್ಷಣ, ಪಾರದರ್ಶಕ ಲೆಕ್ಕಪರಿಶೋಧನೆ ವ್ಯವಸ್ಥೆ ಮತ್ತು ಬಲಿಷ್ಠ ಮೇಲ್ವಿಚಾರಣಾ ಸಂಸ್ಥೆಗಳ ಮೂಲಕ ಆಡಳಿತ ಸುಧಾರಣೆ ನಡೆಯದಿದ್ದರೆ, ಸಂಪನ್ಮೂಲಗಳ ಪ್ರವಾಹ ದುರುಪಯೋಗವಾಗುವ ಅಥವಾ ತಪ್ಪು ಹಂಚಿಕೆಯಾಗುವ ಅಪಾಯವಿದೆ.

- **ವೃತ್ತಿಪರ ಸಾಮರ್ಥ್ಯದ ಅಂತರಗಳು**

ಸಹಕಾರಿ ಮಂಡಳಿಯ ಸದಸ್ಯರಿಗೆ ಆಧುನಿಕ ಮೌಲ್ಯ ಸರಪಳಿ ನಿರ್ವಹಣೆ, ಡಿಜಿಟಲ್ ಉಪಕರಣಗಳು, ಮಾರಾಟ, ಖರೀದಿ ಮತ್ತು ಲೆಕ್ಕಪತ್ರ ತಂತ್ರಜ್ಞಾನಗಳಲ್ಲಿ ಅಗತ್ಯವಾದ ಅನುಭವವಿಲ್ಲ. ಈ ಕೊರತೆಯನ್ನು ನಿವಾರಿಸಲು ಕ್ರಮಬದ್ಧ ಮತ್ತು ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ.

- **ಮಾರುಕಟ್ಟೆ ಸಂಪರ್ಕ ಮತ್ತು ಬ್ರಾಂಡಿಂಗ್**

ಸಹಕಾರಿಗಳು ಸಂಘಟಿತ ಚಿಲ್ಲರೆ ಮತ್ತು ಇ–ಕಾಮರ್ಸ್ ಮಾರುಕಟ್ಟೆಗಳಲ್ಲಿ ಪ್ರವೇಶಿಸಲು ಮಾರುಕಟ್ಟೆ ಮಾಹಿತಿ, ಪ್ಯಾಕೇಜಿಂಗ್ ಮಾನದಂಡಗಳು ಮತ್ತು ಬ್ರಾಂಡ್ ಅಭಿವೃದ್ಧಿ ಅಗತ್ಯ. ಮಾರಾಟ ಮತ್ತು ಮಾರುಕಟ್ಟೆ ನೈಪುಣ್ಯಗಳಿಲ್ಲದೆ, ಸಹಕಾರಿಗಳು ಮೌಲ್ಯವನ್ನು ಸಂಪಾದಿಸುವ ಬದಲಾಗಿ ಕೇವಲ ಕಚ್ಚಾ ವಸ್ತು ಪೂರೈಕೆದಾರರಾಗಿ ಉಳಿಯುತ್ತಾರೆ.

- **ತಂತ್ರಜ್ಞಾನ ಅಳವಡಿಕೆ ಮತ್ತು ವ್ಯಾಪ್ತಿಯ ಸಮಸ್ಯೆ**

ಡಿಜಿಟಲೀಕರಣವು ಕೇವಲ ಸಾಫ್ಟ್‌ವೇರ್ ವಿಷಯವಲ್ಲ – ಅದು ಹಾರ್ಡ್‌ವೇರ್, ವೇಗವಾದ ಇಂಟರ್ನೆಟ್ ಸಂಪರ್ಕ ಮತ್ತು ಗ್ರಾಮ ಮಟ್ಟದ ಬಳಕೆದಾರ ತರಬೇತಿಯನ್ನು ಕೂಡ ಒಳಗೊಂಡಿದೆ. ಕಂಪ್ಯೂಟರೈಜೇಶನ್‌ಗೆ ಒತ್ತು ನೀಡುವ ನೀತಿಯನ್ನು ಅನುಸರಿಸಲು, ಸಂಪರ್ಕ ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯಗಳ ಮೇಲಿನ ಹೂಡಿಕೆ ಅಗತ್ಯ.

ಈ ಸಮಸ್ಯೆಗಳನ್ನು ಪರಿಹರಿಸಲು ನಿಯಂತ್ರಣಾತ್ಮಕ ಕ್ರಮಗಳು, ಸಾಮರ್ಥ್ಯ ನಿರ್ಮಾಣಕ್ಕಾಗಿ ಉದ್ದೇಶಿತ ಅನುದಾನಗಳು ಹಾಗೂ ವೃತ್ತಿಪರ ಸಂಸ್ಥೆಗಳು ಮತ್ತು ಶೈಕ್ಷಣಿಕ ಕ್ಷೇತ್ರಗಳೊಂದಿಗೆ ಸಹಭಾಗಿತ್ವ ಅಗತ್ಯ. ಇದರ ಮೂಲಕ ನಿರ್ವಹಣಾ ನೈಪುಣ್ಯಗಳನ್ನು ಸಹಕಾರಿ ಮಂಡಳಿಗಳಲ್ಲಿ ಮತ್ತು ಸಿಬ್ಬಂದಿಯಲ್ಲಿ ಬೆಳೆಸಬಹುದು.

ಗ್ರಾಮೀಣ ಅಭಿವೃದ್ಧಿಯ ಭರವಸೆಯನ್ನು ಸಾಕಾರಗೊಳಿಸಲು ಪ್ರಾಯೋಗಿಕ ಕಾರ್ಯತಂತ್ರಗಳು

**1. ಗ್ರಾಮ ಮಟ್ಟದ ಅಭಿವೃದ್ಧಿ ಕೇಂದ್ರಗಳಾಗಿ PACSಗಳನ್ನು ರೂಪಿಸುವುದು**

ಪಿಎಸಿಎಸ್ಗಳನ್ನು ಬಹುಸೇವಾ ಕೇಂದ್ರಗಳಾಗಿ ಪರಿವರ್ತಿಸುವ ಅಗತ್ಯವಿದೆ. ಇವು ಕೃಷಿ ಒಳಿತಾದ ಸರಕುಗಳ ಪೂರೈಕೆ, ಕೃಷಿ ವಿಸ್ತರಣೆ, ಬೆಳೆ ಸಂಗ್ರಹಣೆ, ಪಾವತಿ ಸೇವೆಗಳು ಮತ್ತು ಸಣ್ಣ ಪ್ರಮಾಣದ ಸಂಸ್ಕರಣಾ ಚಟುವಟಿಕೆಗಳನ್ನು ಒದಗಿಸಬೇಕು. ಮಾದರಿ ಉಪನಿಯಮಗಳನ್ನು ಬಳಸಿಕೊಂಡು PACSಗಳಿಗೆ ಕಾನೂನುಬದ್ಧ ಹಾಗೂ ಕಾರ್ಯಾಚರಣಾತ್ಮಕ ಚೌಕಟ್ಟು ನೀಡಬೇಕು, ಇದರಿಂದ ಅವು ವಿವಿಧ ಆದಾಯ ಮೂಲಗಳನ್ನು ಅಭಿವೃದ್ಧಿಪಡಿಸಬಹುದು. ಈ ಮಾದರಿಯನ್ನು ಆಯ್ದ ಪ್ರದೇಶಗಳಲ್ಲಿ ಗುರಿಯಿಟ್ಟ ಅನುದಾನ ಮತ್ತು ಕಠಿಣ ನಿಗಾ ವ್ಯವಸ್ಥೆಯೊಂದಿಗೆ ಪೈಲಟ್ ರೂಪದಲ್ಲಿ ಆರಂಭಿಸಿ, ಯಶಸ್ವಿಯಾದ ಮಾದರಿಗಳನ್ನು ಹಂತ ಹಂತವಾಗಿ ದೇಶವ್ಯಾಪಿಯಾಗಿ ವಿಸ್ತರಿಸಬಹುದು.

**2. ಮಿಶ್ರ ಹಣಕಾಸು: ಅನುದಾನಗಳು ಮತ್ತು ಸಡಿಲ ಬಡ್ಡಿದರ ಸಾಲಗಳು**

ಅನುದಾನ ನಿಧಿಗಳನ್ನು ಸಾಮರ್ಥ್ಯ ನಿರ್ಮಾಣ ಮತ್ತು ಪ್ರಾಥಮಿಕ ಹಂತದ ಮೂಲಸೌಕರ್ಯಗಳಿಗಾಗಿ (ಕೋಲ್ಡ್ ಸ್ಟೋರೇಜ್, ಸಣ್ಣ ಸಂಸ್ಕರಣಾ ಘಟಕಗಳು) ಬಳಸಬೇಕು ಮತ್ತು ಬಂಡವಾಳ ವೆಚ್ಚಕ್ಕಾಗಿ ಎನ್ಸಿಡಿಸಿಯಿಂದ ರಿಯಾಯಿತಿ ಬಡ್ಡಿದರದ ಸಾಲಗಳನ್ನು ಪಡೆಯಬೇಕು. ಈ ರೀತಿಯ ಹಣಕಾಸು ಮಾದರಿ ಸಹಕಾರ ಸಂಸ್ಥೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಮೌಲ್ಯವರ್ಧನೆ ಚಟುವಟಿಕೆಗಳನ್ನು ವೇಗವಾಗಿ ಅಳವಡಿಸಿಕೊಳ್ಳಲು ಸಹಕಾರಿಸುತ್ತದೆ. ಇತ್ತೀಚಿನ ಕೇಂದ್ರ ಸರ್ಕಾರದ ಅನುಮೋದನೆಗಳು ಎನ್ಸಿಡಿಸಿ ಬೆಂಬಲವನ್ನು ಹೆಚ್ಚಿಸಿರುವುದರಿಂದ, ಇಂತಹ ಮಿಶ್ರ ಹಣಕಾಸು ಸಾಧನಗಳು ಪ್ರಾಯೋಗಿಕವಾಗಿ ಅತೀ ಉಪಯುಕ್ತವಾಗಿವೆ.

**3. ಆಡಳಿತ ಸುಧಾರಣೆ ಮತ್ತು ಡಿಜಿಟಲ್ ಪಾರದರ್ಶಕತೆ**

ಕಾನೂನುಬದ್ಧ ಲೆಕ್ಕಪರಿಶೋಧನೆಯನ್ನು ಬಲಪಡಿಸಿ, ಸಹಕಾರ ಸಂಘಗಳ ಲೆಕ್ಕಗಳನ್ನು ಆನ್‌ಲೈನ್ ಪ್ರಕಟಿಸಿ, ಸಾಧ್ಯವಾದಲ್ಲಿ ಸಂಘದ ಚುನಾವಣೆಗೆ ಇ–ಮತದಾನ ವ್ಯವಸ್ಥೆಯನ್ನು ಜಾರಿಗೆ ತಂದು, ಮಾದರಿ

ಉಪನಿಯಮಗಳ ಪಾಲನೆಗೆ ಪ್ರದರ್ಶನಾಧಾರಿತ ಅನುದಾನಗಳ ಮೂಲಕ ಪ್ರೋತ್ಸಾಹ ನೀಡಬೇಕು. ಡಿಜಿಟಲ್ ಲೆಡ್ಜರ್‌ಗಳು ಮತ್ತು ಸದಸ್ಯ ಪೋರ್ಟಲ್‌ಗಳು ಉತ್ತರದಾಯಿತ್ವವನ್ನು (accountability) ಹೆಚ್ಚಿಸಿ, ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸುತ್ತವೆ.

### 4. ಮಾರುಕಟ್ಟೆ ಸಂಪರ್ಕ ಮತ್ತು ಬ್ರಾಂಡ್ ನಿರ್ಮಾಣ

ಸಂಘಗಳ ಒಕ್ಕೂಟಗಳ ಮೂಲಕ ಸಾಮಾನ್ಯ ಬ್ರಾಂಡ್ ಮತ್ತು ಗುಣಮಟ್ಟ ನಿಯಂತ್ರಣದ ಮೇಲೆ ಹೂಡಿಕೆ ಮಾಡಬೇಕು; ಉತ್ಪಾದನೆಯನ್ನು ಶಾಲೆಗಳು, ಆಸ್ಪತ್ರೆಗಳು, ಸರ್ಕಾರಿ ಸಂಸ್ಥೆಗಳು ಮುಂತಾದ ಸಂಸ್ಥಾತ್ಮಕ ಖರೀದಿದಾರರಿಗಾಗಿ ಸಂಗ್ರಹಿಸಬೇಕು; ಮಾರುಕಟ್ಟೆ ಪ್ರವೇಶಕ್ಕಾಗಿ ಇ–ಕಾಮರ್ಸ್ ವೇದಿಕೆಗಳೊಂದಿಗೆ ಸಹಕಾರ ಬೆಳೆಸಬೇಕು; ಮತ್ತು ಪ್ಯಾಕೇಜ್ ಆಹಾರಗಳಿಗೆ ಸಂಬಂಧಿಸಿದ FSSAI ಹಾಗೂ ಇತರ ನಿಯಂತ್ರಣ ಮಾನದಂಡಗಳನ್ನು ಪೂರೈಸಲು ಸಹಕಾರ ಸಂಘಗಳಿಗೆ ಬೆಂಬಲ ನೀಡಬೇಕು.

### 5. ಸಾಮರ್ಥ್ಯ ವೃದ್ಧಿ ಮತ್ತು ಜ್ಞಾನ ಜಾಲಗಳು

ಕೃಷಿ ವಿಶ್ವವಿದ್ಯಾಲಯಗಳು ಮತ್ತು ಬಿಸಿನೆಸ್ ಶಾಲೆಗಳ ಸಹಯೋಗದೊಂದಿಗೆ ಪ್ರಾದೇಶಿಕ ಸಹಕಾರ ಸಂಪನ್ಮೂಲ ಕೇಂದ್ರಗಳನ್ನು (ಖಅ) ಸ್ಥಾಪಿಸಬೇಕು. ಇವುಗಳಲ್ಲಿ ಉದ್ಯಮ ನಿರ್ವಹಣೆ, ಡಿಜಿಟಲ್ ಸಾಧನಗಳ ಬಳಕೆ, ಲೆಕ್ಕಪತ್ರ ನಿರ್ವಹಣೆ ಮತ್ತು ಮಾರಾಟ ತಂತ್ರಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಬೇಕು.

### 6. ಯುವಕರು ಮತ್ತು ಮಹಿಳೆಯರ ಕೇಂದ್ರಿತ ಉದ್ಯಮಗಳು:

ಗ್ರಾಮೀಣ ತಂತ್ರಜ್ಞಾನ ಮತ್ತು ಲಾಜಿಸ್ಟಿಕ್ಸ್ ಕ್ಷೇತ್ರಗಳಲ್ಲಿ (ಕೊಲ್ಡ್ ಚೈನ್ ನಿರ್ವಹಣೆ, ಡಿಜಿಟಲ್ ಏಕೀಕರಣ) ಯುವಕರಿಗೆ ಗುರಿಯಾದ ಇಂಕ್ಯೂಬೇಷನ್ ಕಾರ್ಯಕ್ರಮಗಳನ್ನು ರೂಪಿಸಬೇಕು. ಮಹಿಳಾ ಸಹಕಾರಿಗಳಿಗೆ ಸಂಸ್ಕರಣೆ, ಪ್ಯಾಕೇಜಿಂಗ್ ಮತ್ತು ಚಿಲ್ಲರೆ ಮಾರಾಟಕ್ಕಾಗಿ ಬೀಜ ಅನುದಾನಗಳನ್ನು ನೀಡಬೇಕು.

### ಸಪ್ತಾಹ ದಿನದಂದು NCUIಯ ಪಾತ್ರ – ಒಂದು ತಂತ್ರಾತ್ಮಕ ಅವಕಾಶ

ಈ ಸಪ್ತಾಹದಿನದಿನವನ್ನು (ನವೆಂಬರ್ 14–20ರ ಅವಧಿಯಲ್ಲಿ ನಡೆಯುವ ಓಅಗಖಯ ಅಖಿಲ ಭಾರತ ಸಹಕಾರ ಸಪ್ತಾಹದ ಭಾಗವಾಗಿ) ಪ್ರತಿವರ್ಷ ಆಚರಿಸಲಾಗುತ್ತದೆ. ಈ ದಿನವು ಸಹಕಾರ ಚಳವಳಿಯ ಉತ್ಸಾಹವನ್ನು ಏಕೀಕರಿಸಲು, ಸಾಧನೆಗಳನ್ನು ಸಾರ್ವಜನಿಕಗೊಳಿಸಲು ಮತ್ತು ಗುರಿಯನ್ನಿಟ್ಟುಕೊಂಡ ಹಸ್ತಕ್ಷೇಪಗಳನ್ನು ಆರಂಭಿಸಲು ಒಂದು ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ದಿನವು ಕೇವಲ ಪತ್ರಿಕಾತ್ಮಕವಾಗಿರದೆ, ಪ್ರಾಯೋಗಿಕವೂ ಆಗಿದೆ — NCUIಯ ರಾಷ್ಟ್ರೀಯ ಸಮನ್ವಯ ಶಕ್ತಿಯನ್ನು ರಾಜ್ಯ ಮತ್ತು ಜಿಲ್ಲಾ ಸಹಕಾರಿ ಮಹಾಸಂಘಗಳೊಂದಿಗೆ ಸಂಪರ್ಕಿಸುವ ಪ್ರಾಥಮಿಕ ಉಪಕ್ರಮಗಳ ಪುನರ್ ಆರಂಭ ವೇದಿಕೆಯಾಗಿ ಇದನ್ನು ಬಳಸಬಹುದು. (ಸಹಕಾರ ಸಪ್ತಾಹದ ಕುರಿತು NCUIಯ ಕಾರ್ಯನೀತಿಗಳು ಈ ಆಚರಣೆಗಳ ರಾಷ್ಟ್ರೀಯ ಚೌಕಟ್ಟನ್ನು ಒದಗಿಸುತ್ತವೆ.)

### ರಾಷ್ಟ್ರೀಯ ಗುರುತಿನ ಮತ್ತು ಬ್ರಾಂಡಿಂಗ್ ಪ್ರಚಾರ

### 1. "PACS 2.0" ರಾಷ್ಟ್ರೀಯ ಚಾಲೆಂಜ್ ಪ್ರಾರಂಭಿಸಿ

ಪ್ರಾಥಮಿಕ ಕೃಷಿ ಸಹಕಾರ ಸಂಸ್ಥೆಗಳನ್ನು (PACS) ಬಹುಉದ್ದೇಶ ಸಹಕಾರ ಕೇಂದ್ರಗಳಾಗಿ ರೂಪಾಂತರಗೊಳಿಸಲು ಸ್ಪರ್ಧಾತ್ಮಕ ಹಾಗೂ ಸಮಯ ಸೀಮಿತ ಅನುದಾನ ಯೋಜನೆ ಪ್ರಾರಂಭಿಸಬಹುದು. ವಿಜೇತ ಸಂಸ್ಥೆಗಳಿಗೆ ಬೀಜ ಅನುದಾನ, ತಾಂತ್ರಿಕ ಸಹಾಯ ಹಾಗೂ ವೇಗದ ಓಅಆಅ ಸಂಪರ್ಕಗಳು ನೀಡಲಾಗುತ್ತವೆ. ಈ ಯೋಜನೆ ಮಾದರಿ ಉಪನಿಯಮಗಳ (Model Bye-laws) ತತ್ವವನ್ನು ಕೇವಲ ಕಾಗದದಲ್ಲೇ ಅಲ್ಲ, ನೈಜ, ಅನುಕರಿಸಬಹುದಾದ ಮಾದರಿಗಳಾಗಿ ಪರಿವರ್ತಿಸುತ್ತದೆ.

### 2. ರಾಷ್ಟ್ರೀಯ ಮಾರುಕಟ್ಟೆ ಸಂಪರ್ಕ ಸಮ್ಮೇಳನ

ರಾಜ್ಯ ಮತ್ತು ರಾಷ್ಟ್ರೀಯ ಸಹಕಾರಿ ಮಹಾಮಂಡಳಗಳು, ಮೌಲ್ಯಯುತ ಇತರೆ ಸರಪಳಿಗಳು, ಇ–ಕಾಮರ್ಸ್ ಸಂಸ್ಥೆಗಳು ಹಾಗೂ ಹಣಕಾಸು ಸಂಸ್ಥೆಗಳು ಭಾಗವಹಿಸುವ ಸಮ್ಮೇಳನವನ್ನು ಆಯೋಜಿಸಿ. ಈ ವೇದಿಕೆಯಲ್ಲಿ ಖರೀದಿ ಒಪ್ಪಂದಗಳು (MoUs) ಸಹಿ ಮಾಡಿ ಹಾಗೂ ಸಹಕಾರ ಉತ್ಪನ್ನಗಳ ಇ–ಮಾರ್ಕೆಟ್ ಪೈಲಟ್ ಯೋಜನೆಗಳನ್ನು ಪ್ರಾರಂಭಿಸಬಹುದು. ಸಪ್ತಾಹದಿನದಂದು ಪ್ರಾರಂಭಿಕ ಖರೀದಿ ಬದ್ಧತೆಗಳು ಘೋಷಿಸಬಹುದು.

### 3. ಸಾಮರ್ಥ್ಯ ನಿರ್ಮಾಣ ಕಾರ್ಯಾಚರಣೆ

ಮುಖ್ಯ ಕೃಷಿ ವಿಶ್ವವಿದ್ಯಾಲಯಗಳು ಮತ್ತು ನಿರ್ವಹಣಾ ಸಂಸ್ಥೆಗಳ ಸಹಯೋಗದಲ್ಲಿ ವರ್ಷಪೂರ್ತಿ ತರಬೇತಿ ಕಾರ್ಯಕ್ರಮಗಳ ಕ್ಯಾಲೆಂಡರ್ ಪ್ರಕಟಿಸಬಹುದು. ತರಬೇತಿ ವಿಷಯಗಳು – ಡಿಜಿಟಲ್ ಲೆಕ್ಕಪತ್ರ, ಆಡಳಿತ, ಮಾರುಕಟ್ಟೆ ನಿರ್ವಹಣೆ, ಮತ್ತು ಕೃಷಿ ವ್ಯವಹಾರ (Agribusiness). ಓಅಗಖ ರಾಜ್ಯ ಮಹಾಮಂಡಲಗಳಿಗೆ ಪ್ರಮಾಣಿತ ಸಂಪನ್ಮೂಲ ವ್ಯಕ್ತಿಗಳನ್ನು (Certified Resource Persons) ತಯಾರಿಸಬಹುದು.

### 4. ಪಾರದರ್ಶಕತೆ ಮತ್ತು ಗೌರವ

ಸಹಕಾರಿ ಸಂಸ್ಥೆಗಳ ರಾಷ್ಟ್ರೀಯ ಕಾರ್ಯಕ್ಷಮತಾ ಅಂಕಪಟ್ಟಿ ಪ್ರಕಟಿಸಬಹುದು ಇದರಲ್ಲಿ ಡಿಜಿಟಲೀಕರಣ, ಲೆಕ್ಕಪತ್ರ ಪರಿಶೀಲನೆ, ಸದಸ್ಯ ಸೇವೆಗಳು ಮತ್ತು ಆರ್ಥಿಕ ಸ್ಥಿತಿ ಒಳಗೊಂಡಿರುತ್ತದೆ. (ಅಂಕಪಟ್ಟಿ ಸ್ವಯಂಪ್ರೇರಿತ ಅಥವಾ ಅನಾಮಧೇಯವಾಗಿರಬಹುದು). ಸಪ್ತಾಹದಿನದಂದು ಶ್ರೇಷ್ಠ ಸಾಧಕರಿಗೆ ಪ್ರಶಸ್ತಿಗಳು ಮತ್ತು ಮಾನ್ಯತೆ ನೀಡಿ ಧನಾತ್ಮಕ ಸ್ಪರ್ಧಾತ್ಮಕ ವಾತಾವರಣ ನಿರ್ಮಿಸಬಹುದು.

**5. ಯುವಕರು ಮತ್ತು ಮಹಿಳೆಯರ ಸ್ಟಾರ್ಟ್–ಅಪ್ ಮೇಳ**

ಯುವಕರು ಮತ್ತು ಮಹಿಳೆಯರ ಸಹಕಾರಿ ಉದ್ಯಮಿಕ ಉದ್ದಿಮೆಗಳನ್ನು ಪ್ರದರ್ಶಿಸುವ ಮೇಳವನ್ನು ಆಯೋಜಿಸಬಹುದು. ಅಲ್ಲಿ ಆಯ್ಕೆಗೊಂಡ ಸಂಸ್ಥೆಗಳಿಗೆ ಇಂಕ್ಯೂಬೇಷನ್, ಬೀಜ ಅನುದಾನ ಮತ್ತು NCDC/ರಾಜ್ಯ ನಿಧಿ ಸಂಪರ್ಕಗಳು ಕಲ್ಪಿಸಬಹುದು.ಹೆಚ್ಚು ಭರವಸೆಯ ಸಹಕಾರಿ ಸ್ಟಾರ್ಟ್ ಆಪ್ ಗಳನ್ನು NCUI ಸಂಸ್ಥೆಯಲ್ಲಿ ಸಂಪರ್ಕಿಸಬಹುದು.

**5. ಸಾರ್ವಜನಿಕ ಜಾಗೃತಿ ಮತ್ತು ಸದಸ್ಯ ಶಿಕ್ಷಣ ಅಭಿಯಾನ**

ಮುದ್ರಣ ಮಾಧ್ಯಮ, ರೇಡಿಯೋ, ಸಾಮಾಜಿಕ ಮಾಧ್ಯಮಗಳ ಮೂಲಕ ರಾಷ್ಟ್ರವ್ಯಾಪಿ ಅಭಿಯಾನ ಪ್ರಾರಂಭಿಸಬಹುದು. ಈ ಅಭಿಯಾನ ಸದಸ್ಯರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಸಕ್ರಿಯ ಸದಸ್ಯತ್ವದ ಪ್ರಯೋಜನಗಳು ಕುರಿತು ಅರಿವು ಮೂಡಿಸುತ್ತದೆ ಉದಾ: ಲೆಕ್ಕಪತ್ರ ಪರಿಶೀಲನೆ, ಸಭೆಗಳಲ್ಲಿ ಪಾಲ್ಗೊಳ್ಳುವುದು, ಡಿಜಿಟಲ್ ಸೇವೆಗಳ ಉಪಯೋಗ.

**6. ಡೇಟಾ ಮತ್ತು ಜ್ಞಾನ ಪೋರ್ಟಲ್ ಬಿಡುಗಡೆ**

ಸಪ್ತಾಹದಿನದಂದು ಸಹಕಾರಿ ಜ್ಞಾನ ಪೋರ್ಟಲ್ ಅನಾವರಣಗೊಳಿಸಬಹುದು ಇದರಲ್ಲಿ ಕೇಸ್ ಸ್ಟಡಿ, ಮಾದರಿ ಉಪನಿಯಮಗಳು, ತರಬೇತಿ ಪಾಠಕ್ರಮಗಳು, ಮಾರುಕಟ್ಟೆ ಮಾಹಿತಿ ಮತ್ತು ಅನುದಾನ ಅರ್ಜಿ ಮಾದರಿಗಳು ಲಭ್ಯವಿರುತ್ತವೆ. ಇದರಿಂದ ಸಹಕಾರಿ ಸಂಸ್ಥೆಗಳು ಯಶಸ್ವಿ ಮಾದರಿಗಳನ್ನು ಪುನರುತ್ಪಾದಿಸಬಹುದು.

**8. ರಾಜ್ಯವಾರು ಜಾಥಾಗಳು**

NCUI ತಂಡಗಳು ಆಯ್ಕೆಗೊಂಡ ರಾಜ್ಯಗಳಲ್ಲಿ ಪ್ರಚಾರ ಶಿಬಿರಗಳು ಮತ್ತು ಜಾಥಾಗಳನ್ನು ನಡೆಸಬಹುದು.ಇವುಗಳಲ್ಲಿ ಹೊಸ ಕೇಂದ್ರ ಯೋಜನೆಗಳು, ಡಿಜಿಟಲ್ ನೋಂದಣಿ ಕ್ರಮಗಳು, ಓಅಆಅ ಸಾಲ ಸೌಲಭ್ಯಗಳು ಕುರಿತು ಮಾಹಿತಿ ನೀಡಬಹುದು. ಇದರಿಂದ ರಾಷ್ಟ್ರೀಯ ನೀತಿಯನ್ನು ಸ್ಥಳೀಯ ಕ್ರಿಯಾತ್ಮಕ ಹಂತಗಳಿಗೆ ಪರಿವರ್ತಿಸಬಹುದು.

**NCUI ಅನುಷ್ಠಾನ ಪರಿಶೀಲನಾ ಪಟ್ಟಿ**

- ಸಹಕಾರ ಸಚಿವಾಲಯ, NCDC, NABARD, ರಾಜ್ಯ ರಿಜಿಸ್ಟ್ರಾರ್‌ಗಳು ಇತ್ಯಾದಿ ಇಲಾಖೆಗಳೊಂದಿಗೆ ಅಂತರ್–ಸಚಿವಾಲಯ ಚರ್ಚಾವೇದಿಕೆ ಆಯೋಜಿಸಿ — PACS ಸುಧಾರಣಾ ಪೈಲಟ್ ಯೋಜನೆಗಳ ಅನುಷ್ಠಾನ ಕ್ರಮ ರೂಪಿಸಬೇಕು.
- "PACS 2.0" ಅನುದಾನ ಯೋಜನೆಗೆ ಅರ್ಜಿ ಮಾದರಿಗಳು ಮತ್ತು ಆಯ್ಕೆ ಮಾನದಂಡಗಳನ್ನು ರೂಪಿಸಿ – ಸಪ್ತಾಹದಿನಕ್ಕಿಂತ ಎರಡು ವಾರಗಳ ಮುಂಚೆ ರಾಜ್ಯ ಮಹಾಮಂಡಳಗಳಿಗೆ ಕಳುಹಿಸಬೇಕು.
- ಮಾರ್ಕೆಟ್ ಲಿಂಕೇಜ್ ಸಮ್ಮೇಳನದಲ್ಲಿ ಕನಿಷ್ಠ ಎರಡು ಪ್ರಮುಖ ಸಂಸ್ಥೆಗಳ (ಒಂದು ಸರ್ಕಾರಿ, ಒಂದು ಖಾಸಗಿ) ಜೊತೆ ಖರೀದಿ ಒಪ್ಪಂದಗಳು (MoUs) ಸಹಿ ಮಾಡಬೇಕು.
- ತರಬೇತಿ ಕ್ಯಾಲೆಂಡರ್ ಅನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿ, ಮೊದಲ 500 ಸಹಕಾರಿ ನಿರ್ವಾಹಕರನ್ನು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ನೋಂದಾಯಿಸಬೇಕು.
- ಸಹಕಾರಿ ಜ್ಞಾನ ಪೋರ್ಟಲ್ ಅನ್ನು ಪ್ರಾರಂಭಿಸಿ ಮಹಾಮಂಡಳಗಳನ್ನು ತಮ್ಮ ಯಶಸ್ಸಿನ ಕಥೆಗಳು ಮತ್ತು ಉಪಕರಣಗಳನ್ನು ಹಂಚಿಕೊಳ್ಳಲು ಆಹ್ವಾನಿಸಬೇಕು.

**ಸಮಾಪನೆ**

**ಗ್ರಾಮೀಣ ಅಭಿವೃದ್ಧಿಯ ತಂತ್ರವಾಗಿ ಸಹಕಾರ ಪುನರುಜ್ಜೀವನ**

ಭಾರತದ ರಾಷ್ಟ್ರೀಯ ಸಹಕಾರ ನೀತಿ 2025, ಓಅಆಅ ಮೂಲಕ ಬಲಪಡಿಸಿದ ಹಣಕಾಸು ವ್ಯವಸ್ಥೆ, ಮತ್ತು ಕಂಅಖ ಆಧುನೀಕರಣದ ಕಾರ್ಯತಂತ್ರಗಳು ಇವೆಲ್ಲವು ಸಹಕಾರ ಕ್ಷೇತ್ರಕ್ಕೆ ಇತಿಹಾಸಾತ್ಮಕ ಅವಕಾಶವನ್ನು ಒದಗಿಸುತ್ತಿವೆ.

ಈ ನೀತಿ ಉದ್ದೇಶಗಳನ್ನು ಸಮರ್ಪಕ ಅನುಷ್ಠಾನ (ಪಾರದರ್ಶಕ ಆಡಳಿತ, ಸಾಮರ್ಥ್ಯ ನಿರ್ಮಾಣ, ಮಾರುಕಟ್ಟೆ ಏಕೀಕರಣ ಮತ್ತು ಡಿಜಿಟಲ್ ಒಳಗೊಳ್ಳಿಕೆ) ಮೂಲಕ ನಿಭಾಯಿಸಿದರೆ, ಸಹಕಾರಿ ಸಂಸ್ಥೆಗಳು ಗ್ರಾಮೀಣ ಮೌಲ್ಯ ಸರಪಳಿಗಳನ್ನು ಪರಿವರ್ತಿಸಬಹುದು, ರೈತರ ಆದಾಯವನ್ನು ಸ್ಥಿರಗೊಳಿಸಬಹುದು ಮತ್ತು ಗೌರವಯುತ ಸ್ಥಳೀಯ ಉದ್ಯೋಗಾವಕಾಶಗಳನ್ನು ನಿರ್ಮಿಸಬಹುದು.

NCUI ಸಹಕಾರಿ ವಾರದ ಸಮಯದಲ್ಲಿ ಆಚರಿಸಲ್ಪಡುವ ಸಪ್ತಾಹ ದಿನದ ಮಹತ್ವ ಅಂದರೆ – ಅದು ಕೇವಲ ಸಂಕೇತಾತ್ಮಕ ಆಚರಣೆಯಲ್ಲ, ಅದನ್ನು ಯೋಜನಾತ್ಮಕ ವೇದಿಕೆಯಾಗಿ ಪರಿವರ್ತಿಸುವ ಅವಕಾಶವಾಗಿದೆ.

ಈ ದಿನವು ನೀತಿಯ ಸಾಧನೆಗಳನ್ನು ಸಾರ್ವಜನಿಕಗೊಳಿಸಲು, ಪ್ರೇರಕ ಪೈಲಟ್ ಯೋಜನೆಗಳನ್ನು ಘೋಷಿಸಲು, ಮತ್ತು ಸಹಕಾರ ಪುನರುಜ್ಜೀವನದ ರಾಷ್ಟ್ರೀಯ ದೃಷ್ಟಿಯನ್ನು ಗ್ರಾಮೀಣ ವಾಸ್ತವಿಕತೆಗೆ ಕೊಂಡೊಯ್ಯಲು NCUI ತನ್ನ ನಾಯಕತ್ವವನ್ನು ಸಮರ್ಪಿಸುವ ದಿನ ಆಗಿರಬಹುದು.

ಈ ರೀತಿಯ ನಿಟ್ಟಿನಲ್ಲಿ ಸಪ್ತಾಹ ದಿನವು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಉತ್ತೇಜನ ನೀಡುವ ತಂತ್ರಾತ್ಮಕ ಅವಕಾಶವಾಗಿ ರೂಪುಗೊಳ್ಳುತ್ತದೆ.

# 17 ನವೆಂಬರ್ 2025
## ವಿಷಯ: ರಾಷ್ಟ್ರೀಯ ಸಹಕಾರ ನೀತಿಯ ಪರಿಸರ ವ್ಯವಸ್ಥೆ, ಭಾರತದ ಸಹಕಾರಿ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ
## National Cooperation Policy Ecosystem, structured roadmap for India's cooperatives

ಅನುವಾದ : ಶ್ರೀಮತಿ ದಿವ್ಯ ಟಿ. ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಭಾರತೀಯ ಸಮಾಜದಲ್ಲಿ ಜೀವನದ ಸಾರ್ವತ್ರಿಕ ತತ್ವವಾಗಿ ಸಹಕಾರವು ಹುದುಗಿದೆ ಮತ್ತು ಪ್ರಾಚೀನ ಭಾರತೀಯ ಧರ್ಮ ಗ್ರಂಥವಾದ ಋಗ್ವೇದವು ಸೃಷ್ಟಿಯ ಬೋಧನೆಯಲ್ಲಿ ಸಹಕಾರವನ್ನು ಒತ್ತಿ ಹೇಳುತ್ತದೆ. ಭಾರತದಲ್ಲಿ ಸಹಕಾರಿ ಸಂಸ್ಥೆಗಳು ದೀರ್ಘ ಇತಿಹಾಸವನ್ನು ಹೊಂದಿದ್ದು, ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ರೈತರು, ಕಾರ್ಮಿಕರು ಮತ್ತು ಗ್ರಾಹಕರು ಎದುರಿಸುತ್ತಿರುವ ಬಡತನ, ಅಸಮಾನತೆ ಮತ್ತು ಶೋಷಣೆಯ ಸಮಸ್ಯೆಗಳನ್ನು ಪರಿಹರಿಸುವ ಒಂದು ಸಾಧನವಾಗಿ ಸಹಕಾರಿ ಚಳುವಳಿ ಹೊರಹೊಮ್ಮಿತು. ಪರಸ್ಪರ ಸಹಾಯ, ಪ್ರಜಾಸತ್ತಾತ್ಮಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಅನುಕೂಲಗಳ ಸಮಾನ ವಿತರಣೆಗೆ ಒತ್ತು ನೀಡುವ ಸಹಕಾರಿ ತತ್ವವು ಭಾರತೀಯ ಜನಸಂಖ್ಯೆಯೊಂದಿಗೆ ಪ್ರತಿಧ್ವನಿಸಿತು.

ಸಹಕಾರಿ ಸಂಘವನ್ನು ರಚಿಸುವ ಹಕ್ಕನ್ನು 97ನೇ ತಿದ್ದುಪಡಿಯ ಭಾಗ 19 (ಬಿ) ರಲ್ಲಿ ಪ್ರತಿಪಾದಿಸಲಾಗಿದೆ. ಇದರಿಂದ ಎಲ್ಲಾ ನಾಗರೀಕರು ಸಹಕಾರಿ ಸಂಘಗಳನ್ನು ರಚಿಸುವುದು ನಾಗರೀಕರ ಮೂಲಭೂತ ಹಕ್ಕಾಗಿದೆ. ರಾಜ್ಯ ನೀತಿಯ ನಿರ್ದೇಶನ ತತ್ವದ 43 (ಬಿ) ವಿಧಿಯು ಸಹಕಾರಿ ಸಂಘಗಳ ಪ್ರಚಾರವನ್ನು ಸಹ ಹೇಳುತ್ತದೆ.

ಸಹಕಾರಿ ಸಂಘಗಳ ಯಶಸ್ಸು ದಕ್ಷ ಕಾರ್ಯ ನಿರ್ವಹಣೆ ಮತ್ತು ಆಡಳಿತ ಹಾಗೂ ಚಾಲ್ತಿಯಲ್ಲಿರುವ ವ್ಯವಹಾರ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯವಾಗಿದೆ. ಅಭಿವೃದ್ಧಿ ಕಾರ್ಯಸೂಚಿಯ ಅನುಷ್ಠಾನದಲ್ಲಿ ಸಹಕಾರಿ ಚಳುವಳಿಯನ್ನು ಪ್ರಮುಖ ಪಾಲುದಾರ ಎಂದು ವಿಶ್ವಸಂಸ್ಥೆ ಗುರುತಿಸುತ್ತದೆ. 2002ರ ಐಎಲ್‌ಓ ಶಿಫಾರಸ್ಸು ಸಂಖ್ಯೆ 193 ಸಹಕಾರಿ ಸಂಸ್ಥೆಗಳ ವ್ಯವಹಾರ ಸಾಮರ್ಥ್ಯವನ್ನು ಉತ್ತೇಜಿಸುವ ಅಗತ್ಯವನ್ನು ಒತ್ತಿ ಹೇಳುತ್ತದೆ, ಇದರಿಂದಾಗಿ ಅವು ಸುಸ್ಥಿರ ಅಭಿವೃದ್ಧಿ ಮತ್ತು ಯೋಗ್ಯ ಉದ್ಯೋಗಕ್ಕೆ ಕೊಡುಗೆ ನೀಡಬಹುದು. ಭಾರತದಲ್ಲಿ ಸಹಕಾರಿ ವಲಯವು ವರ್ಷಗಳಲ್ಲಿ ಗಮನಾರ್ಹ ಬೆಳವಣಿಗೆಯನ್ನು ಕಂಡಿದೆ. ಇಂದು, ಸಹಕಾರಿ ಸಂಸ್ಥೆಗಳು ಕೃಷಿ, ಡೈರಿ, ಮೀನುಗಾರಿಕೆ, ಕೈಮಗ್ಗ, ವಸತಿ, ಸಾಲ ಮತ್ತು ಗ್ರಾಹಕ ಸರಕುಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿವೆ. ರೈತರು, ಕುಶಲಕರ್ಮಿಗಳು, ಕಾರ್ಮಿಕರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಜೀವನೋಪಾಯವನ್ನು ಸುಧಾರಿಸುವಲ್ಲಿ ಅವು ನಿರ್ಣಾಯಕ ಪಾತ್ರ ವಹಿಸಿವೆ.

ಭಾರತವು ವಿಶ್ವದ ನಾಲ್ಕನೇ ಒಂದು ಭಾಗಕ್ಕಿಂತ ಹೆಚ್ಚು ಸಹಕಾರಿ ಸಂಸ್ಥೆಗಳಿಗೆ ನೆಲೆಯಾಗಿದೆ, ಅದರ ಗ್ರಾಮೀಣ ಜನಸಂಖ್ಯೆಯ ಸುಮಾರು ಮೂರನೇ ಒಂದು ಭಾಗದಷ್ಟು ಜನರು ತಮ್ಮ ವೈವಿಧ್ಯಮಯ ಸಾಮಾಜಿಕ–ಆರ್ಥಿಕ ಅಗತ್ಯಗಳಿಗಾಗಿ ನೇರವಾಗಿ ಸದಸ್ಯರಾಗಿ ಸಂಪರ್ಕ ಹೊಂದಿದ್ದಾರೆ. ಭಾರತೀಯ ಸಹಕಾರಿ ಚಳುವಳಿಯು ಒಂದು ಶತಮಾನಕ್ಕೂ ಹೆಚ್ಚು ಕಾಲ ತಳಮಟ್ಟದಲ್ಲಿ ಸಾಮಾಜಿಕ–ಆರ್ಥಿಕ ಉನ್ನತಿಯನ್ನು ಗುರಿಯಾಗಿಟ್ಟುಕೊಂಡು ಭಾಗವಹಿಸುವಿಕೆಯ, ಜನರ ನೇತೃತ್ವದ ಅಭಿವೃದ್ಧಿ ಮಾದರಿಯ ಧ್ವಜಧಾರಿಯಾಗಿದೆ. ಭಾರತದಲ್ಲಿನ ಸಹಕಾರಿ ಸಂಸ್ಥೆಗಳು ಪ್ರಮುಖ ಸಹಕಾರಿ ತತ್ವಗಳಿಂದ ಮಾರ್ಗದರ್ಶಿಸಲ್ಪಡುತ್ತವೆ ಮತ್ತು ಅವು ಸದಸ್ಯರ ಒಡೆತನದಲ್ಲಿದೆ, ಸದಸ್ಯರಿಂದ ನಿರ್ವಹಿಸಲ್ಪಡುತ್ತವೆ ಹಾಗೂ ಸದಸ್ಯರ ಪ್ರಯೋಜನಕ್ಕಾಗಿವೆ.

ಭಾರತವು ಸುಮಾರು 2 ಲಕ್ಷ ಪತ್ತಿನ ಸಹಕಾರಿ ಸಂಘಗಳು ಮತ್ತು 6 ಲಕ್ಷ ಪತ್ತೇತರ ಸಹಕಾರಿ ಸಂಘಗಳನ್ನು ಒಳಗೊಂಡಂತೆ ಸುಮಾರು 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಘಗಳನ್ನು ಹೊಂದಿದೆ. ಪತ್ತೇತರ ಸಹಕಾರಿ ಸಂಸ್ಥೆಗಳು ಪ್ರಾಥಮಿಕವಾಗಿ ವಸತಿ, ಡೈರಿ, ಕಾರ್ಮಿಕ ಮತ್ತು ಸಕ್ಕರೆ, ಗ್ರಾಹಕ, ಮಾರುಕಟ್ಟೆ, ಮೀನುಗಾರಿಕೆ, ಜವಳಿ, ಸೇವೆಗಳು, ಸಂಸ್ಕರಣೆ, ಆಸ್ಪತ್ರೆಗಳು ಇತ್ಯಾದಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದಲ್ಲದೇ, ಸಹಕಾರಿ

ವಲಯದಲ್ಲಿ ಸುಮಾರು ಒಟ್ಟು 30 ಕೋಟಿ ಸದಸ್ಯರನ್ನು ಹೊಂದಿದ್ದು, ಪ್ಯಾಕ್ಸ್ ಮಾತ್ರ ದೇಶದಾದ್ಯಂತ 13 ಕೋಟಿಗೂ ಹೆಚ್ಚು ಸದಸ್ಯರನ್ನು ಹೊಂದಿದೆ. 2002ರಲ್ಲಿ ಬಿಡುಗಡೆಯಾದ ಸಹಕಾರಿಗಳ ಕುರಿತಾದ ಕೊನೆಯ ನೀತಿಯು ಸಹಕಾರಿ ಸಂಸ್ಥೆಗಳಿಂದ ಆರ್ಥಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಸಂಘಟಿಸುವ ಮೂಲ ಆಯಾಮಗಳ ಮೇಲೆ ಕೇಂದ್ರೀಕರಿಸಿದೆ. ಕಳೆದ 23 ವರ್ಷಗಳಲ್ಲಿ, ಜಗತ್ತು ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಕಂಡಿದೆ. ಅವು ಜಾಗತೀಕರಣ ಮತ್ತು ತಾಂತ್ರಿಕ ಪ್ರಗತಿಗಳಿಂದ, ವಿಶೇಷವಾಗಿ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನದಿಂದ ನಡೆಸಲ್ಪಡುತ್ತಿವೆ. ಈ ಬೆಳವಣಿಗೆಗಳನ್ನು ಗಮನಿಸಿದರೆ, ಸಹಕಾರ ಕ್ಷೇತ್ರವು ವಿಕಸನಗೊಳ್ಳುತ್ತಿರುವ ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ಪ್ರಸ್ತುತ ಆರ್ಥಿಕ ಸನ್ನಿವೇಶದಲ್ಲಿ ಈ ಕ್ಷೇತ್ರದ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ನೀತಿಯನ್ನು ಪುನರ್ ವಿಮರ್ಶಿಸುವುದು ಮತ್ತು ಹೊಸದನ್ನು ರೂಪಿಸುವುದು ಅತ್ಯಗತ್ಯವಾಯಿತು. ಭಾರತದ ಸಂವಿಧಾನದ ಅಡಿಯಲ್ಲಿ ಸಹಕಾರಿ ಸಂಘಗಳ ರಚನೆಯನ್ನು ಮೂಲಭೂತ ಹಕ್ಕಾಗಿ ಗುರುತಿಸಿರುವುದು ಮತ್ತು ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಸ್ಥಾಪಿಸಿರುವುದು ಹೊಸ ಯುಗವನ್ನು ಗುರುತಿಸಿದೆ. ಈ ಯುಗದಲ್ಲಿ "ರೈತರು, ಮಹಿಳೆಯರು ಮತ್ತು ಗ್ರಾಮೀಣಾಭಿವೃದ್ಧಿ"ಯನ್ನು ಕೇಂದ್ರವಾಗಿಟ್ಟುಕೊಂಡು ಸಹಕಾರಿ ಚಳುವಳಿಯಲ್ಲಿ ಪರಿವರ್ತನೆಯ ಅಗತ್ಯವಿದೆ, ಜೊತೆಗೆ ಸಹಕಾರಿ ಸಂಘಗಳನ್ನು ಬಲಪಡಿಸುವುದು, ರಾಷ್ಟ್ರೀಯ ಒಕ್ಕೂಟಗಳನ್ನು ಮುನ್ನಡೆಸುವುದು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಸಂಸ್ಥೆಗಳು ಬೆಳೆಯಲು ಅಗತ್ಯವಾದ ಬೆಂಬಲ ಮತ್ತು ಮನ್ನಣೆಯನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿತ್ತು. ಆದ್ದರಿಂದ, ಹೊಸ ರಾಷ್ಟ್ರೀಯ ನೀತಿಯ ತುರ್ತು ಅವಶ್ಯಕತೆ ಇತ್ತು.

ಗೌರವಾನ್ವಿತ ಮಾನ್ಯ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ, ಹೊಸ ಸಹಕಾರ ನೀತಿಯನ್ನು ರೂಪಿಸಲು ಸಹಕಾರ ಸಚಿವಾಲಯವು ಸೆಪ್ಟೆಂಬರ್ 2022ರಲ್ಲಿ 48 ಸದಸ್ಯರ ರಾಷ್ಟ್ರೀಯ ಮಟ್ಟದ ಸಮಿತಿಯನ್ನು ರಚಿಸಿತು. ಈ ಸಮಿತಿಯ ಅಧ್ಯಕ್ಷತೆಯನ್ನು ಮಾಜಿ ಕೇಂದ್ರ ಸಚಿವರಾದ ಶ್ರೀ ಸುರೇಶ್ ಪ್ರಭು ಅವರಿಗೆ ವಹಿಸಲಾಯಿತು. ಸಮಿತಿಯು ಎಲ್ಲಾ ಹಂತಗಳು ಮತ್ತು ವಲಯಗಳಾದ್ಯಂತ ರಾಷ್ಟ್ರೀಯ/ ರಾಜ್ಯ ಸಹಕಾರಿ ಒಕ್ಕೂಟಗಳು ಮತ್ತು ಸಂಘಗಳ ಸದಸ್ಯರು, ಸಂಬಂಧಿತ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಚಿವಾಲಯಗಳು/ ಇಲಾಖೆಗಳು ಹಾಗೂ ಶೈಕ್ಷಣಿಕ ಕ್ಷೇತ್ರದ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಸಹಕಾರಿ ವಲಯದ ಪಾಲುದಾರರು ಮತ್ತು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳೊಂದಿಗೆ ಬಹು ಹಂತದ ಸಮಾಲೋಚನೆಗಳು ಮತ್ತು ಪ್ರಾದೇಶಿಕ ಕಾರ್ಯಾಗಾರಗಳ ನಂತರ ಈ ನೀತಿಯನ್ನು ರಚಿಸಲಾಗಿದೆ. ಸಮಿತಿಯು 17 ಸಭೆಗಳು ಮತ್ತು 4 ಪ್ರಾದೇಶಿಕ ಕಾರ್ಯಾಗಾರಗಳನ್ನು ನಡೆಸಿ, ಸಮಾಲೋಚನಾ ಪ್ರಕ್ರಿಯೆಯಿಂದ ಒಟ್ಟು 648 ಅಭಿಪ್ರಾಯಗಳನ್ನು (Input) ಪಡೆಯಿತು. ಈ ಅಭಿಪ್ರಾಯಗಳನ್ನು (Input) ಸಂಪೂರ್ಣವಾಗಿ ವಿಶ್ಲೇಷಿಸಿ, ವಿಸ್ತೃತ ಚರ್ಚೆಗಳ ನಂತರ ನೀತಿಯಲ್ಲಿ ಸೇರಿಸಲಾಯಿತು.

ಭಾರತದ ಗೌರವಾನ್ವಿತ ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರ 'ಸಹಕಾರ–ಸೇ–ಸಮೃದ್ಧಿ' (ಸಮೃದ್ಧಿಗೆ ಸಹಕಾರ) ಮತ್ತು 2047ರ ವೇಳೆಗೆ ವಿಕ್ಷಿತ್ ಭಾರತ್ ದೃಷ್ಟಿಕೋನವನ್ನು ಸಾಕಾರಗೊಳಿಸಲು ರಾಷ್ಟ್ರೀಯ ಸಹಕಾರ ನೀತಿ 2025 ಅನ್ನು ರೂಪಿಸಲಾಗಿದೆ. ಪರಸ್ಪರತೆ, ಸಮುದಾಯ ದೃಷ್ಟಿಕೋನ, ಲಾಭದ ಸಮಾನ ಹಂಚಿಕೆ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯಂತಹ ಅಂತರ್ಗತ ಗುಣಲಕ್ಷಣಗಳ ಕಾರಣದಿಂದಾಗಿ ಆರ್ಥಿಕ ಬೆಳವಣಿಗೆಗೆ ಪರಿಣಾಮಕಾರಿ ಸಾಧನವಾಗಿ ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸುವ ಅಗತ್ಯವನ್ನು ನೀತಿಯು ಗುರುತಿಸುತ್ತದೆ. ಸಹಕಾರಿ ಕ್ಷೇತ್ರದ ಒಟ್ಟಾರೆ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ರಾಷ್ಟ್ರೀಯ ಫೆಡರೇಷನ್‌ಗಳು/ ಒಕ್ಕೂಟಗಳ ನಿರ್ಣಾಯಕ ಪಾತ್ರವನ್ನು ಇದು ಅಂಗೀಕರಿಸುತ್ತದೆ. ಗ್ರಾಮೀಣ ಆರ್ಥಿಕತೆಯ ಬೆಳವಣಿಗೆಯನ್ನು ತ್ವರಿತಗೊಳಿಸುವತ್ತ ಗಮನಹರಿಸಿ, ಕ್ಷೇತ್ರದ ವ್ಯವಸ್ಥಿತ ಮತ್ತು ಕ್ರಮಬದ್ಧ, ಸರ್ವತೋಮುಖ ಅಭಿವೃದ್ಧಿಯನ್ನು ಸುಗಮಗೊಳಿಸುವ ಉದ್ದೇಶವನ್ನು ಈ ನೀತಿಯು ಹೊಂದಿದೆ.

### ದೃಷ್ಟಿ, ಧ್ಯೇಯ ಮತ್ತು ಉದ್ದೇಶಗಳ ದೃಷ್ಟಿಕೋನ :

ದೃಷ್ಟಿಕೋನ : 'ಸಹಕಾರ–ಸೇ–ಸಮೃದ್ಧಿ'ಯ ದೃಷ್ಟಿಕೋನವನ್ನು ಅನುಸರಿಸಿ, ಸುಸ್ಥಿರ ಸಹಕಾರಿ ಅಭಿವೃದ್ಧಿಗೆ ಅನುಕೂಲಕರವಾದ ವಾತಾವರಣವನ್ನು ಉತ್ತೇಜಿಸುವ ಮೂಲಕ 2047ರ ವೇಳೆಗೆ 'ವಿಕ್ಷಿತ್' ಆಗುವ ಭಾರತದ ಸಾಮೂಹಿಕ ಮಹತ್ವಾಕಾಂಕ್ಷೆಗೆ ಗಮನಾರ್ಹವಾಗಿ ಕೊಡುಗೆ ನೀಡುವುದು ನೀತಿಯ ದೃಷ್ಟಿಕೋನವಾಗಿದೆ.

ಧ್ಯೇಯ : ಸಹಕಾರಿ ಚಳುವಳಿಯನ್ನು ತಳಮಟ್ಟದಲ್ಲಿ ಬಲಪಡಿಸುವ

ಮತ್ತು ಆಳಗೊಳಿಸುವ ಹಾಗೂ ಸಹಕಾರಿ ಉದ್ಯಮಗಳನ್ನು ವೃತ್ತಿಪರವಾಗಿ ನಿರ್ವಹಿಸುವ, ಪಾರದರ್ಶಕ, ಸಕ್ರಿಯಗೊಳಿಸಿದ ತಂತ್ರಜ್ಞಾನ, ಚೈತನ್ಯಶೀಲ ಮತ್ತು ಸ್ಪಂದಿಸುವ ಆರ್ಥಿಕ ಘಟಕಗಳಾಗಿ ಪರಿವರ್ತಿಸಲು ಅನುಕೂಲವಾಗುವಂತೆ ಕಾನೂನು, ಆರ್ಥಿಕ ಮತ್ತು ಸಾಂಸ್ಥಿಕ ಚೌಕಟ್ಟನ್ನು ರಚಿಸುವುದು, ಜನಸಾಮಾನ್ಯರಿಂದ (ಸದಸ್ಯರು) ಉತ್ಪಾದನೆಯನ್ನು ಬೆಂಬಲಿಸುವುದು. ನೀತಿಯ ಧ್ಯೇಯವನ್ನು ಈ ಕೆಳಗಿನ ಆರು ಕಾರ್ಯತಂತ್ರದ ಮಿಷನ್ ಸ್ತಂಭಗಳ ಮೂಲಕ ಸಾಧಿಸಲಾಗುತ್ತದೆ:

i. ಅಡಿಪಾಯವನ್ನು ಬಲಪಡಿಸುವುದು : ಸಹಕಾರಿ ಚಳುವಳಿಗೆ ಬಲವಾದ ಅಡಿಪಾಯವನ್ನು ಸೃಷ್ಟಿಸುವುದು.

ii. ಚೈತನ್ಯವನ್ನು ಉತ್ತೇಜಿಸುವುದು : ಚೈತನ್ಯಶೀಲ ಮತ್ತು ಸ್ವಾವಲಂಬಿ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವುದು.

iii. ಸಹಕಾರಿ ಸಂಸ್ಥೆಗಳನ್ನು ಭವಿಷ್ಯಕ್ಕೆ ಸಿದ್ಧಗೊಳಿಸುವುದು : ಸಹಕಾರಿ ಸಂಸ್ಥೆಗಳನ್ನು ವೃತ್ತಿಪರ ಮತ್ತು ಸುಸ್ಥಿರ ಆರ್ಥಿಕ ಘಟಕಗಳಾಗಿ ಪರಿವರ್ತಿಸುವುದು.

iv. ಒಳಗೊಳ್ಳುವಿಕೆ ಮತ್ತು ಆಳವಾದ ವ್ಯಾಪ್ತಿಯನ್ನು ಉತ್ತೇಜಿಸುವುದು : ಸಹಕಾರಿ ನೇತೃತ್ವದ ಸಮಗ್ರ ಅಭಿವೃದ್ಧಿ ಮತ್ತು ಸಹಕಾರಿ ಸಂಸ್ಥೆಗಳನ್ನು ಜನರ ಚಳುವಳಿಯಾಗಿ ಉತ್ತೇಜಿಸುವುದು.

v. ಹೊಸ ಮತ್ತು ಉದಯೋನ್ಮುಖ ವಲಯಗಳಿಗೆ ಪ್ರವೇಶಿಸುವುದು : ಹೊಸ ಮತ್ತು ಉದಯೋನ್ಮುಖ ವಲಯಗಳಿಗೆ ಸಹಕಾರಿ ಸಂಸ್ಥೆಗಳ ಪ್ರವೇಶವನ್ನು ಉತ್ತೇಜಿಸುವುದು.

vi. ಸಹಕಾರಿ ಬೆಳವಣಿಗೆಗೆ ಯುವ ಪೀಳಿಗೆಯನ್ನು ರೂಪಿಸುವುದು : ಯುವ ಪೀಳಿಗೆಯನ್ನು ಪ್ರೇರೇಪಿಸುವುದು ಮತ್ತು ಗ್ರಾಮೀಣ ಸಹಕಾರಿ ಪರಿಸರದೊಂದಿಗೆ ಸಂಪರ್ಕ ಸಾಧಿಸುವ ಸಹಕಾರಿ–ಆಧಾರಿತ ಅನುಭವದ ಕಲಿಕೆಯನ್ನು ಅವರಿಗೆ ಒದಗಿಸುವುದು.

ಉದ್ದೇಶಗಳು : ಮುಂದಿನ 10 ವರ್ಷಗಳಲ್ಲಿ ಆರು ಕಾರ್ಯತಂತ್ರದ ಮಿಷನ್ ಸ್ತಂಭಗಳ ಅಡಿಯಲ್ಲಿ ವರ್ಗೀಕರಿಸಲಾದ ಈ ಕೆಳಗಿನ 16 ಉದ್ದೇಶಗಳ ಮೂಲಕ ನೀತಿ ಧ್ಯೇಯವನ್ನು ಸಾಧಿಸಲಾಗುತ್ತದೆ.

1. ಸ್ವಾಯತ್ತತೆಯನ್ನು ಒದಗಿಸಲು, ಪಾರದರ್ಶಕತೆಯನ್ನು ಉತ್ತೇಜಿಸಲು, ವ್ಯವಹಾರ ಮಾಡುವ ಸುಲಭತೆ, ಉತ್ತಮ ಆಡಳಿತವನ್ನು ಉತ್ತೇಜಿಸಲು ಮತ್ತು ಸಹಕಾರಿ ಸಂಸ್ಥೆಗಳಿಗೆ ಸಮನಾದ ಅವಕಾಶಗಳನ್ನು ಒದಗಿಸಲು ಸಕಾಲಿಕ ಸುಧಾರಣೆಗಳ ಮೂಲಕ ಅನುಕೂಲಕರ ಕಾನೂನು ಮತ್ತು ನಿಯಂತ್ರಕ ವಾತಾವರಣವನ್ನು ಸೃಷ್ಟಿಸುವುದು; 2. ಇತರ ಆರ್ಥಿಕ ಸಂಸ್ಥೆಗಳಂತೆ ಸುಲಭವಾಗಿ ಪ್ರವೇಶಿಸಬಹುದಾದ ಮತ್ತು ಕೈಗೆಟುಕುವ ಆರ್ಥಿಕ ಹಾಗೂ ಸಮಾನ ವ್ಯವಹಾರ ಅವಕಾಶಗಳನ್ನು ವಿಸ್ತರಿಸುವುದು; 3. ಸಹಕಾರಿ ಸಂಸ್ಥೆಗಳ ನಡುವೆ ಸಹಕಾರವನ್ನು ಹೆಚ್ಚಿಸುವುದು, ಸಹಕಾರಿ ರಚನೆಯನ್ನು ಬಲಪಡಿಸುವುದು ಮತ್ತು ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸುವುದು; 4. ಸಹಕಾರಿ ವ್ಯವಹಾರ ಪರಿಸರ ವ್ಯವಸ್ಥೆಯ ಅಭಿವೃದ್ಧಿಯನ್ನು ಉತ್ತೇಜಿಸುವುದು; 5. ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಪ್ರವೇಶ ಮತ್ತು ಸದಸ್ಯರ ಆದಾಯವನ್ನು ಹೆಚ್ಚಿಸುವುದು ಸೇರಿದಂತೆ ಬಹು ಆಯಾಮದ ವಿಸ್ತರಣೆಯನ್ನು ಉತ್ತೇಜಿಸುವುದು; 6. ದಕ್ಷ ಮತ್ತು ಪಾರದರ್ಶಕ ನಿರ್ವಹಣೆಗಾಗಿ ತಂತ್ರಜ್ಞಾನ ಅಳವಡಿಕೆಯನ್ನು ಹೆಚ್ಚಿಸುವುದು; 7. ಸಹಕಾರಿ ತತ್ವಗಳ ಆಧಾರದ ಮೇಲೆ ವೃತ್ತಿಪರವಾಗಿ ನಿರ್ವಹಿಸಲ್ಪಡುವ ಆರ್ಥಿಕ ಘಟಕಗಳಾಗಿ ಸಹಕಾರಿ ಸಂಸ್ಥೆಗಳನ್ನು ಪರಿವರ್ತಿಸಲು ಅನುವು ಮಾಡಿಕೊಡುವುದು; 8. ಒಳಗೊಳ್ಳುವಿಕೆ ಮತ್ತು ಸದಸ್ಯರ ಕೇಂದ್ರೀಕರಣವನ್ನು ಉತ್ತೇಜಿಸುವುದು ಹಾಗೂ ಸಹಕಾರಿ ವ್ಯವಸ್ಥೆಯ ಮೂಲಕ ದೇಶದ ಪ್ರತಿಯೊಂದು ಮೂಲೆ ಮತ್ತು ಜನಸಂಖ್ಯೆಯನ್ನು ತಲುಪುವುದು; 9. ಸಹಕಾರಿ ಸಂಘಗಳನ್ನು ಜನಾಂದೋಲನವನ್ನಾಗಿ ಉತ್ತೇಜಿಸುವುದು, ವಿಶೇಷವಾಗಿ ಯುವಕರು ಮತ್ತು ಮಹಿಳೆಯರನ್ನು ಒಳಗೊಂಡಂತೆ, ಆಂದೋಲನವನ್ನು ಮತ್ತಷ್ಟು ಬಲಪಡಿಸುವುದು; 10. ಹೊಸ ಮತ್ತು ಉದಯೋನ್ಮುಖ ವಲಯಗಳಲ್ಲಿ ಸಹಕಾರಿ ಸಂಸ್ಥೆಗಳ ಪ್ರವೇಶವನ್ನು ಉತ್ತೇಜಿಸುವುದು ಮತ್ತು ಪ್ರೋತ್ಸಾಹಿಸುವುದು; 11. ಸುಸ್ಥಿರತೆಗಾಗಿ ಪರಿಸರ ಸ್ನೇಹಿ ಅಭ್ಯಾಸಗಳು ಮತ್ತು ವೃತ್ತಾಕಾರದ ಆರ್ಥಿಕತೆಯನ್ನು ಉತ್ತೇಜಿಸುವುದು; 12. ಸಹಕಾರಿ ಉದ್ಯಮಗಳಲ್ಲಿ ದೀರ್ಘಕಾಲೀನ ವೃತ್ತಿಜೀವನವನ್ನು ಮುಂದುವರೆಸಲು ಯುವಕರನ್ನು, ವಿಶೇಷವಾಗಿ ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಲ್ಲಿರುವವರನ್ನು ಪ್ರೇರೇಪಿಸುವುದು ಮತ್ತು ಸ್ಫೂರ್ತಿ ನೀಡುವುದು; 13. ಪ್ರಮಾಣೀಕೃತ, ಉತ್ತಮ–ಗುಣಮಟ್ಟದ, ಸಹಕಾರಿ–ಕೇಂದ್ರಿತ ಕೋರ್ಸ್‌ಗಳ ಅಭಿವೃದ್ಧಿ ಮತ್ತು ಅಧಿಕೃತ ವಿಷಯದ ರಚನೆಯನ್ನು ಉತ್ತೇಜಿಸುವುದು; 14. ಸಹಕಾರಿ ವಲಯದಲ್ಲಿ ಉದ್ಯೋಗಕ್ಕಾಗಿ ಯುವಕರು ಮತ್ತು ಮಹಿಳೆಯರ ಕೌಶಲ್ಯ ಮತ್ತು ಉನ್ನತೀಕರಣಕ್ಕಾಗಿ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುವುದು; 15. ಸಹಕಾರಿ ವಲಯದಲ್ಲಿ ಸಾಕಷ್ಟು

ಸಂಖ್ಯೆಯಲ್ಲಿ ಅರೆಕಾಲಿಕ ಸಂಪನ್ಮೂಲ ವ್ಯಕ್ತಿಗಳು, ಗುಣಮಟ್ಟದ ಶಿಕ್ಷಕರು, ಬೋಧಕರು, ತರಬೇತುದಾರರು ಮತ್ತು ಭೇಟಿ ನೀಡುವ ಅಧ್ಯಾಪಕರ ಲಭ್ಯತೆಯನ್ನು ಖಚಿತಪಡಿಸುವುದು ಮತ್ತು 16. ಸಹಕಾರಿ ಸಂಸ್ಥೆಗಳು ಸೂಕ್ತ ಅಭ್ಯರ್ಥಿಗಳನ್ನು ಸುಲಭವಾಗಿ ನೇಮಿಸಿಕೊಳ್ಳಲು ಅನುಕೂಲವಾಗುವ ಮತ್ತು ಸಂಭಾವ್ಯ ಅಭ್ಯರ್ಥಿಗಳಿಗೆ ಉದ್ಯೋಗ ಹುಡುಕಾಟ ಪ್ರಕ್ರಿಯೆಯನ್ನು ಸರಳಗೊಳಿಸುವ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು. ಈ ಉದ್ದೇಶಗಳನ್ನು ಸಾಧಿಸಲು ನೀತಿ ದಾಖಲೆಯಲ್ಲಿ ವಿವರವಾದ ತಂತ್ರಗಳನ್ನು ಒದಗಿಸಲಾಗಿದೆ.

ಈ ನೀತಿಯು ಪ್ರತಿ ಜಿಲ್ಲೆಗೆ ಕನಿಷ್ಠ ಒಂದು ಮಾದರಿ ಸಹಕಾರಿ ಗ್ರಾಮವನ್ನು ಅಭಿವೃದ್ಧಿಪಡಿಸಲು, ಪ್ರವಾಸೋದ್ಯಮ, ಸಾರಿಗೆ, ವಿಮೆ, ಸೌರ ಮತ್ತು ಹಸಿರು ಇಂಧನ ಮುಂತಾದ ಉದಯೋನ್ಮುಖ ಕ್ಷೇತ್ರಗಳಲ್ಲಿ ಹೊಸ ಸಹಕಾರಿ ಸಂಘಗಳನ್ನು ರಚಿಸಲು ಪ್ರೋತ್ಸಾಹಿಸುತ್ತದೆ ಹಾಗೂ ಮುಂದಿನ ಹತ್ತು ವರ್ಷಗಳಲ್ಲಿ ದೇಶದಲ್ಲಿ ದೃಢವಾದ ಸಹಕಾರಿ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯೊಂದಿಗೆ ಸದಸ್ಯತ್ವವನ್ನು 30 ಕೋಟಿಯಿಂದ 50 ಕೋಟಿಗೆ ಹೆಚ್ಚಿಸಲು ಪ್ರೋತ್ಸಾಹಿಸುತ್ತದೆ.

ಈ ನೀತಿಯನ್ನು ಸರಿಯಾದ ದಿಕ್ಕಿನಲ್ಲಿ ಕಾರ್ಯಗತಗೊಳಿಸಲು ಮತ್ತು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲು ನೀತಿ ದಾಖಲೆಯಲ್ಲಿ ಮೇಲ್ವಿಚಾರಣೆ ಮತ್ತು ಅನುಷ್ಠಾನ ರಚನೆಯನ್ನು ಸೇರಿಸಲಾಗಿದೆ. ನೀತಿಯ ಅನುಷ್ಠಾನವು ಸಹಕಾರಿ ಒಕ್ಕೂಟ ವ್ಯವಸ್ಥೆಯ ತತ್ವಗಳಿಗೆ ಬದ್ಧವಾಗಿರುತ್ತದೆ. ಸಹಕಾರ ಕ್ಷೇತ್ರದ ರಚನೆಯನ್ನು ಪರಿಗಣಿಸಿ, ನೀತಿಯ ಸುಗಮ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು, ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಸರ್ಕಾರಗಳು ಮತ್ತು ರಾಷ್ಟ್ರೀಯ/ ರಾಜ್ಯ ಮಟ್ಟದ ಸಹಕಾರಿ ಸಂಘಗಳು/ ಫೆಡರೇಷನ್‌ಗಳು/ ಒಕ್ಕೂಟಗಳ ಸಕ್ರಿಯ ಭಾಗವಹಿಸುವಿಕೆಯ ಅಗತ್ಯವಿದೆ. ಇದು ನಬಾರ್ಡ್, ಎನ್‌ಸಿಡಿಸಿ, ಎನ್‌ಡಿಡಿಬಿ ಮತ್ತು ಎನ್‌ಎಫ್‌ಡಿಬಿಯಂತಹ ವಲಯ ಅಭಿವೃದ್ಧಿ ಸಂಸ್ಥೆಗಳನ್ನು ಸಹ ಒಳಗೊಂಡಿದೆ. ನೀತಿಯನ್ನು ಪರಿಣಾಮಕಾರಿಯಾಗಿ ಮತ್ತು ನಿಗದಿತ ಸಮಯದೊಳಗೆ ಅನುಷ್ಠಾನಗೊಳಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು, ಸಹಕಾರ ಸಚಿವಾಲಯದೊಳಗೆ 'ಅನುಷ್ಠಾನ ಕೋಶ'ವನ್ನು ರಚಿಸಲಾಗುತ್ತದೆ. ಈ ಕೋಶವು ವಿಷಯದ ಕುರಿತು ತಾಂತ್ರಿಕ ನೆರವು, ದಸ್ತಾವೇಜೀಕರಣ, ಸಮನ್ವಯ, ಮೇಲ್ವಿಚಾರಣೆ, ವರದಿ ಮಾಡುವಿಕೆ ಮತ್ತು ಹೆಚ್ಚಿನವುಗಳಿಗಾಗಿ ಮೀಸಲಾದ ಯೋಜನಾ ನಿರ್ವಹಣಾ ಘಟಕದಿಂದ ಬೆಂಬಲವನ್ನು ಪಡೆಯುತ್ತದೆ. ನೀತಿಯ ಅನುಷ್ಠಾನಕ್ಕಾಗಿ ಮಧ್ಯಸ್ಥಿಕೆ–ನಿರ್ದಿಷ್ಟ ಸಮಯಸೂಚಿಗಳೊಂದಿಗೆ ಸಂಪೂರ್ಣ ವಿವರವಾದ ಕ್ರಿಯಾ ಯೋಜನೆಯನ್ನು ನೀತಿ ಬಿಡುಗಡೆಯಾದ ನಂತರ ಶೀಘ್ರದಲ್ಲೇ ಅಂತಿಮಗೊಳಿಸಲಾಗುತ್ತದೆ. ಕೇಂದ್ರ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ 'ಸಹಕಾರ ನೀತಿಯ ರಾಷ್ಟ್ರೀಯ ಚಾಲನಾ ಸಮಿತಿ' (National Steering Committee on Cooperation Policy) ಯ ಮೂಲಕ ನೀತಿಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಸಾಂಸ್ಥಿಕ ಕಾರ್ಯವಿಧಾನವನ್ನು ಸ್ಥಾಪಿಸುವುದು. ಒಟ್ಟಾರೆ ಮಾರ್ಗದರ್ಶನ, ಅಂತರ–ಸಚಿವಾಲಯ ಸಮನ್ವಯ, ಆವರ್ತಕ ನೀತಿ ಪರಿಶೀಲನೆ ಇತ್ಯಾದಿಗಳಿಗಾಗಿ ಇದನ್ನು ರಚಿಸಲಾಗುವುದು. ಈ ಸಮಿತಿಯು ಭಾರತ ಸರ್ಕಾರದ ಸಂಬಂಧಿತ ಸಚಿವಾಲಯಗಳ ಉಸ್ತುವಾರಿ ಹೊಂದಿರುವ ಗೌರವಾನ್ವಿತ ಸಚಿವರನ್ನು ಸದಸ್ಯರನ್ನಾಗಿ ಒಳಗೊಂಡಿರಬಹುದು. ಇದಲ್ಲದೇ, ಕೇಂದ್ರ–ರಾಜ್ಯ ಸಮನ್ವಯ, ಅನುಷ್ಠಾನದ ಅಡಚಣೆಗಳನ್ನು ನಿವಾರಿಸುವುದು, ಆವರ್ತಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಇತ್ಯಾದಿಗಳಿಗಾಗಿ ಕೇಂದ್ರ ಸಹಕಾರ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಮಟ್ಟದ 'ನೀತಿ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ'ಯನ್ನು ಸ್ಥಾಪಿಸಲಾಗುವುದು. ಇದು ಭಾರತ ಸರ್ಕಾರದ ಸಂಬಂಧಿತ ಸಚಿವಾಲಯಗಳ ಕಾರ್ಯದರ್ಶಿಗಳು, ಎಲ್ಲಾ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಇಲಾಖೆಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ನೀತಿ ಆಯೋಗದ ಪ್ರತಿನಿಧಿ ಮತ್ತು ರಾಷ್ಟ್ರೀಯ ಸಹಕಾರಿ ಫೆಡರೇಷನ್‌ಗಳು/ ಒಕ್ಕೂಟಗಳು/ ಸಂಘಗಳು, ನಬಾರ್ಡ್, ಎನ್‌ಡಿಡಿಬಿ, ಎನ್‌ಸಿಡಿಸಿ, ಎನ್‌ಸಿಸಿಟಿ, ವ್ಯಾಮ್ನಿಕಾಮ್, ಇತ್ಯಾದಿಗಳ ಅಧ್ಯಕ್ಷರು/ಎಂಡಿಗಳು ಸೇರಿದಂತೆ ಸದಸ್ಯರನ್ನು ಒಳಗೊಂಡಿರಬಹುದು.

ರಾಷ್ಟ್ರೀಯ ಜಿಡಿಪಿಯಲ್ಲಿ ಸಹಕಾರಿಯ ಕೊಡುಗೆ ಪಾಲನ್ನು ಹೆಚ್ಚಿಸುವ ಗುರಿಯನ್ನು ನೀತಿ ಹೊಂದಿದೆ. ಎನ್‌ಸಿಪಿ 2025ರ ಈ ಮಹತ್ವಾಕಾಂಕ್ಷೆಯ ದೃಷ್ಟಿಕೋನ ಮತ್ತು ಅಗತ್ಯ ಸಾಂಸ್ಥಿಕ, ಕಾನೂನು, ತಾಂತ್ರಿಕ ಮತ್ತು ತಳಮಟ್ಟದ ಸುಧಾರಣೆಗಳ ಮೂಲಕ, ಭಾರತದಲ್ಲಿನ ಸಹಕಾರಿ ಸಂಸ್ಥೆಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಬಹುದು ಮತ್ತು ದೇಶದ ಸಾಮಾಜಿಕ–ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಮುನ್ನಡೆಸಬಹುದು.

## 18 ನವೆಂಬರ್ 2025

## ವಿಷಯ : ಕರಕುಶಲ ವಸ್ತುಗಳು, ಕೈಮಗ್ಗಗಳು, ಕಾರ್ಮಿಕರು ಮತ್ತು ಮೀನುಗಾರಿಕೆ ಸೇರಿದಂತೆ ಸಹಕಾರಿ ಉದ್ಯಮಶೀಲತೆಯ ಮೂಲಕ ಯುವಜನರು, ಮಹಿಳೆಯರು ಮತ್ತು ಅಬಲ ವರ್ಗಗಳ ಸಬಲೀಕರಣ

## Empowering Youth, Women and Weaker sections including handicrafts, handlooms, Labour and Fisheries through Cooperative Entrepreneurship

ಅನುವಾದ : ಶ್ರೀಮತಿ ದಿವ್ಯ ಟಿ. ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಭಾರತದ ಸಹಕಾರ ಕ್ಷೇತ್ರವು ವಿಶ್ವದ ಅತಿದೊಡ್ಡ ಸಹಕಾರ ಕ್ಷೇತ್ರಗಳಲ್ಲಿ ಒಂದಾಗಿದೆ, ಇದು 30 ವಲಯಗಳಲ್ಲಿ 32 ಕೋಟಿಗೂ ಹೆಚ್ಚು ಸದಸ್ಯತ್ವವನ್ನು ಹೊಂದಿರುವ 8,45,475 ಸಹಕಾರಿ ಸಂಸ್ಥೆಗಳನ್ನು ಒಳಗೊಂಡಿದೆ. ಸ್ವಾವಲಂಬಿ ಆರ್ಥಿಕತೆಗಾಗಿ ಭಾರತದ ದೃಷ್ಟಿಕೋನವಾದ ಆತ್ಮನಿರ್ಭರ ಭಾರತ್‌ನ ಗುರಿಗಳನ್ನು ಸಾಧಿಸುವಲ್ಲಿ ಸಹಕಾರಿ ಉದ್ಯಮಶೀಲತೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸ್ಥಳೀಯ ಸಮುದಾಯಗಳನ್ನು ಸಬಲೀಕರಣಗೊಳಿಸುವ ಮೂಲಕ ಮತ್ತು ವಿಕೇಂದ್ರೀಕೃತ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ, ಸಹಕಾರಿ ಸಂಸ್ಥೆಗಳು ದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಗಣನೀಯವಾಗಿ ಕೊಡುಗೆ ನೀಡುತ್ತವೆ.

ಸಹಕಾರಿ ಉದ್ಯಮಶೀಲತೆಯು ಆರ್ಥಿಕ ದಕ್ಷತೆಯನ್ನು ಸಾಮಾಜಿಕ ಜವಾಬ್ದಾರಿಯೊಂದಿಗೆ ಸಂಯೋಜಿಸುವ, ಜನರನ್ನು ಉದ್ಯಮ ಸೃಷ್ಟಿಯ ಕೇಂದ್ರದಲ್ಲಿ ಇರಿಸುವ ವ್ಯವಹಾರಕ್ಕೆ ವಿಶಿಷ್ಟ ವಿಧಾನವನ್ನು ಪ್ರತಿನಿಧಿಸುತ್ತದೆ. ಇದು ಸದಸ್ಯರ ಮಾಲೀಕತ್ವ, ಪ್ರಜಾಸತ್ತಾತ್ಮಕ ನಿರ್ಧಾರ ತೆಗೆದುಕೊಳ್ಳುವಿಕೆ, ಸಮಾನ ಲಾಭ ವಿತರಣೆ ಮತ್ತು ಹಂಚಿಕೆಯ ಬೆಳವಣಿಗೆಗೆ ಒತ್ತು ನೀಡುತ್ತದೆ, ಇದು ಇತರ ರೀತಿಯ ಉದ್ಯಮಶೀಲತೆಗಿಂತ ಭಿನ್ನವಾಗಿದೆ.

ಭಾರತವು ಅಮೃತ ಕಾಲದತ್ತ ಸಾಗುತ್ತಿರುವಾಗ, ಸಹಕಾರಿ ಚಳುವಳಿಯು ಯುವಕರು, ಮಹಿಳೆಯರು ಮತ್ತು ಅಬಲ ವರ್ಗಗಳನ್ನು, ವಿಶೇಷವಾಗಿ ಕರಕುಶಲ ವಸ್ತುಗಳು, ಕೈಮಗ್ಗಗಳು, ಕಾರ್ಮಿಕರು ಮತ್ತು ಮೀನುಗಾರಿಕೆಯಂತಹ ಕ್ಷೇತ್ರಗಳಲ್ಲಿ ತೊಡಗಿರುವವರನ್ನು ಸಬಲೀಕರಣಗೊಳಿಸುವಲ್ಲಿ ಪರಿವರ್ತನಾತ್ಮಕ ಪಾತ್ರವನ್ನು ವಹಿಸಲು ಸಜ್ಜಾಗಿದೆ. ಈ ಗುಂಪುಗಳು ಭಾರತದ ಗ್ರಾಮೀಣ ಮತ್ತು ಅನೌಪಚಾರಿಕ ಆರ್ಥಿಕತೆಯ ಬೆನ್ನೆಲುಬಾಗಿವೆ, ಆದರೆ ಹಣಕಾಸು, ಮಾರುಕಟ್ಟೆಗಳು ಮತ್ತು ತಂತ್ರಜ್ಞಾನದ ಪ್ರವೇಶದ ಸವಾಲುಗಳನ್ನು ಹೆಚ್ಚಾಗಿ ಎದುರಿಸುತ್ತವೆ. ಸಹಕಾರಿ ಉದ್ಯಮಶೀಲತೆಯು ಅವರಿಗೆ ಸಾಮೂಹಿಕ ಉದ್ಯಮದ ಮೂಲಕ ಸಬಲೀಕರಣ, ಆರ್ಥಿಕ ಸ್ವಾತಂತ್ರ್ಯ ಮತ್ತು ಘನತೆಗೆ ಮಾರ್ಗವನ್ನು ನೀಡುತ್ತದೆ.

ಈ ವರ್ಷದ "ಆತ್ಮನಿರ್ಭರ ಭಾರತಕ್ಕೆ ವಾಹಕಗಳಾಗಿ ಸಹಕಾರಿಗಳು" ಎಂಬ ವಿಷಯವು, "ಸಹಕಾರದಿಂದ ಸಮೃದ್ಧಿ"ಯ ರಾಷ್ಟ್ರೀಯ ಗುರಿಯೊಂದಿಗೆ ಹೊಂದಿಕೆಯಾಗುವ ಎಲ್ಲರನ್ನೂ ಒಳಗೊಳ್ಳುವ ಮತ್ತು ಜನ–ಚಾಲಿತ ಸಹಕಾರಿ ಪುನರುಜ್ಜೀವನಕ್ಕೆ ಎನ್‌ಸಿಯುಐ ಯ ಬದ್ಧತೆಯನ್ನು ಒತ್ತಿ ಹೇಳುತ್ತದೆ.

### ಸಹಕಾರಿ ನಾವೀನ್ಯತೆ ಮತ್ತು ಉದ್ಯಮಶೀಲತೆಯ ಚಾಲಕರಾಗಿ ಯುವಕರು :

ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿದೆ, 40 ಕೋಟಿಗೂ ಹೆಚ್ಚು ಜನರು ಒಟ್ಟು ಜನಸಂಖ್ಯೆಯ ಸರಿಸುಮಾರು 30% ಅನ್ನು ಪ್ರತಿನಿಧಿಸುತ್ತಾರೆ. ರಾಷ್ಟ್ರೀಯ ಯುವ ನೀತಿ 2024 ಯುವಕರನ್ನು 15–29 ವರ್ಷ ವಯಸ್ಸಿನ ವ್ಯಕ್ತಿಗಳು ಎಂದು ವ್ಯಾಖ್ಯಾನಿಸುತ್ತದೆ ಮತ್ತು ಈ ವಯಸ್ಸಿನ ಶ್ರೇಣಿಯನ್ನು ಅಭಿವೃದ್ಧಿ ಹಾಗೂ ಉದ್ಯೋಗ ಯೋಜನಾ ಉದ್ದೇಶಗಳಿಗಾಗಿ ಬಳಸಲಾಗುತ್ತದೆ, ಶಿಕ್ಷಣ, ಕೌಶಲ್ಯ ಮತ್ತು ಉದ್ಯಮಶೀಲತೆಗೆ ಒತ್ತು ನೀಡುತ್ತದೆ. ಈ ಯುವಕರಲ್ಲಿ ಸುಮಾರು 64% ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, 36% ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ನೀತಿ ಆಯೋಗ ಮತ್ತು ವಿಶ್ವಬ್ಯಾಂಕ್ ಪ್ರಕಾರ, ಈ ಜನಸಂಖ್ಯಾ ಸಾಮರ್ಥ್ಯವು 2030ರ ವೇಳೆಗೆ ಭಾರತದ ಜಿಡಿಪಿಗೆ 1 ಟ್ರಿಲಿಯನ್ ಯುಎಸ್‌ಡಿವರೆಗೆ ನೀಡಬಹುದು, ದೇಶವು ಶಿಕ್ಷಣ, ಕೌಶಲ್ಯ ಮತ್ತು ಉದ್ಯೋಗ ಸೃಷ್ಟಿಯ ಮೂಲಕ ತನ್ನ ಯುವ ಕಾರ್ಯಪಡೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತದೆ.

ಸಹಕಾರಿ ಉದ್ಯಮಶೀಲತೆಯ ಮೂಲಕ ಯುವಕರಿಗೆ ತಮ್ಮ ಸ್ವಂತ

ವ್ಯವಹಾರಗಳನ್ನು ಪ್ರಾರಂಭಿಸಲು ಮತ್ತು ಉಳಿಸಿಕೊಳ್ಳಲು ಅಗತ್ಯವಾದ ಕೌಶಲ್ಯ, ಜ್ಞಾನ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸಬಹುದು. ಸಹಕಾರಿ ಪರಿಸರ ವ್ಯವಸ್ಥೆಯಲ್ಲಿ ಯುವಜನರ ತೊಡಗಿಸಿಕೊಳ್ಳುವಿಕೆಯನ್ನು ಬಲಪಡಿಸಲು ಈ ಕೆಳಗಿನ ಹಂತಗಳು ನಿರ್ಣಾಯಕವಾಗಿವೆ:

- ತರಬೇತಿ ಮತ್ತು ಶಿಕ್ಷಣ : ಯುವಕರಿಗೆ ಅಗತ್ಯವಾದ ಕೌಶಲ್ಯ ಮತ್ತು ಜ್ಞಾನವನ್ನು ನೀಡಲು ಉದ್ಯಮಶೀಲತೆ, ವ್ಯವಹಾರ ನಿರ್ವಹಣೆ ಮತ್ತು ಸಹಕಾರಿ ತತ್ವಗಳ ಕುರಿತು ತರಬೇತಿ ಮತ್ತು ಶಿಕ್ಷಣವನ್ನು ಒದಗಿಸುವುದು. ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ (TSU) ಮತ್ತು ಸಂಯೋಜಿತ ಸಂಸ್ಥೆಗಳ ಸ್ಥಾಪನೆಯೊಂದಿಗೆ, ದೇಶದ ಯುವಕರು ಸಹಕಾರಿ ಉದ್ಯಮಶೀಲತೆಯ ಲಾಭ ಪಡೆಯಲು ಅಪಾರ ಅವಕಾಶಗಳು ಲಭ್ಯವಿದೆ.
- ಹಣಕಾಸಿನ ಪ್ರವೇಶ : ಸಹಕಾರಿ ವ್ಯವಹಾರಗಳನ್ನು ಪ್ರಾರಂಭಿಸಲು ಮತ್ತು ವಿಸ್ತರಿಸಲು ಯುವಕರಿಗೆ ಸಹಾಯ ಮಾಡಲು ಎನ್‌ಸಿಡಿಸಿಯ ಯುವ ಸಹಕಾರ್ ದಂತಹ ಯೋಜನೆ ಮತ್ತು ಮೈಕ್ರೋಫೈನಾನ್ಸ್, ಅನುದಾನಗಳು ಅಥವಾ ಸಾಲಗಳಂತಹ ಇತರ ಹಣಕಾಸು ಆಯ್ಕೆಗಳಿಗೆ ಪ್ರವೇಶವನ್ನು ಸುಗಮಗೊಳಿಸುತ್ತದೆ.
- ಮಾರ್ಗದರ್ಶನ ಮತ್ತು ಸಂಪರ್ಕ ಜಾಲ (ನೆಟ್‌ವರ್ಕಿಂಗ್) : ಯುವಕರನ್ನು ಸಹಕಾರಿ ವಲಯದ ಅನುಭವಿ ಉದ್ಯಮಿಗಳು ಅಥವಾ ಮಾರ್ಗದರ್ಶಕರೊಂದಿಗೆ ಅಥವಾ ಮಾರ್ಗದರ್ಶನ, ಬೆಂಬಲ ಮತ್ತು ಸಂಪರ್ಕ ಜಾಲ ಅವಕಾಶಗಳನ್ನು ಒದಗಿಸಬಲ್ಲ ಇತರರೊಂದಿಗೆ ಜೋಡಿಸುತ್ತದೆ.
- ಸಹಕಾರಿ ವ್ಯವಹಾರ ಮಾದರಿ : ಸಾಮೂಹಿಕ ಮಾಲೀಕತ್ವ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಲಾಭ ಹಂಚಿಕೆಯನ್ನು ಉತ್ತೇಜಿಸುವ ಸಹಕಾರಿ ವ್ಯವಹಾರ ಮಾದರಿಯನ್ನು ಅಳವಡಿಸಿಕೊಳ್ಳಲು ಯುವಕರನ್ನು ಪ್ರೋತ್ಸಾಹಿಸಲು ಎನ್‌ಸಿಯುಐ ಪ್ರಾರಂಭಿಸಿದ "ಕೂಪ್ ಕನೆಕ್ಟ್" ನಂತಹ ದೃಷ್ಟಿಕೋನ ಕಾರ್ಯಕ್ರಮದ ಮೇಲೆ ಒತ್ತು ನೀಡುತ್ತದೆ.
- ನಾವೀನ್ಯತೆ ಮತ್ತು ಸೃಜನಶೀಲತೆ : ಯುವಕರಲ್ಲಿ ನಾವೀನ್ಯತೆ ಮತ್ತು ಸೃಜನಶೀಲತೆಯನ್ನು ಬೆಳೆಸುವುದು, ನೈಜ ಜಗತ್ತಿನ ಸಮಸ್ಯೆಗಳಿಗೆ ಅನನ್ಯ ವ್ಯವಹಾರ ಕಲ್ಪನೆಗಳು ಮತ್ತು ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಅವರನ್ನು ಪ್ರೋತ್ಸಾಹಿಸುವುದು.
- ಸಾಮಾಜಿಕ ಪರಿಣಾಮ : ಯುವಕರಿಗೆ ಉದ್ಯೋಗಗಳು ಮತ್ತು ಆದಾಯದ ಅವಕಾಶಗಳನ್ನು ಸೃಷ್ಟಿಸುವುದು, ಬಡತನ ನಿರ್ಮೂಲನೆ ಮತ್ತು ಸಮುದಾಯ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಸಾಮಾಜಿಕ ಸೇರ್ಪಡೆಯಂತಹ ಸಹಕಾರಿ ಉದ್ಯಮಶೀಲತೆಯ ಸಾಮಾಜಿಕ ಪ್ರಭಾವವನ್ನು ಒತ್ತಿ ಹೇಳುತ್ತದೆ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುತ್ತದೆ.
- ನಾಯಕತ್ವ ಅಭಿವೃದ್ಧಿ : ಯುವಕರಲ್ಲಿ ನಾಯಕತ್ವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು, ವ್ಯವಹಾರಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು, ತಂಡದ ಕೆಲಸ ಮಾಡಲು ಮತ್ತು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರಿಗೆ ಅನುವು ಮಾಡಿಕೊಡುತ್ತದೆ.
- ಸಹಯೋಗ ಮತ್ತು ಪಾಲುದಾರಿಕೆಗಳು : ಸಂಪನ್ಮೂಲಗಳು, ಪರಿಣತಿ ಮತ್ತು ನೆಟ್‌ವರ್ಕ್‌ಗಳನ್ನು ಬಳಸಿಕೊಳ್ಳಲು ಯುವಕರು, ವ್ಯವಹಾರಗಳು ಮತ್ತು ಸಂಸ್ಥೆಗಳ ನಡುವಿನ ಸಹಯೋಗ, ನೆಟ್‌ವರ್ಕಿಂಗ್ ಮತ್ತು ಪಾಲುದಾರಿಕೆಗಳನ್ನು ಪ್ರೋತ್ಸಾಹಿಸುತ್ತದೆ.

**ಈ ವಿಷಯವನ್ನು ಆಚರಣೆಗೆ ತರಲು, ಅಖಿಲ ಭಾರತ ಸಹಕಾರಿ ವಾರದಲ್ಲಿ ಈ ಕೆಳಗಿನ ಉಪಕ್ರಮಗಳನ್ನು ಪರಿಕಲ್ಪಿಸಬಹುದು ಮತ್ತು ಉತ್ತೇಜಿಸಬಹುದು:**

- ಯುವ ಸಹಕಾರಿ ಉದ್ಯಮಗಳು : ಯುವ ಉದ್ಯಮಿಗಳಿಗೆ ತರಬೇತಿ, ಹಣಕಾಸು ಮತ್ತು ಮಾರ್ಗದರ್ಶನವನ್ನು ನೀಡುವ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು, ಇದರಿಂದಾಗಿ ಅವರು ತಮ್ಮದೇ ಆದ ಸಹಕಾರಿ ವ್ಯವಹಾರಗಳನ್ನು ಪ್ರಾರಂಭಿಸಲು ಮತ್ತು ಬೆಳೆಸಲು ಅನುವು ಮಾಡಿಕೊಡುತ್ತದೆ.
- ಸಹಕಾರಿ ವ್ಯವಹಾರ ಇನ್ಕ್ಯುಬೇಟರ್‌ಗಳು : ತಾಂತ್ರಿಕ ಮಾರ್ಗದರ್ಶನ, ಕಾರ್ಯಕ್ಷೇತ್ರ ಮತ್ತು ನೆಟ್‌ವರ್ಕಿಂಗ್ ಬೆಂಬಲದ ಮೂಲಕ ನವೀನ ಸಹಕಾರಿ ವ್ಯವಹಾರ ಕಲ್ಪನೆಗಳನ್ನು ಪೋಷಿಸಲು ಎನ್‌ಸಿಯುಐ, ರಾಜ್ಯ ಸಹಕಾರಿ ಸಂಘಗಳು ಮತ್ತು ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಮೀಸಲಾದ ಇನ್ಕ್ಯುಬೇಟರ್‌ಗಳನ್ನು ಸ್ಥಾಪಿಸುವುದು.
- ಯುವಜನರ ನೇತೃತ್ವದ ಸಹಕಾರ ಸಂಘಗಳು : ಸ್ವಯಂ ಉದ್ಯೋಗ, ಕೌಶಲ್ಯ ಅನ್ವಯಿಕೆ ಮತ್ತು ಸಮುದಾಯ ಸೇವೆಯ ಮಾದರಿಗಳಾಗಿ ಕಾರ್ಯನಿರ್ವಹಿಸಲು ಯುವಕರ ಒಡೆತನದ ಮತ್ತು ನಿರ್ವಹಣೆಯ ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸುವುದು.

- ಯುವ ಸಹಕಾರಿ ಉದ್ಯಮಿಗಳ ವೇದಿಕೆ : ಮಹತ್ವಾಕಾಂಕ್ಷಿ ಸಹಕಾರಿ ಸಂಸ್ಥಾಪಕರನ್ನು ಪ್ರೇರೇಪಿಸಲು ಯುವ ಸಹಕಾರಿ ನಾಯಕರೊಂದಿಗೆ ಚರ್ಚೆಗಳು ಮತ್ತು ನೆಟ್‌ವರ್ಕಿಂಗ್ ಅವಧಿಗಳನ್ನು ಆಯೋಜಿಸುವುದು. ವೇದಿಕೆಯು ಸಹಪಾಠಿ ಕಲಿಕೆ, ಮಾರ್ಗದರ್ಶನ ಮತ್ತು ಸಹಯೋಗವನ್ನು ಉತ್ತೇಜಿಸುತ್ತದೆ, ನವೀನ ಸಹಕಾರಿ ಉದ್ಯಮಗಳನ್ನು ಪ್ರಾರಂಭಿಸಲು ಯುವಕರನ್ನು ಪ್ರೋತ್ಸಾಹಿಸುತ್ತದೆ.
- ಸಹಕಾರಿ ಹ್ಯಾಕಥಾನ್‌ಗಳು : ಡಿಜಿಟಲೀಕರಣ, ಮಾರ್ಕೆಟಿಂಗ್ ಮತ್ತು ಮೌಲ್ಯ ಸರಪಳಿ ನಿರ್ವಹಣೆಯಂತಹ ಸಹಕಾರಿ ವಲಯದ ಸಮಸ್ಯೆಗಳಿಗೆ ತಂತ್ರಜ್ಞಾನ–ಚಾಲಿತ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಹ್ಯಾಕಥಾನ್‌ಗಳು ಮತ್ತು ನಾವೀನ್ಯತೆ ಸವಾಲುಗಳನ್ನು ನಿರ್ವಹಿಸುತ್ತದೆ. ಮಾರ್ಗದರ್ಶನ ಅಥವಾ ಇನ್ಕ್ಯುಬೇಷನ್ ಮೂಲಕ ಗೆಲ್ಲುವ ಯೋಜನೆಗಳನ್ನು ಬೆಂಬಲಿಸುತ್ತದೆ.

**ಮಹಿಳೆಯರನ್ನು ಸಬಲೀಕರಣಗೊಳಿಸುವುದು :**

ಭಾರತದ ಮಹಿಳಾ ಜನಸಂಖ್ಯೆಯು 70.26 ಕೋಟಿ ಎಂದು ಅಂದಾಜಿಸಲಾಗಿದೆ, ಇದು ಒಟ್ಟು ರಾಷ್ಟ್ರೀಯ ಜನಸಂಖ್ಯೆಯ 48.42% ಅನ್ನು ಪ್ರತಿನಿಧಿಸುತ್ತದೆ. ಭಾರತದಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸುವುದು 2025ರ ರಾಷ್ಟ್ರೀಯ ಅಭಿವೃದ್ಧಿ ಆದ್ಯತೆಯಾಗಿದೆ, ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ, ಆರೋಗ್ಯ ಪ್ರವೇಶ, ಡಿಜಿಟಲ್ ಸಾಕ್ಷರತೆ ಮತ್ತು ರಾಜಕೀಯ ಭಾಗವಹಿಸುವಿಕೆಯ ಮೂಲಕ ಸಮಗ್ರ ಬೆಳವಣಿಗೆಯ ಮೇಲೆ ಕೇಂದ್ರೀಕರಿಸಿದೆ, ಇದು ಶಿಕ್ಷಣ, ಉದ್ಯಮಶೀಲತೆ ಮತ್ತು ಸಮಾನತೆಯನ್ನು ಸಂಯೋಜಿಸುವ ಸಮಗ್ರ ವಿಧಾನದ ಮೂಲಕ ಮುಂದುವರೆಯುತ್ತಿದೆ, ಇದು ಸರ್ಕಾರಿ ಸುಧಾರಣೆಗಳು ಮತ್ತು ಸಮುದಾಯ ಭಾಗವಹಿಸುವಿಕೆಯಿಂದ ಮಾರ್ಗದರ್ಶಿಸಲ್ಪಟ್ಟಿದೆ, ಇದು "ಮಹಿಳಾ ಅಭಿವೃದ್ಧಿ"ಯಿಂದ "ಮಹಿಳಾ ನೇತೃತ್ವದ ಅಭಿವೃದ್ಧಿ"ಗೆ ಪರಿವರ್ತನೆಯನ್ನು ಗುರುತಿಸುತ್ತದೆ.

ಸಹಕಾರ ಉದ್ಯಮಶೀಲತೆಯು ಮಹಿಳೆಯರಿಗೆ ಸಾಮೂಹಿಕವಾಗಿ ತಮ್ಮ ಆರ್ಥಿಕ ಸ್ವಾತಂತ್ರ್ಯ, ನಾಯಕತ್ವ ಮತ್ತು ಸಾಮಾಜಿಕ ಯೋಗಕ್ಷೇಮವನ್ನು ಹೆಚ್ಚಿಸಲು ಒಂದು ಸಮಗ್ರ ವೇದಿಕೆಯನ್ನು ಒದಗಿಸುತ್ತದೆ. ಈ ಕ್ಷೇತ್ರದಲ್ಲಿ ಸಬಲೀಕರಣಕ್ಕೆ ಸಾಂಸ್ಥಿಕ ಸುಧಾರಣೆಗಳು, ಆರ್ಥಿಕ ಪ್ರವೇಶ, ಸಾಮರ್ಥ್ಯ ವೃದ್ಧಿ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಒಳಗೊಂಡ ಬಹು ಆಯಾಮದ ಕಾರ್ಯತಂತ್ರದ ಅಗತ್ಯವಿದ್ದು, ಇವೆಲ್ಲವನ್ನೂ ಸಕ್ರಿಯಗೊಳಿಸುವ ನೀತಿ ಚೌಕಟ್ಟಿನೊಳಗೆ ಸಂಯೋಜಿಸಲಾಗಿದೆ.

2023ರ ಬಹು–ರಾಜ್ಯ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆಗೆ ಇತ್ತೀಚಿನ ತಿದ್ದುಪಡಿಗಳು ಮತ್ತು ರಾಜ್ಯ ಸಹಕಾರಿ ಕಾಯ್ದೆಗಳಿಗೆ ಹಲವು ಸಹಕಾರಿ ಮಂಡಳಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಸಾಂಸ್ಥಿಕಗೊಳಿಸಿದ್ದು, ಲಿಂಗ–ಸಮತೋಲಿತ ಆಡಳಿತವನ್ನು ಖಚಿತಪಡಿಸಿವೆ. ಇದಕ್ಕೆ ಪೂರಕವಾಗಿ, ನಂದಿನಿ ಸಹಕಾರ ಯೋಜನೆ ಮತ್ತು ಸ್ವಯಂ ಶಕ್ತಿ ಸಹಕಾರ ಯೋಜನೆಯಂತಹ ಉದ್ದೇಶಿತ ಹಣಕಾಸು ಯೋಜನೆಗಳು ಮಹಿಳಾ ನೇತೃತ್ವದ ಸಹಕಾರಿ ಸಂಸ್ಥೆಗಳಿಗೆ ಸಾಲ, ಸಬ್ಸಿಡಿಗಳು ಮತ್ತು ಬಡ್ಡಿ ಸಬ್ಸಿಡಿಗಳನ್ನು ವಿಸ್ತರಿಸುತ್ತವೆ, ಇದು ಉದ್ಯಮಶೀಲತೆಯನ್ನು ಸುಲಭವಾಗಿ ಮತ್ತು ಸುಸ್ಥಿರವಾಗಿಸುತ್ತದೆ.

ಅಮೂಲ್‌ನ ಡೈರಿ ಸಂಪರ್ಕ ಜಾಲದಿಂದ ಲಿಜ್ಜತ್ ಪಾಪಡ್ ಮತ್ತು ಸೇವಾವರೆಗಿನ ಗಮನಾರ್ಹ ಯಶಸ್ಸಿನ ಕಥೆಗಳು, ಸಾಮೂಹಿಕ ಉದ್ಯಮವು ಮಹಿಳೆಯರ ಜೀವನೋಪಾಯವನ್ನು ಹೇಗೆ ಪರಿವರ್ತಿಸುತ್ತದೆ ಎಂಬುದನ್ನು ವಿವರಿಸುತ್ತದೆ. ಸಾವಯವ ಉತ್ಪನ್ನಗಳು, ಕೃಷಿ ಸಂಸ್ಕರಣೆ, ನವೀಕರಿಸಬಹುದಾದ ಇಂಧನ, ಪರಿಸರ ಪ್ರವಾಸೋದ್ಯಮ ಮತ್ತು ಡಿಜಿಟಲ್ ಸೇವೆಗಳಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ಇಂತಹ ಮಾದರಿಗಳನ್ನು ಈಗ ಪುನರಾವರ್ತಿಸಬಹುದು.

ಉದ್ಯಮಶೀಲತೆ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ನಿರ್ಮಿಸುವುದು ಇನ್ನೂ ನಿರ್ಣಾಯಕವಾಗಿದೆ. ನೋಯ್ಡಾದಲ್ಲಿರುವ ಎನ್‌ಸಿಯುಐ ಕೌಶಲ್ಯ ಅಭಿವೃದ್ಧಿ ಕೇಂದ್ರದೊಂದಿಗೆ NIESBUD ಮತ್ತು IIE ನಂತಹ ಸಂಸ್ಥೆಗಳು, ಸ್ಪರ್ಧಾತ್ಮಕ ಮಾರುಕಟ್ಟೆಗಳಲ್ಲಿ ಮಹಿಳೆಯರು ಸಹಕಾರಿ ಸಂಸ್ಥೆಗಳನ್ನು ವಿಶ್ವಾಸದಿಂದ ಮುನ್ನಡೆಸಲು ತರಬೇತಿ, ಮಾರ್ಗದರ್ಶನ ಮತ್ತು ಉದ್ಯಮ ಸಂಪರ್ಕಗಳನ್ನು ಒದಗಿಸುತ್ತವೆ.

ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು, ಜೆಮ್, ಕ್ಲಸ್ಟರ್–ಆಧಾರಿತ ಮಾದರಿಗಳು ಮತ್ತು ಎನ್‌ಸಿಯುಐ ಹಾಟ್ (Haat) ನಂತಹ ಉಪಕ್ರಮಗಳ ಮೂಲಕ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವುದರಿಂದ ಮಹಿಳಾ–ನಿರ್ಮಿತ ಸಹಕಾರಿ ಉತ್ಪನ್ನಗಳ ಬ್ರ್ಯಾಂಡಿಂಗ್ ಮತ್ತು ಗೋಚರತೆಯನ್ನು ಹೆಚ್ಚಿಸಬಹುದು. ಅದೇ ಸಮಯದಲ್ಲಿ, ಸ್ವ–ಸಹಾಯ ಗುಂಪುಗಳು, ಮೈಕ್ರೋ–ಕ್ರೆಡಿಟ್ ಮತ್ತು ಕೃಷಿ, ಡೈರಿ ಹಾಗೂ ಮೀನುಗಾರಿಕೆಯಲ್ಲಿ ಬಹುಪಯೋಗಿ ಸಹಕಾರಿ ಸಂಸ್ಥೆಗಳ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವುದರ ಮೂಲಕ ತಳಮಟ್ಟದ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ.

ಸಚಿವಾಲಯಗಳು, ಸಹಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, MSME, ಕೃಷಿ ಮತ್ತು ಕೌಶಲ್ಯ ಅಭಿವೃದ್ಧಿಗಳಲ್ಲಿ ಸಮಗ್ರ ನೀತಿ ವಿಧಾನವು ಒಮ್ಮುಖ ಮತ್ತು ದಕ್ಷತೆಗೆ ಅತ್ಯಗತ್ಯ. ಇದಲ್ಲದೇ, ಮಹಿಳೆಯರ ವೇತನ ರಹಿತ ಆರೈಕೆ ಕೆಲಸವನ್ನು ಗುರುತಿಸುವುದು ಮತ್ತು ಸಮುದಾಯ ಮಟ್ಟದ

ಬೆಂಬಲ ವ್ಯವಸ್ಥೆಗಳನ್ನು ಒದಗಿಸುವುದರಿಂದ ಸಹಕಾರಿ ಚಟುವಟಿಕೆಗಳಲ್ಲಿ ಉತ್ಪಾದಕ ತೊಡಗಿಸಿಕೊಳ್ಳುವಿಕೆಗೆ ಸಮಯ ಮತ್ತು ಶಕ್ತಿಯನ್ನು ಪ್ರಾವಧಾನ ಮಾಡುತ್ತದೆ.

ಹೀಗಾಗಿ, ಸಹಕಾರಿ ಸಂಸ್ಥೆಗಳ ಮೂಲಕ ಮಹಿಳಾ ಸಬಲೀಕರಣವು ಸಮಗ್ರ ರಾಷ್ಟ್ರೀಯ ಬೆಳವಣಿಗೆಗೆ ಸಾಮಾಜಿಕ ಕಡ್ಡಾಯ ಮತ್ತು ಆರ್ಥಿಕ ತಂತ್ರವಾಗಿದೆ. ಸಾಂಸ್ಥಿಕ ಬೆಂಬಲ, ಹಣಕಾಸು, ಕೌಶಲ್ಯ ಮತ್ತು ಡಿಜಿಟಲ್ ಪ್ರವೇಶವನ್ನು ಜೋಡಿಸುವ ಮೂಲಕ, ಸಹಕಾರಿ ಸಂಸ್ಥೆಗಳು ಮಹಿಳೆಯರನ್ನು ಉದ್ಯಮ ಮತ್ತು ಬದಲಾವಣೆಯ ನಾಯಕಿಯರನ್ನಾಗಿ ಪರಿವರ್ತಿಸುವುದರ ಮೂಲಕ "ಸಹಕಾರದಿಂದ ಸಮೃದ್ಧಿ"ಯ ದೃಷ್ಟಿಕೋನವನ್ನು ಪೂರೈಸುತ್ತದೆ.

**ವಲಯ ಸಹಕಾರಿ ಸಂಸ್ಥೆಗಳ ಮೂಲಕ ಅಬಲ ವರ್ಗಗಳನ್ನು ಬಲಪಡಿಸುವುದು :**

ಕರಕುಶಲ ವಸ್ತುಗಳು, ಕೈಮಗ್ಗಗಳು, ಕಾರ್ಮಿಕ ಮತ್ತು ಮೀನುಗಾರಿಕೆ ಕ್ಷೇತ್ರಗಳು ಒಟ್ಟಾಗಿ ಭಾರತದ ಅಬಲ ಮತ್ತು ಅಂಚಿನಲ್ಲಿರುವ ಸಮುದಾಯಗಳ ವೈವಿಧ್ಯಮಯ ಮುಖಗಳನ್ನು ಪ್ರತಿನಿಧಿಸುತ್ತವೆ, ಅಲ್ಲಿ ಸಹಕಾರಿ ಮಾದರಿಯು ಸಾಮಾಜಿಕ ಸೇರ್ಪಡೆ, ಸುಸ್ಥಿರ ಜೀವನೋಪಾಯ ಮತ್ತು ಸ್ಥಳೀಯ ಉದ್ಯಮಶೀಲತೆಯನ್ನು ಸಕ್ರಿಯಗೊಳಿಸುವಲ್ಲಿ ಪರಿವರ್ತನಾತ್ಮಕ ಪಾತ್ರವನ್ನು ವಹಿಸುತ್ತದೆ.

ಕೈಮಗ್ಗ ಮತ್ತು ಕರಕುಶಲ ವಸ್ತುಗಳು : ಸಹಕಾರಿ ಉದ್ಯಮಗಳ ಮೂಲಕ ಸಾಂಪ್ರದಾಯಿಕ ಕೌಶಲ್ಯಗಳನ್ನು ಪುನರುಜ್ಜೀವನಗೊಳಿಸುವುದು :

ಭಾರತದ ಕರಕುಶಲ ಮತ್ತು ಕೈಮಗ್ಗ ವಲಯಗಳು ಶತಮಾನಗಳಷ್ಟು ಹಳೆಯ ಸಂಪ್ರದಾಯಗಳು, ಕೌಶಲ್ಯಗಳು ಮತ್ತು ಸಾಂಸ್ಕೃತಿಕ ಗುರುತನ್ನು ಉಳಿಸುತ್ತವೆ. ಇದರಲ್ಲಿ ಲಕ್ಷಾಂತರ ಗ್ರಾಮೀಣ ಕುಶಲಕರ್ಮಿಗಳು ಮತ್ತು ನೇಕಾರರು ಉದ್ಯೋಗದಲ್ಲಿದ್ದಾರೆ, ಅವರಲ್ಲಿ ಹೆಚ್ಚಿನವರು ಮಹಿಳೆಯರು, ಯುವಕರು ಮತ್ತು ಅನೌಪಚಾರಿಕ ಕೆಲಸಗಾರರಾಗಿದ್ದಾರೆ. ಆದರೂ, ಅವರು ಹೆಚ್ಚಾಗಿ ಮಧ್ಯವರ್ತಿಗಳಿಂದ ಶೋಷಣೆ, ಕಚ್ಚಾ ಸಾಮಾಗ್ರಿಗಳ ಕಡಿಮೆ ಪ್ರವೇಶ ಮತ್ತು ಆಧುನಿಕ ಮಾರುಕಟ್ಟೆಗಳಿಗೆ ಸೀಮಿತ ಮಾನ್ಯತೆ ಮುಂತಾದ ಸವಾಲುಗಳನ್ನು ಎದುರಿಸುತ್ತಿದ್ದಾರೆ. ರಾಷ್ಟ್ರೀಯ ಸಹಕಾರಿ ದತ್ತಾಂಶದ ಪ್ರಕಾರ, 91,389 ಸದಸ್ಯತ್ವ ಹೊಂದಿರುವ 5159 ಕರಕುಶಲ ಸಹಕಾರಿ ಸಂಘಗಳು ಮತ್ತು 16,55,428 ಸದಸ್ಯರನ್ನು ಹೊಂದಿರುವ 19,545 ಕೈಮಗ್ಗ ಜವಳಿ ಮತ್ತು ನೇಕಾರರ ಸಹಕಾರಿ ಸಂಘಗಳಿವೆ. ಈ ವಲಯಗಳಲ್ಲಿನ ಸಹಕಾರಿ ಉದ್ಯಮಶೀಲತೆಯು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವುದಲ್ಲದೇ, ಗೌರವಾನ್ವಿತ ಸ್ವ-ಉದ್ಯೋಗ ಮತ್ತು ಸುಸ್ಥಿರ ಗ್ರಾಮೀಣ ಜೀವನೋಪಾಯವನ್ನು ಉತ್ತೇಜಿಸುತ್ತದೆ.

**ಕಾರ್ಮಿಕ ಸಹಕಾರ ಸಂಘಗಳು : ಘನತೆ ಮತ್ತು ಯೋಗ್ಯ ಕೆಲಸಕ್ಕಾಗಿ ಅಸಂಘಟಿತರನ್ನು ಸಂಘಟಿಸುವುದು :**

ಕಾರ್ಮಿಕ ಸಹಕಾರ ಸಂಘಗಳು ನಿರ್ಮಾಣ, ಸಾರಿಗೆ, ಸಣ್ಣ ಉತ್ಪಾದನೆ ಮತ್ತು ಸೇವೆಗಳಲ್ಲಿ ತೊಡಗಿರುವ ಅನೌಪಚಾರಿಕ ಮತ್ತು ಅಸಂಘಟಿತ ಕಾರ್ಮಿಕರನ್ನು ಸಬಲೀಕರಣಗೊಳಿಸುವ ಒಂದು ಸಾಬೀತಾದ ಕಾರ್ಯವಿಧಾನವಾಗಿದೆ. ಈ ಸಹಕಾರ ಸಂಘಗಳು ಕಾರ್ಮಿಕರಲ್ಲಿ ಒಗ್ಗಟ್ಟನ್ನು ಬೆಳೆಸುವುದರ ಜೊತೆಗೆ ನ್ಯಾಯಯುತ ವೇತನ, ನಿಯಮಿತ ಉದ್ಯೋಗ ಮತ್ತು ಸಾಮಾಜಿಕ ರಕ್ಷಣೆಯನ್ನು ಖಚಿತಪಡಿಸುತ್ತವೆ.

ಯುವಕರು ಮತ್ತು ನುರಿತ ಕೆಲಸಗಾರರನ್ನು ಸೇವಾ-ಆಧಾರಿತ ಅಥವಾ ಯೋಜನೆ-ಆಧಾರಿತ ಕಾರ್ಮಿಕ ಸಹಕಾರ ಸಂಘಗಳನ್ನು ರಚಿಸಲು ಪ್ರೋತ್ಸಾಹಿಸುವುದರ ಮೂಲಕ, ಸಮುದಾಯಗಳು ಸ್ಥಳೀಯ ಉದ್ಯೋಗವನ್ನು ಸೃಷ್ಟಿಸಬಹುದು ಮತ್ತು ಸಾಂಸ್ಥಿಕ ಒಪ್ಪಂದಗಳನ್ನು ಪ್ರವೇಶಿಸಬಹುದು. ರಾಷ್ಟ್ರೀಯ ಸಹಕಾರಿ ದತ್ತಾಂಶದ ಪ್ರಕಾರ 90,86,617 ಸದಸ್ಯರನ್ನು ಹೊಂದಿರುವ 46,601 ಕಾರ್ಮಿಕ ಸಹಕಾರ ಸಂಘಗಳಿವೆ.

**ಮೀನುಗಾರಿಕೆ ಸಹಕಾರ ಸಂಘಗಳು : ಜೀವನೋಪಾಯ ಮತ್ತು ಸುಸ್ಥಿರತೆಯನ್ನು ಬಲಪಡಿಸುವುದು :**

ಮೀನುಗಾರಿಕೆ ಸಹಕಾರ ಸಂಘಗಳು ಕರಾವಳಿ ಮತ್ತು ಒಳನಾಡಿನ ಮೀನುಗಾರಿಕಾ ಸಮುದಾಯಗಳ ಜೀವನೋಪಾಯ ಭದ್ರತೆಯನ್ನು ಖಾತ್ರಿಪಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವು ಸುಸ್ಥಿರ ಕೊಯ್ಲು ಮತ್ತು ಪರಿಸರ ಉಸ್ತುವಾರಿಯನ್ನು ಪ್ರೋತ್ಸಾಹಿಸುವಾಗ ಸಾಲ, ಉಪಕರಣಗಳು, ಕೋಲ್ಡ್ ಸ್ಟೋರೇಜ್ ಮತ್ತು ಮಾರುಕಟ್ಟೆಗಳಿಗೆ ಸಾಮೂಹಿಕ ಪ್ರವೇಶವನ್ನು ಬೆಂಬಲಿಸುತ್ತವೆ. ರಾಷ್ಟ್ರೀಯ ಸಹಕಾರಿ ದತ್ತಾಂಶದ ಪ್ರಕಾರ 37,50,963 ಸದಸ್ಯತ್ವ ಹೊಂದಿರುವ 27,090 ಮೀನುಗಾರಿಕಾ ಸಹಕಾರ ಸಂಘಗಳಿವೆ.

ಈ ಎಲ್ಲಾ ನಾಲ್ಕು ವಲಯಗಳು ಸಾಮಾನ್ಯ ಅಭಿವೃದ್ಧಿಯ ಎಳೆಯನ್ನು ಹಂಚಿಕೊಳ್ಳುತ್ತವೆ : ಅವು ಶ್ರಮದಾಯಕ, ಸಮುದಾಯ ಆಧಾರಿತ ಮತ್ತು ಸಮಾಜದ ಅಬಲ ವರ್ಗಗಳಿಂದ ಪ್ರಾಬಲ್ಯ ಹೊಂದಿವೆ. ಅವು ಅನೌಪಚಾರಿಕ ಆರ್ಥಿಕತೆಯನ್ನು ಪ್ರತಿನಿಧಿಸುತ್ತವೆ, ಅಲ್ಲಿ ಸಹಕಾರಿ ಸಂಸ್ಥೆಗಳು ಸಾಮೂಹಿಕ ಶಕ್ತಿ, ಹಣಕಾಸಿನ ಪ್ರವೇಶ, ಹಂಚಿಕೆಯ ಮೂಲಸೌಕರ್ಯ ಮತ್ತು ಉತ್ತಮ ಮಾರುಕಟ್ಟೆ ಏಕೀಕರಣವನ್ನು ತರಬಹುದು. ಸಹಕಾರಿ ಚೌಕಟ್ಟುಗಳ ಅಡಿಯಲ್ಲಿ ಈ ವಲಯಗಳನ್ನು ಸಂಘಟಿಸುವ ಮೂಲಕ, ಭಾರತವು ಎಲ್ಲರನ್ನೂ ಒಳಗೊಳ್ಳುವ ಉದ್ಯಮಶೀಲತೆಗಾಗಿ ಹೊಸ ಮಾರ್ಗಗಳನ್ನು ತೆರೆಯಬಹುದು, ಸ್ಥಳೀಯ ಉದ್ಯೋಗವನ್ನು ಸೃಷ್ಟಿಸಬಹುದು ಮತ್ತು

ಗ್ರಾಮೀಣ–ನಗರ ವಲಸೆಯನ್ನು ಕಡಿಮೆ ಮಾಡಬಹುದು.

ಸಹಕಾರಿ ಉದ್ಯಮಶೀಲತೆಯು ಸಾಮೂಹಿಕ ಮಾಲೀಕತ್ವ, ಪ್ರಜಾಸತ್ತಾತ್ಮಕ ಆಡಳಿತ ಮತ್ತು ಉದ್ಯಮ ದಕ್ಷತೆಯನ್ನು ಸಂಯೋಜಿಸುವ ಮೂಲಕ ಪರಿವರ್ತನಾತ್ಮಕ ಮಾರ್ಗವನ್ನು ನೀಡುತ್ತದೆ. ಈ ವಲಯಗಳ ಸಾಮರ್ಥ್ಯವನ್ನು ತೆರೆಯಲು, ಸಾಂಸ್ಥಿಕ, ಹಣಕಾಸು, ಡಿಜಿಟಲ್ ಮತ್ತು ನೀತಿ ಮಧ್ಯಸ್ಥಿಕೆಗಳನ್ನು ಸಂಯೋಜಿಸುವ ಬಹು ಆಯಾಮದ ವಿಧಾನವು ಅತ್ಯಗತ್ಯ.

ಮೊದಲನೇಯದಾಗಿ, ಕುಶಲಕರ್ಮಿಗಳು, ನೇಕಾರರು, ಕಾರ್ಮಿಕರು ಮತ್ತು ಮೀನುಗಾರರನ್ನು ಕಾರ್ಯಸಾಧ್ಯವಾದ ವ್ಯವಹಾರ ಘಟಕಗಳಾಗಿ ಸಂಘಟಿಸಲು ಉತ್ಪಾದಕ ಮತ್ತು ಕಾರ್ಮಿಕರ ಸಹಕಾರ ಸಂಘಗಳ ರಚನೆ ಮತ್ತು ಬಲವರ್ಧನೆಗೆ ಆದ್ಯತೆ ನೀಡಬೇಕು. ಅಂತಹ ಸಹಕಾರಿ ಸಂಸ್ಥೆಗಳು ಸಂಪನ್ಮೂಲಗಳನ್ನು ಒಟ್ಟುಗೂಡಿಸುತ್ತದೆ, ಮಧ್ಯವರ್ತಿಗಳನ್ನು ಕಡಿಮೆ ಮಾಡುತ್ತದೆ ಮತ್ತು ಸಾಮೂಹಿಕ ಉತ್ಪಾದನೆ ಹಾಗೂ ಮಾರುಕಟ್ಟೆ ಮೂಲಕ ಸದಸ್ಯರು ಹೆಚ್ಚಿನ ಮೌಲ್ಯವನ್ನು ಹಿಡಿದಿಡಲು ಅನುವು ಮಾಡಿಕೊಡುತ್ತದೆ.

ಎರಡನೇಯದಾಗಿ, ಸಾಮರ್ಥ್ಯ ಮತ್ತು ಕೌಶಲ್ಯ ವರ್ಧನೆಯನ್ನು ಪ್ರತಿಯೊಂದು ಹಂತದಲ್ಲೂ ಅಳವಡಿಸಬೇಕು. ವಿನ್ಯಾಸ ನಾವೀನ್ಯತೆ, ಸುಸ್ಥಿರ ಉತ್ಪಾದನೆ, ಹಣಕಾಸು ನಿರ್ವಹಣೆ ಮತ್ತು ಡಿಜಿಟಲ್ ಮಾರ್ಕೆಟಿಂಗ್‌ನಲ್ಲಿ ತರಬೇತಿಯು ಬದಲಾಗುತ್ತಿರುವ ಗ್ರಾಹಕರ ಆದ್ಯತೆಗಳು ಮತ್ತು ತಂತ್ರಜ್ಞಾನ–ಚಾಲಿತ ಮಾರುಕಟ್ಟೆಗಳಿಗೆ ಹೊಂದಿಕೊಳ್ಳಲು ಸದಸ್ಯರಿಗೆ ಸಹಾಯ ಮಾಡುತ್ತದೆ.

ಮೂರನೇಯದಾಗಿ, ಹಣಕಾಸು ಮತ್ತು ಮೂಲಸೌಕರ್ಯಕ್ಕೆ ಪ್ರವೇಶವು ನಿರ್ಣಾಯಕವಾಗಿ ಉಳಿದಿದೆ. ಸಹಕಾರಿ ಬ್ಯಾಂಕುಗಳು, ನಬಾರ್ಡ್ ಮತ್ತು ಕಿರುಬಂಡವಾಳ ಸಂಸ್ಥೆಗಳೊಂದಿಗಿನ ಬಲವಾದ ಸಂಪರ್ಕಗಳು ನ್ಯಾಯಯುತ ನಿಯಮಗಳಲ್ಲಿ ಕಾರ್ಯನಿರತ ಬಂಡವಾಳ ಮತ್ತು ಸಾಲವನ್ನು ಒದಗಿಸುತ್ತದೆ, ಆದರೆ ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಯು ಆಧುನಿಕ ಉಪಕರಣಗಳು, ಪ್ಯಾಕೇಜಿಂಗ್ ಮತ್ತು ಶೇಖರಣಾ ಸೌಲಭ್ಯಗಳ ಹಂಚಿಕೆಯ ಬಳಕೆಯನ್ನು ಅನುಮತಿಸುತ್ತದೆ.

ನಾಲ್ಕನೇಯದಾಗಿ, ಡಿಜಿಟಲ್ ಮತ್ತು ಬ್ರ್ಯಾಂಡಿಂಗ್ ಏಕೀಕರಣವು ಸ್ಪರ್ಧಾತ್ಮಕತೆಗೆ ಪ್ರಮುಖವಾಗಿದೆ. ಔಓಆಅ, ಂಟಚಿದಂಟ ಏಚಿಡಿಉಂಚಿಡಿ ಅಥವಾ ಉಜಒ ಮೂಲಕ ಇ–ಕಾಮರ್ಸ್ ಸಂಪರ್ಕಗಳು, "ಅಂಂಖಿಒಚಿಜಜ" ನಂತಹ ಸಹಕಾರಿ ನೇತೃತ್ವದ ಬ್ರ್ಯಾಂಡಿಂಗ್ ಉಪಕ್ರಮಗಳೊಂದಿಗೆ ಸಂಯೋಜಿಸಲ್ಪಟ್ಟು ಮಾರುಕಟ್ಟೆ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ, ಗ್ರಾಹಕರ ವಿಶ್ವಾಸವನ್ನು ಬೆಳೆಸುತ್ತದೆ ಮತ್ತು ಭೌಗೋಳಿಕ ಸೂಚನೆಗಳು ಹಾಗೂ ಗುಣಮಟ್ಟದ ಪ್ರಮಾಣೀಕರಣಗಳ ಮೂಲಕ ಮೌಲ್ಯವನ್ನು ಹೆಚ್ಚಿಸುತ್ತದೆ.

ಐದನೇಯದಾಗಿ, ಈ ಆವೇಗವನ್ನು ಉಳಿಸಿಕೊಳ್ಳಲು ಅನುಕೂಲಕರ ನೀತಿ ಪರಿಸರ ವ್ಯವಸ್ಥೆ ಅತ್ಯಗತ್ಯ. ಸರಳೀಕೃತ ಅನುಸರಣಾ ಮಾನದಂಡಗಳು, ಹಣಕಾಸಿನ ಪ್ರೋತ್ಸಾಹಕಗಳು, ಸರ್ಕಾರಿ ಸಂಗ್ರಹಣೆಯಲ್ಲಿ ಸಹಕಾರಿ ಉತ್ಪನ್ನಗಳ ಸೇರ್ಪಡೆ ಮತ್ತು ರಾಷ್ಟ್ರೀಯ ಸಹಕಾರಿ ನೀತಿ 2025ರೊಂದಿಗೆ ಹೊಂದಾಣಿಕೆ ಮಾಡುವುದು ಸಹಕಾರಿ–ನೇತೃತ್ವದ ಉದ್ಯಮ ಬೆಳವಣಿಗೆಯನ್ನು ವೇಗಗೊಳಿಸುತ್ತದೆ. ಸಮಾನಾಂತರವಾಗಿ, ಸಹಕಾರಿ ಜಾಗೃತಿ ಅಭಿಯಾನಗಳು, ಯುವ ತೊಡಗಿಸಿಕೊಳ್ಳುವಿಕೆ ಕಾರ್ಯಕ್ರಮಗಳು ಮತ್ತು ಸಮುದಾಯ ಅಭಿಯಾನಗಳು ಸಹಕಾರಿ ನೆಲೆಯನ್ನು ವಿಸ್ತರಿಸುತ್ತದೆ ಹಾಗೂ ಹೊಸ ಉದ್ಯಮಿಗಳನ್ನು ಪೋಷಿಸುತ್ತದೆ.

ಕೊನೆಯದಾಗಿ, ಖಾಸಗಿ–ಸಾರ್ವಜನಿಕ–ಸಹಕಾರಿ ಪಾಲುದಾರಿಕೆಗಳ (PPCP) ಮೂಲಕ ಅಂತರ–ವಲಯ ಪಾಲುದಾರಿಕೆಗಳು ತಂತ್ರಜ್ಞಾನ, ಮಾರುಕಟ್ಟೆ ಪ್ರವೇಶ ಮತ್ತು ನಾವೀನ್ಯತೆಯನ್ನು ಸಂಯೋಜಿಸುತ್ತದೆ. ಭಾರತ ಸರ್ಕಾರದ ಬೆಂಬಲದೊಂದಿಗೆ ಮಹಾರಾಷ್ಟ್ರದ ಕೋಪರ್ಗಾಂವ್‌ನಲ್ಲಿರುವ ಸಹಕಾರಿ ಮಲ್ಟಿ–ಫೀಡ್ ಸಂಕುಚಿತ ಜೈವಿಕ ಅನಿಲ ಸ್ಥಾವರದಂತಹ ಉಪಕ್ರಮಗಳು, ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ಕ್ಷೇತ್ರಗಳನ್ನು ಮೀರಿ ಹಸಿರು ಕೈಗಾರಿಕೆಗಳು ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಿಗೆ ಹೇಗೆ ಚಲಿಸಬಹುದು, ವೃತ್ತಾಕಾರದ ಮತ್ತು ಸುಸ್ಥಿರ ಆರ್ಥಿಕತೆಗೆ ಕೊಡುಗೆ ನೀಡಬಹುದು ಎಂಬುದನ್ನು ಉದಾಹರಣೆಯಾಗಿ ತೋರಿಸುತ್ತವೆ.

**ಸಮಗ್ರ ಉದ್ಯಮಶೀಲತೆಯ ಇಂಜಿನ್ ಆಗಿ ಸಹಕಾರ :**

ಸಹಕಾರಿ ಉದ್ಯಮಶೀಲತೆಯ ಮೂಲಕ ಯುವಜನರು, ಮಹಿಳೆಯರು ಮತ್ತು ಅಬಲ ವರ್ಗಗಳ ಸಬಲೀಕರಣವು "ಸಹಕಾರದಿಂದ ಸಮೃದ್ಧಿ"ಯ ಮನೋಭಾವವನ್ನು ಸಾಕಾರಗೊಳಿಸುತ್ತದೆ. ಸಾಂಪ್ರದಾಯಿಕ ವಲಯಗಳನ್ನು ಆಧುನೀಕರಿಸುವ ಮೂಲಕ ಮತ್ತು ಸಾಮೂಹಿಕ ಉದ್ಯಮಗಳನ್ನು ಸಕ್ರಿಯಗೊಳಿಸುವ ಮೂಲಕ, ಸಹಕಾರಿ ಸಂಸ್ಥೆಗಳು ಸಾಮಾಜಿಕ ಸೇರ್ಪಡೆ ಮತ್ತು ಆರ್ಥಿಕ ಸ್ಪರ್ಧಾತ್ಮಕತೆಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ವೃತ್ತಿಪರತೆ, ನಾವೀನ್ಯತೆ ಮತ್ತು ಪಾಲುದಾರಿಕೆಯಲ್ಲಿ ನೆಲೆಗೊಂಡಿರುವ ಭವಿಷ್ಯಕ್ಕೆ ಸಿದ್ಧವಾಗಿರುವ ಸಹಕಾರಿ ಪರಿಸರ ವ್ಯವಸ್ಥೆಯು ಭಾರತದ ಅನೌಪಚಾರಿಕ ಕಾರ್ಯಪಡೆಯನ್ನು ಸಂಘಟಿತ ಉದ್ಯಮಿಗಳನ್ನಾಗಿ ಪರಿವರ್ತಿಸುತ್ತದೆ, ಸಮಾನ ಮೌಲ್ಯ ವಿತರಣೆಯನ್ನು ಖಚಿತಪಡಿಸಿಕೊಳ್ಳುತ್ತದೆ ಮತ್ತು ಆತ್ಮನಿರ್ಭರ ಭಾರತಕ್ಕೆ ಅರ್ಥಪೂರ್ಣವಾಗಿ ಕೊಡುಗೆ ನೀಡುತ್ತದೆ. ಈ ಸಂಯೋಜಿತ ವಿಧಾನದ ಮೂಲಕ, ಸಹಕಾರಿ ಸಂಸ್ಥೆಗಳು ಪರಸ್ಪರ ಸಹಾಯದ ಸಂಸ್ಥೆಗಳಾಗುವುದಲ್ಲದೇ, ಅಂತರ್ಗತ, ಸುಸ್ಥಿರ ಮತ್ತು ಸ್ಥಳೀಯವಾಗಿ ಬೇರೂರಿರುವ ಆರ್ಥಿಕ ಬೆಳವಣಿಗೆಯ ಇಂಜಿನ್‌ಗಳಾಗುತ್ತವೆ.

# 19 ನವೆಂಬರ್ 2025

## ಪ್ರವಾಸೋದ್ಯಮ, ಆರೋಗ್ಯ, ಹಸಿರು ಶಕ್ತಿ, ಸಹಕಾರಗಳ ವೇದಿಕೆ, ಸಹಕಾರಗಳ ಅಡುಗೆ, ಹಾಗೂ ಇತರೆ ಸಾಧ್ಯ ಕ್ಷೇತ್ರಗಳಲ್ಲಿ ಸಹಕಾರ ಸಂಸ್ಥೆಗಳ ವಿಸ್ತರಣೆ.

## Expanding cooperatives in emerging areas such as Tourism, Health, Green Energy, Platform Coops, Kitchen Coops and any other Conceivable area

ಅನುವಾದ : ಶ್ರೀಮತಿ ಸವಿತ ಎನ್. ಇ. ಕಿರಿಯ ಅಧಿಕಾರಿ ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು

ಭಾರತದ ಸಹಕಾರ ಚಳವಳಿ ಕೃಷಿ, ಹಾಲು ಉತ್ಪಾದನೆ, ಸಾಲ–ಧನ ಮತ್ತು ಕೈಮಗ್ಗ ಕ್ಷೇತ್ರಗಳಲ್ಲಿ ಸದಾ ಬಲವಾಗಿ ಬೆಳೆಯುತ್ತಿದೆ. ಈ ಸಹಕಾರಿಗಳು ಜನರಿಗೆ ವೆಚ್ಚವನ್ನು ಕಡಿಮೆ ಮಾಡಲು, ಅಪಾಯವನ್ನು ಹಂಚಿಕೊಳ್ಳಲು ಮತ್ತು ಒಟ್ಟಾಗಿ ಆದಾಯ ಗಳಿಸಲು ಸಹಾಯ ಮಾಡಿವೆ.

ಈ ನಾಲ್ಕು ಕ್ಷೇತ್ರಗಳು ಸಹಕಾರದ ಮಾದರಿಯಲ್ಲಿ ಕಾರ್ಯನಿರ್ವಹಿಸಿದರೆ ಅನೇಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಜನರಿಗೆ ಹೊಸ ಆದಾಯ ಮಾರ್ಗಗಳನ್ನು ಒದಗಿಸಬಹುದು.

ಭಾರತದ ಸಹಕಾರಿ ಚಳುವಳಿ ಕೃಷಿ, ಹಾಲು, ಕ್ರೆಡಿಟ್ ಮತ್ತು ಹಸ್ತವಸ್ತ್ರದಂತಹ ಕ್ಷೇತ್ರಗಳಲ್ಲಿ ಸದಾ ಬಲವಾಗಿಯೇ ಉಳಿದಿದೆ. ಈ ಸಹಕಾರಿಗಳು ಜನರಿಗೆ ವೆಚ್ಚವನ್ನು ಕಡಿಮೆ ಮಾಡಲು, ಅಪಾಯವನ್ನು ಹಂಚಿಕೊಳ್ಳಲು ಮತ್ತು ಒಟ್ಟಿಗೆ ಆದಾಯ ಗಳಿಸಲು ಸಹಾಯ ಮಾಡಿವೆ.

ಈಗ ನಮ್ಮ ದೇಶ ಡಿಜಿಟಲ್ ಆಗಿ ಮತ್ತು ನಗರೀಕರಣದ ದಿಕ್ಕಿನಲ್ಲಿ ಬೆಳೆಯುತ್ತಿರುವುದರಿಂದ, ಹೊಸ ಹೊಸ ಕ್ಷೇತ್ರಗಳು ಸಹಕಾರಿಗಳಲ್ಲಿ ಬೆಳೆಯಲು ಅವಕಾಶ ನೀಡುತ್ತಿವೆ. ಇವುಗಳಲ್ಲಿ ಪರ್ಯಟನ (Tourism), ಆರೋಗ್ಯ ಸೇವೆಗಳು (Health Services), ಹಸಿರು ಶಕ್ತಿ (Green Energy) ಮತ್ತು ಸೇವಾ ವೇದಿಕೆಗಳು (Service Platforms) ಪ್ರಮುಖವಾಗಿವೆ. ಈ ನಾಲ್ಕು ಕ್ಷೇತ್ರಗಳು ಸಹಕಾರಿಗಳ ಮೂಲಕ ನಿರ್ವಹಿಸಿದರೆ ಹೊಸ ಉದ್ಯೋಗಾವಕಾಶಗಳು ಮತ್ತು ಆದಾಯದ ಮೂಲಗಳು ಸೃಷ್ಟಿಯಾಗುವ ಸಾಧ್ಯತೆಯಿದೆ.

ಪ್ರಸ್ತುತ, ಈ ಕ್ಷೇತ್ರಗಳ ಬಹುಪಾಲು ಸೇವೆಗಳು ಅಸಂಘಟಿತ ಮತ್ತು ಅಸಮರ್ಪಕವಾಗಿವೆ. ಜನರು ಕಳಪೆ ಗುಣಮಟ್ಟ, ಅನ್ಯಾಯದ ಬೆಲೆಗಳು ಮತ್ತು ನಂಬಿಕಾರ್ಹ ಸೇವೆಗಳ ಕೊರತೆ ಎಂಬ ಸಮಸ್ಯೆಗಳನ್ನು ಎದುರಿಸುತ್ತಾರೆ. ಸಹಕಾರಿಗಳು ಈ ಸಮಸ್ಯೆಗಳನ್ನು ಪರಿಹರಿಸಬಹುದುಜನರನ್ನು ಒಟ್ಟುಗೂಡಿಸಿ, ಸ್ಪಷ್ಟ ನಿಯಮಗಳನ್ನು ರೂಪಿಸಿ, ನ್ಯಾಯಸಮ್ಮತ ವೇತನವನ್ನು ಖಚಿತಪಡಿಸಿ ಮತ್ತು ವಿಶ್ವಾಸಾರ್ಹ ಸೇವೆಗಳನ್ನು ಒದಗಿಸುವ ಮೂಲಕ.

### ಸಹಕಾರಿ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು (Expanding Cooperatives in Emerging Areas):

- **ಪ್ರವಾಸೋದ್ಯಮ ಸಹಕಾರಿಗಳು (Tourism Cooperatives):** ಗ್ರಾಮೀಣ ಪ್ರವಾಸೋದ್ಯಮ, ಪರಿಸರ ಸ್ನೇಹಿ ಪ್ರವಾಸಗಳು, ಸಾಂಸ್ಕೃತಿಕ ಅನುಭವಗಳು ಮುಂತಾದವುಗಳನ್ನು ಉತ್ತೇಜಿಸಬಹುದು. ನಗರಗಳಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಬರುವ ಮೆಡಿಕಲ್ ಟೂರಿಸಂ (Medical Tourism) ಕ್ಷೇತ್ರದಲ್ಲಿಯೂ ಸಹ ಸಹಕಾರಿಗಳು ಪ್ರಮುಖ ಪಾತ್ರವಹಿಸಬಹುದು.

- **ಆರೋಗ್ಯ ಸಹಕಾರಿಗಳು (Health Cooperatives):**

ಅಂಬುಲೆನ್ಸ್ ಸೇವೆಗಳನ್ನು ನಿರ್ವಹಿಸುವುದು, ಮನೆಮೂಲ ಆರೋಗ್ಯ ಪರೀಕ್ಷೆ (Home Health Check-ups), ಆನ್‌ಲೈನ್ ವೈದ್ಯಕೀಯ ಸಲಹೆ ವ್ಯವಸ್ಥೆ, ಮತ್ತು ಔಷಧಿಗಳನ್ನು ಮನೆ ಬಾಗಿಲಿಗೆ ತಲುಪಿಸುವಂತಹ ಸೇವೆಗಳನ್ನು ಒದಗಿಸಬಹುದು.

- **ಹಸಿರು ಶಕ್ತಿ ಸಹಕಾರಿಗಳು (Green Energy Cooperatives):**

ಸೋಲಾರ್ ಪ್ಯಾನೆಲ್‌ಗಳ ಸ್ಥಾಪನೆ, ಬಯೋ ಗ್ಯಾಸ್ ಘಟಕಗಳ ನಿರ್ವಹಣೆ, ಕೃಷಿಗಾಗಿ ಸೌರಜಲ ಪಂಪುಗಳ ಕಾರ್ಯಾಚರಣೆ, ಮತ್ತು ಎಲೆಕ್ಟ್ರಿಕ್ ವಾಹನ (EV) ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ ಮಾಡುವ ಮೂಲಕ ನವೀನ ಶಕ್ತಿಯ ಬಳಕೆಯನ್ನು ಉತ್ತೇಜಿಸಬಹುದು.

- **ಸೇವಾ ಸಹಕಾರಿಗಳು (Service Cooperatives):**

ಸೂತ್ರಧಾರರು, ಚಾಲಕರು, ಎಲೆಕ್ಟ್ರಿಷಿಯನ್‌ಗಳು, ಮನೆ ಕೆಲಸಗಾರರು ಮತ್ತು ಶಿಶುಪಾಲಕರು (Nannies) ಇವರುಗಳಂತಹ ಕಾರ್ಮಿಕರನ್ನು ಒಂದೇ ಡಿಜಿಟಲ್ ವೇದಿಕೆ/ಸ್ಥಳದಲ್ಲಿ ಒಟ್ಟುಗೂಡಿಸಬಹುದು. ಈ ಪ್ಲಾಟಫಾರ್ಮ್‌ಗಳು ಕಾರ್ಮಿಕರ ಸ್ವಾಮ್ಯದಲ್ಲೇ ಇರುತ್ತವೆ, ಇದರಿಂದ ನ್ಯಾಯಸಮ್ಮತ ವೇತನ ಮತ್ತು ನಂಬಿಕೆಯ ಸೇವೆ ಖಚಿತವಾಗುತ್ತದೆ.

### ಅಳವಡಿಕೆ ಮತ್ತು ಅನುಷ್ಠಾನಕ್ಕೆ ಪಾಠಗಳನ್ನು ನೀಡುವ ಜಾಗತಿಕ ಸಹಕಾರ ಉದಾಹರಣೆಗಳು

**ಅಗ್ರಿ–ಟೂರಿಸಂ ಮಲ್ಟಿ–ಸ್ಟೇಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ATCOS) ಭಾರತ:**

ಈ ಸಹಕಾರಿ ಸಂಸ್ಥೆ ಕೃಷಿ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳನ್ನು ಒಟ್ಟುಗೂಡಿಸಿರುವ ವಿಶಿಷ್ಟ ಮಾದರಿಯಾಗಿದೆ. ಇದರ ಮೂಲಕ ಫಾರ್ಮ್ ಸ್ಟೇಗಳು, ಹೋಮ್ ಸ್ಟೇಗಳು, ಟೆಂಟ್ ಪ್ರವಾಸೋದ್ಯಮ, ಸಾವಯವ ಕೃಷಿ ಉತ್ಪನ್ನಗಳ ಮಾರಾಟ, ವೆಲ್ನೆಸ್ ಪ್ರವಾಸೋದ್ಯಮ, ಹಾಗು ಬ್ಯಾಕ್ವಾಟರ್ ಪ್ರವಾಸೋದ್ಯಮ ಮುಂತಾದ ಹಲವಾರು ಸೇವೆಗಳು ಒದಗಿಸಲಾಗುತ್ತಿವೆ.

ನ್ಯೂ ಇಂಡಿಯಾ ಟ್ರಾವೆಲ್ ಕೋ–ಆಪರೇಟಿವ್ ಲಿಮಿಟೆಡ್ (NITC)

ಭಾರತ (ಕೇರಳ / ಪುದುಚೇರಿ): ಈ ಸಹಕಾರಿ ಸಂಸ್ಥೆ ಪ್ರವಾಸೋದ್ಯಮ ಮತ್ತು ಸಾರಿಗೆ ಸೇವೆಗಳು, ಪ್ರವಾಸಿ ಪ್ಯಾಕೇಜುಗಳು ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಸದಸ್ಯ ಸಹಕಾರಿಗಳಿಗೆ ಬೆಂಬಲ ಒದಗಿಸುವ ಮಲ್ಟಿ-ಸ್ಟೇಟ್ ಸಹಕಾರ ಸಂಘವಾಗಿದೆ. ಇದರಲ್ಲಿ ಸಣ್ಣ ಪ್ರವಾಸೋದ್ಯಮ / ಪ್ರಯಾಣ ಘಟಕಗಳು ಸದಸ್ಯರಾಗಿದ್ದು, ಒಟ್ಟಾಗಿ ಸಮೂಹ ಮಾರುಕಟ್ಟೆಗೊಳಿಸುವಿಕೆ (collective marketing), ಸಾಮರ್ಥ್ಯ ವೃದ್ಧಿ (capacity building) ಮತ್ತು ಸಂಪನ್ಮೂಲ ಹಂಚಿಕೆ (pooling of resources) ಮಾಡುವ ಮೂಲಕ ಹೆಚ್ಚಿನ ಮಟ್ಟದ ವ್ಯವಹಾರ ವಿಸ್ತರಣೆ ಸಾಧಿಸುತ್ತಿವೆ. ಈ ಮಾದರಿಯು ಸಣ್ಣ ಮಟ್ಟದ ಸಂಸ್ಥೆಗಳಿಗೆ ಮಾರುಕಟ್ಟೆಯಲ್ಲಿ ದೊಡ್ಡ ಮಟ್ಟದ ಪ್ರಭಾವ ಪಡೆಯಲು ಸಹಕಾರಿಯಾಗಿದೆ. ಆದರೆ, ಈ ಸಂಸ್ಥೆಗಳು ಸ್ಥಳೀಯ ಘಟಕಗಳ ನಡುವಿನ ಗುಣಮಟ್ಟ ಮತ್ತು ಸೇವಾ ನಿರಂತರತೆ (consistency) ಕಾಪಾಡಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ.

**ಸಿಯಾಸ್ ಆಸ್ಪತ್ರೆ / SCIALS (Scias SCCL) ಸ್ಪೇನ್:**

ಇದು ಬಳಕೆದಾರರು ಮತ್ತು ವೈದ್ಯಕೀಯ ವೃತ್ತಿಪರರು ಸಹ ನಿರ್ವಹಿಸುವ ಸಹಕಾರಿ ಆಸ್ಪತ್ರೆ. ಇದರ ಮಿಶ್ರ ಸದಸ್ಯತ್ವದಲ್ಲಿ ಆಸ್ಪತ್ರೆಯ ಸಿಬ್ಬಂದಿ ಮತ್ತು ರೋಗಿಗಳು (users/patients) ಇಬ್ಬರೂ ಸದಸ್ಯರಾಗಿರುತ್ತಾರೆ. ಆಸ್ಪತ್ರೆಯ ಆಡಳಿತ ಜನತಾಂತ್ರಿಕ ರೀತಿಯಲ್ಲಿ (democratic governance) ನಡೆಯುತ್ತದೆ, ಮತ್ತು ಲಾಭವನ್ನು ಮರು ಹೂಡಿಕೆ (reinvested) ಅಥವಾ ಆಸ್ಪತ್ರೆಯ ಸುಧಾರಣೆಗೆ ಬಳಸಲಾಗುತ್ತದೆ. ಈ ಸಹಕಾರಿ ಮಾದರಿ ರೋಗಿಗಳ ಹಿತಾಸಕ್ತಿಗಳು ಮತ್ತು ವೆಚ್ಚ ನಿಯಂತ್ರಣದ ನಡುವೆ ಸಮತೋಲನ ಸಾಧಿಸಲು ಸಹಕಾರಿಯಾಗಿದೆ. ಆದರೆ ವೈದ್ಯಕೀಯ ನಿಯಂತ್ರಣ, ಹಣಕಾಸು ನಿರ್ವಹಣೆ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವುದು ಸವಾಲುಗಳಾಗಿವೆ.

**ಸ್ಟ್ರಿಂಗರ್ ಲಿಂಕ್**

ಇದು ಸದಸ್ಯರ ಸ್ವಾಮ್ಯದಲ್ಲಿರುವ (member-owned) ಡಿಜಿಟಲ್ ವೇದಿಕೆ, ಇದು ಡೇಟಾ ಸ್ವಾಯತ್ತತೆ (data sovereignty), ಅನುಮತಿ ವ್ಯವಸ್ಥೆ (consent mechanisms) ಮತ್ತು ಜನತಾಂತ್ರಿಕ ಆಡಳಿತ (democratic governance) ತತ್ವಗಳನ್ನು ಅನುಸರಿಸುತ್ತದೆ.

ಆರೋಗ್ಯ ಸೇವೆಗಳ ಡಿಜಿಟಲ್ ಡೇಟಾ ನಿರ್ವಹಣೆಯ ಕ್ಷೇತ್ರದಲ್ಲಿ ಈ ಮಾದರಿ ಅತ್ಯಂತ ಆಸಕ್ತಿದಾಯಕವಾಗಿದೆ, ಆದರೆ ಗೌಪ್ಯತೆ, ತಾಂತ್ರಿಕ ಮೂಲಸೌಕರ್ಯ, ನಿಯಮಾವಳಿ ಪಾಲನೆ ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕಾಗಿದೆ.

**ರೆಸ್ಕೂಪ್ (REScoop) ಯುರೋಪ್ / ಯುರೋಪಿಯನ್ ಒಕ್ಕೂಟ:**

ಇದು ಸಮುದಾಯ ಅಥವಾ ನಾಗರಿಕ ಇಂಧನ ಸಹಕಾರಿಗಳ ಒಕ್ಕೂಟ (federation of community/citizen energy cooperatives) ಆಗಿದೆ. ಈ ಸಹಕಾರಿಗಳು ಸ್ಥಳೀಯ ನವೀಕರಿಸಬಹುದಾದ ಇಂಧನ ಉತ್ಪಾದನೆ, ಹಂಚಿಕೆ ಮತ್ತು ಉಳಿತಾಯ ಯೋಜನೆಗಳನ್ನು ಜಾರಿಗೆ ತರುತ್ತವೆ. ಪ್ರತಿ ಸಹಕಾರಿ ನಾಗರಿಕರ ಸ್ವಾಮ್ಯದಲ್ಲಿದ್ದು, ಜನತಾಂತ್ರಿಕವಾಗಿ ನಿರ್ವಹಿಸಲ್ಪಡುತ್ತದೆ. ಸದಸ್ಯರು ನವೀಕರಿಸಬಹುದಾದ ಇಂಧನ ಯೋಜನೆಗಳಲ್ಲಿ ಹೂಡಿಕೆ ಮಾಡಿ, ವೆಚ್ಚ ಮತ್ತು ಲಾಭವನ್ನು ಹಂಚಿಕೊಳ್ಳುತ್ತಾರೆ. ಇದು ಶಿಕ್ಷಣ, ಸಹಕಾರಿಗಳ ನಡುವಿನ ಸಹಕಾರ ಮತ್ತು ಪರಿಸರ ಸ್ನೇಹಿ ಇಂಧನ ಚಳುವಳಿಗೆ ಬೆಂಬಲ ಒದಗಿಸುತ್ತದೆ.

**ಎಲೆಕ್ಟ್ರಿಜಿಟಾಟ್ವೇರ್ಕೆ ಶೋನೌ (Elektrizitätswerke Schönau – EWS), ಜರ್ಮನಿ:**

ಇದು ಸಮುದಾಯದ ಸ್ವಾಮ್ಯದಲ್ಲಿರುವ ಇಂಧನ ಸಹಕಾರಿ ಸಂಸ್ಥೆ, ಇದು ಸ್ಥಳೀಯ ಪ್ರತಿಭಟನೆಗಳು ಮತ್ತು ನಾಗರಿಕ ಚಳುವಳಿಗಳ ನಂತರ ಸ್ಥಳೀಯ ವಿದ್ಯುತ್ ಜಾಲ ಮತ್ತು ಇಂಧನ ಪೂರೈಕೆಯ ಮೇಲಿನ ನಿಯಂತ್ರಣವನ್ನು ಪಡೆದಿದೆ. ಈ ಸಹಕಾರಿ ಜನತಾಂತ್ರಿಕ ನಿಯಂತ್ರಣ, ಸ್ಥಳೀಯ ನಾಗರಿಕ ಸ್ವಾಮ್ಯ, ಶುದ್ಧ ಇಂಧನದ ಪ್ರೋತ್ಸಾಹ ಮತ್ತು ಲಾಭದ ಮರುಹೂಡಿಕೆಯನ್ನು ಸಮುದಾಯದ ಅಭಿವೃದ್ಧಿಗೆ ಬಳಸುವಿಕೆ ಇತ್ಯಾದಿ ತತ್ವಗಳನ್ನು ಅನುಸರಿಸುತ್ತದೆ.

ಇದು "ಎನರ್ಜಿ ಡೆಮಾಕ್ರಸಿ" (Energy Democracy) ಯ ಶಕ್ತಿಯುತ ಮಾದರಿಯಾಗಿದೆ. ಆದರೆ ಇದರ ಯಶಸ್ಸಿಗೆ ಬಲವಾದ ಕಾನೂನು ವ್ಯವಸ್ಥೆ, ಪ್ರಬಲ ಆಡಳಿತ, ಹಣಕಾಸು ಸಂಪನ್ಮೂಲಗಳು ಮತ್ತು ತಾಂತ್ರಿಕ / ನಿಯಂತ್ರಣ ಸಾಮರ್ಥ್ಯ ಅಗತ್ಯವಿದೆ.

**ಫೇರ್ಬಿಎನ್ಬಿ.ಕೂಪ್ (Fairbnb.coop) ಯುರೋಪ್ / ಜಾಗತಿಕ:**

ಇದು ಆತಿಥ್ಯ ಮತ್ತು ಪ್ರವಾಸೋದ್ಯಮ ಕ್ಷೇತ್ರದ ಸಹಕಾರಿ ಆನ್‌ಲೈನ್ ವೇದಿಕೆ (cooperative hospitality marketplace) ಆಗಿದ್ದು, ಟ್ರಾವೆಲ್ ಮಾರ್ಕೆಟ್‌ಸ್ಥಳವನ್ನು ಸಾಮಾಜಿಕ ಹಿತಾಸಕ್ತಿಯ ಉದ್ದೇಶಗಳೊಂದಿಗೆ ಸಂಯೋಜಿಸುತ್ತದೆ. ಈ ವೇದಿಕೆಯಲ್ಲಿ ಆತಿಥೇಯರು ಮತ್ತು ಅತಿಥಿಗಳು ಸಹಕಾರಿ ಮಾದರಿಯ ಮೂಲಕ ಸಂವಹನ ನಡೆಸುತ್ತಾರೆ, ಮತ್ತು ಆದಾಯದ ಒಂದು ಭಾಗ ಸ್ಥಳೀಯ ಸಾಮಾಜಿಕ ಯೋಜನೆಗಳಿಗೆ (local social projects) ಮೀಸಲಾಗುತ್ತದೆ. ಇದು ಮಾರ್ಕೆಟ್‌ಸ್ಥಳ ಮತ್ತು ಸಾಮಾಜಿಕ ಉದ್ದೇಶದ ಸಂಯೋಜಿತ (hybrid) ಮಾದರಿ ಆಗಿದ್ದು, ಸ್ಥಳೀಯ ಅಭಿವೃದ್ಧಿ ಮತ್ತು ಸಮಾನತೆಯ ಉದ್ದೇಶವನ್ನು ಬಲಪಡಿಸುತ್ತದೆ.

**ಗ್ರೀನ್ ಟ್ಯಾಕ್ಸಿ ಕೋಆಪರೇಟಿವ್ (Green Taxi Cooperative) ಅಮೇರಿಕಾ (ಡೆನ್ವರ್):**

ಇದು ಉಬರ್ ಅಥವಾ ಓಲಾ ಮಾದರಿಯ ಖಾಸಗಿ ವೇದಿಕೆಗಳ ವಿರುದ್ಧ ಸ್ಪರ್ಧಿಸಲು ರೂಪಿಸಲಾದ ಟ್ಯಾಕ್ಸಿ ಸಹಕಾರಿ ಸಂಸ್ಥೆಗಳಲ್ಲಿ ಚಾಲಕರೇ ಹೂಡಿಕೆದಾರರು ಮತ್ತು ಹಂಚಿಕೆದಾರರು ಆಗಿರುತ್ತಾರೆ. ಅವರು ಹಂಚಿದ ಸ್ವಾಮ್ಯ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಾರೆ — ಆದಾಯವನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ ಮತ್ತು ಮೊಬೈಲ್ ಆಪ್‌ನಂತಹ ಡಿಸ್ಪ್ಯಾಚ್ ವ್ಯವಸ್ಥೆಯ ಮೂಲಕ ಸೇವೆ ನೀಡುತ್ತಾರೆ. ಈ ಮಾದರಿ ನ್ಯಾಯಸಮ್ಮತ ಆದಾಯ ಹಂಚಿಕೆ, ಸೇವಾ ಪಾರದರ್ಶಕತೆ ಮತ್ತು ಸದಸ್ಯರ ನಿರ್ಧಾರಾಧಿಕಾರವನ್ನು ಒದಗಿಸುತ್ತದೆ. ಭಾರತೀಯ ನಗರ ಪ್ರದೇಶಗಳಲ್ಲಿ ಈ ರೀತಿಯ ವೇದಿಕೆ ಸಹಕಾರಗಳು ಸ್ವಾವಲಂಬನೆ, ಸಾಮಾಜಿಕ ಭದ್ರತೆ ಮತ್ತು ಡಿಜಿಟಲ್ ಉದ್ಯೋಗದ ಉತ್ತಮ ಪರ್ಯಾಯ ಮಾದರಿಯಾಗಬಹುದು.

## ಸದಸ್ಯತ್ವ (Membership)

ಸಹಕಾರ ಸಂಘದ ಹೃದಯವೇ ಅದರ ಸದಸ್ಯರು ಅವರೇ ಸಂಘದ ಶಕ್ತಿ ಮತ್ತು ನಿರ್ಣಯದ ಮೂಲ. ಸದಸ್ಯರನ್ನು ಮೂರು ಮುಖ್ಯ ವರ್ಗಗಳಲ್ಲಿ ವಿಂಗಡಿಸಬಹುದು:

- **ಕಾರ್ಯನಿರ್ವಹಣಾ ಸದಸ್ಯರು (Worker Members):**

ಇವರು ನೈಜವಾಗಿ ಕೆಲಸ ಮಾಡುವವರು ಉದಾಹರಣೆಗೆ ಪ್ರವಾಸ

ಮಾರ್ಗದರ್ಶಕರು, ಹೋಂಸ್ಟೇ ಮಾಲೀಕರು, ಆಂಬುಲೆನ್ಸ್ ಚಾಲಕರು, ಕಾರ್ಪೆಂಟರ್‌ಗಳು, ಆರೋಗ್ಯ ಕಾರ್ಯಕರ್ತರು ಇತ್ಯಾದಿ. ಇವರು ಸಹಕಾರದ ದಿನನಿತ್ಯ ಕಾರ್ಯಾಚರಣೆಯ ಮೂಲ ಶಕ್ತಿ.

• **ಗ್ರಾಹಕ ಸದಸ್ಯರು (Consumer Members):**

ಇವರು ಸಹಕಾರದಿಂದ ನೀಡಲಾಗುವ ಸೇವೆಗಳನ್ನು ನಿರಂತರವಾಗಿ ಬಳಸುವ ಗ್ರಾಹಕರು. ಅವರು ಸೇವೆಯ ಗುಣಮಟ್ಟವನ್ನು ಬೆಂಬಲಿಸುವುದರೊಂದಿಗೆ, ಸಹಕಾರದ ಬೆಳವಣಿಗೆಯಲ್ಲಿ ನಂಬಿಕೆ ಮತ್ತು ಪಾಲ್ಗೊಳ್ಳುವಿಕೆಯನ್ನು ತೋರಿಸುತ್ತಾರೆ.

• **ಸಂಸ್ಥಾತ್ಮಕ ಸದಸ್ಯರು (Institutional Members):**

ಇವು ಗ್ರಾಮ ಪಂಚಾಯತಗಳು, ಆಸ್ಪತ್ರೆಗಳು, ಸ್ವಸಹಾಯ ಗುಂಪುಗಳು, ವಿಶ್ವವಿದ್ಯಾಲಯಗಳು ಮುಂತಾದ ಸಂಸ್ಥೆಗಳು.

ಇವು ಸಹಕಾರಕ್ಕೆ ಬೇಡಿಕೆ, ಸ್ಥಳ, ತಾಂತ್ರಿಕ ಪರಿಣತಿ ಅಥವಾ ಮಾರ್ಗದರ್ಶನ ನೀಡುವ ಮೂಲಕ ಸಹಕರಿಸುತ್ತವೆ.

**ಹಣ ಸಮೂಹೀಕರಣ (Mobilizing Funds):**

ತಮ್ಮ ಚಟುವಟಿಕೆಗಳನ್ನು ಆರಂಭಿಸಲು ಮತ್ತು ವಿಸ್ತರಿಸಲು, ಸಹಕಾರ ಸಂಘಗಳಿಗೆ ಸಮರ್ಪಕ ಹಣಕಾಸು ಸಂಪನ್ಮೂಲಗಳು ಅಗತ್ಯವಿರುತ್ತವೆ. ಸದಸ್ಯರು ತಲಾ 1,000 ರಿಂದ 5,000 ರವರೆಗೆ ಹಂಚಿಕೆ ಬಂಡವಾಳ (Share Capital) ರೂಪದಲ್ಲಿ ಕೊಡುಗೆ ನೀಡಬಹುದು.

ಹೆಚ್ಚುವರಿ ಹಣಕಾಸು ಸಹಾಯವನ್ನು ಕೆಳಗಿನ ಮೂಲಗಳಿಂದ ಪಡೆಯಬಹುದು:

• ಸರ್ಕಾರದ ಯೋಜನೆಗಳು

• ಸಹಕಾರಿ ಬ್ಯಾಂಕ್‌ಗಳು

• ಸಂಸ್ಥೆಗಳ CSR (Corporate Social Responsibility) ನಿಧಿಗಳು

• ಹಸಿರು/ಪುನರುತ್ಪಾದಕ ಶಕ್ತಿ (Renewable Energy) ಅನುದಾನಗಳು ಮತ್ತು ಸಬ್ಸಿಡಿಗಳು

ಇದಲ್ಲದೆ, ಸಹಕಾರ ಸಂಘವು ನಿರ್ವಹಣಾ ವೆಚ್ಚಗಳು ಹಾಗೂ ಅನಿರೀಕ್ಷಿತ ಖರ್ಚುಗಳನ್ನು ನಿಭಾಯಿಸಲು ಸಣ್ಣ ನಿಧಿ ಸಂಗ್ರಹ (Reserve Fund) ಇಟ್ಟುಕೊಳ್ಳುವುದು ಸೂಕ್ತ.

**ಆಡಳಿತ ಮತ್ತು ನಿರ್ವಹಣೆ (Governance and Management):**

ಸಹಕಾರ ಸಂಘದ ಆಡಳಿತವನ್ನು ನಿರ್ದೇಶಕರ ಮಂಡಳಿ (Board of Directors) ನಿರ್ವಹಿಸುತ್ತದೆ. ಸಮಾನತೆಯನ್ನೂ, ಸಮಾವೇಶಿತ ನಿರ್ಧಾರ ಪ್ರಕ್ರಿಯೆಯನ್ನೂ ಖಾತ್ರಿಪಡಿಸಲು, ಮಂಡಳಿಯಲ್ಲಿ ಮಹಿಳೆಯರು ಮತ್ತು ಯುವಕರಿಗೆ ಪ್ರತಿನಿಧಿತ್ವ ನೀಡಲಾಗುತ್ತದೆ.

ನಿರ್ದೇಶಕರ ಮಂಡಳಿ ಮುಖ್ಯ ನಿರ್ಧಾರಗಳು, ಹಣಕಾಸು ನಿರ್ವಹಣೆ ಹಾಗೂ ನೀತಿಗಳ ಅನುಷ್ಠಾನವನ್ನು ಸಂಪೂರ್ಣ ಪಾರದರ್ಶಕತೆಯೊಂದಿಗೆ ನೋಡಿಕೊಳ್ಳುತ್ತದೆ. ನಿಯಮಿತ ಲೆಕ್ಕಪರಿಶೋಧನೆ (Audits) ನಡೆಸುವುದು ಹೊಣೆಗಾರಿಕೆಯನ್ನು ಕಾಯ್ದುಕೊಳ್ಳಲು ಅತ್ಯಂತ ಅಗತ್ಯ.

ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ನಿರ್ವಾಹಕ ಅಧಿಕಾರಿ (Manager), ಲೆಕ್ಕಪಾಲಕ (Accountant) ಮತ್ತು ತಾಂತ್ರಿಕ ಸಹಾಯಕ (Technical Assistant) ಒಳಗೊಂಡ ಸಣ್ಣ ಕಾರ್ಯನಿರ್ವಹಣಾ ತಂಡ (Operational Team) ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.

**ಬ್ರ್ಯಾಂಡಿಂಗ್ ಮತ್ತು ತಂತ್ರಜ್ಞಾನವು ಏಕೆ ಮುಖ್ಯ (Why Branding and Technology Matter):**

ಒಳ್ಳೆಯ ಬ್ರಾಂಡ್ ಹೆಸರು ಮತ್ತು ಲೋಗೋ ಗ್ರಾಹಕರಲ್ಲಿ ನಂಬಿಕೆ ಮತ್ತು ವಿಶ್ವಾಸ ನಿರ್ಮಿಸುತ್ತವೆ. ಸಹಕಾರಿ ಸಂಸ್ಥೆಯ ದೃಢೀಕೃತ ಚಿಹ್ನೆ (Verified Badge) ಕಂಡಾಗ ಗ್ರಾಹಕರು ಅದರ ಸೇವೆಯ ಮೇಲೆ ವಿಶ್ವಾಸ ಹೊಂದುತ್ತಾರೆ.

ಸಾಮಾನ್ಯ ಯೂನಿಫಾರ್ಮ್‌ಗಳು, ಗುರುತಿನ ಚೀಟಿಗಳು (ID Cards) ಹಾಗೂ ಡಿಜಿಟಲ್ ಕೆಲಸದ ದಾಖಲೆಗಳು ಸಹ ಸಹಕಾರಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತವೆ.

ತಂತ್ರಜ್ಞಾನ (Technology) ಸಹಕಾರ ಸಂಘದ ಬೆಳವಣಿಗೆಗೆ ಅತ್ಯಂತ ಮುಖ್ಯವಾದ ಅಂಶವಾಗಿದೆ. ಸಹಕಾರಿ ಸಂಸ್ಥೆ ತನ್ನದೇ ವೆಬ್‌ಸೈಟ್ ಅಥವಾ ಮೊಬೈಲ್ ಆಪ್ ನಿರ್ಮಿಸಿ ಬುಕಿಂಗ್‌ಗಳು, ಪಾವತಿಗಳು ಮತ್ತು ಗ್ರಾಹಕರ ಪ್ರತಿಕ್ರಿಯೆ (Feedback) ನಿರ್ವಹಿಸಬಹುದು. ಇದರಿಂದ ಸದಸ್ಯರಿಗೆ ಹೆಚ್ಚಿನ ನಿಯಂತ್ರಣ ಸಿಗುತ್ತದೆ ಮತ್ತು ಸಂಸ್ಥೆಯ ಬೆಳವಣಿಗೆ ವೇಗವಾಗುತ್ತದೆ. ಪಾವತಿಗಳು ಶೀಘ್ರ, ಪಾರದರ್ಶಕ ಮತ್ತು ಸುರಕ್ಷಿತವಾಗಿರಬೇಕು. ಸಂಗ್ರಹಿಸಲಾದ ಮಾಹಿತಿ (Data) ಕೇವಲ ಸೇವಾ ಗುಣಮಟ್ಟವನ್ನು ಸುಧಾರಿಸಲು ಮಾತ್ರ ಬಳಸಬೇಕು.

ಸಹಕಾರಿ ಸಂಸ್ಥೆ ಪ್ರತಿ ಸೇವೆ ಅಥವಾ ಕೆಲಸದಿಂದ 8–15% ಕಮಿಷನ್ ವಸೂಲಿಸುವ ಮೂಲಕ ಆದಾಯ ಗಳಿಸುತ್ತದೆ. ಈ ಆದಾಯದ ಹೆಚ್ಚಿನ ಭಾಗವನ್ನು ಕೆಲಸ ಮಾಡಿದ ಸದಸ್ಯರಿಗೆ ನೀಡಲಾಗುತ್ತದೆ, ಉಳಿದ ಭಾಗವನ್ನು ತರಬೇತಿ, ಕಾರ್ಯಾಚರಣೆ ಮತ್ತು ಭವಿಷ್ಯದ ಅಭಿವೃದ್ಧಿಗೆ ಬಳಸಲಾಗುತ್ತದೆ.

**ಉದ್ಯಮಿಗಳಾಗಿ ಸಹಕಾರ ಸಂಘಗಳಲ್ಲಿ ಯುವಕರ ಸೇರ್ಪಡೆ (Youth Joining Cooperatives as Entrepreneurs):**

**ಉದ್ಯಮಿಗಳಾಗಿ ಸಹಕಾರ ಸಂಘಗಳಲ್ಲಿ ಯುವಕರ ಸೇರ್ಪಡೆ**

| ವರ್ಷ | ಸಂಖ್ಯೆ | ಯುವ ಬೆಳವಣಿಗೆ % | ಷರಾ |
|---|---|---|---|
| 2021 | 85000 | 8.50 | |
| 2022 | 94000 | 10.59 | |
| 2023 | 108000 | 14.89 | |
| 2024 | 124000 | 14.81 | |
| 2025 | 143000 | 15.32 | |

**ಭಾರತದ ಹೊಸ ಸಹಕಾರಿ ಮಾದರಿಗಳು (New Cooperative Models for India)**

**1. ಪ್ರವಾಸೋದ್ಯಮ ಸಹಕಾರಿಗಳು (Tourism Cooperatives):**

ಗ್ರಾಮಗಳು ಹೋಮ್ಸ್ಟೇಗಳು, ಮಾರ್ಗದರ್ಶಿತ ಪ್ರವಾಸಗಳು, ಕೈಗಾರಿಕಾ ಕಲಾ ಕಾರ್ಯಾಗಾರಗಳು, ಕೃಷಿ ತೋಟಗಳ ಭೇಟಿಗಳು ಮತ್ತು ಸ್ಥಳೀಯ

ಆಹಾರವನ್ನು ಒಳಗೊಂಡ ಪರಿಸರ ಸ್ನೇಹಿ ಪ್ರವಾಸೋದ್ಯಮ ಸಹಕಾರಿಗಳನ್ನು ಪ್ರಾರಂಭಿಸಬಹುದು. ಈ ಚಟುವಟಿಕೆಗಳು ಆದಾಯವನ್ನು ನೇರವಾಗಿ ಸಮುದಾಯಕ್ಕೆ ತರುತ್ತವೆ. ನಗರಗಳಲ್ಲಿ, ವೈದ್ಯಕೀಯ ಪ್ರವಾಸೋದ್ಯಮ ಸಹಕಾರಿಗಳು ರೋಗಿಗಳಿಗೆ ಆಸ್ಪತ್ರೆ ಬುಕ್ಕಿಂಗ್‌ಗಳು, ಅನುವಾದ ಸೇವೆಗಳು, ಔಷಧ ವಿತರಣೆ ಮತ್ತು ಶಸ್ತ್ರಚಿಕಿತ್ಸೆಯ ನಂತರದ ಆರೈಕೆಗಾಗಿ ಸಹಾಯ ಮಾಡಬಹುದು.

### 2. ಆರೋಗ್ಯ ಸಹಕಾರಿಗಳು

ಸಮುದಾಯಗಳು ತಮ್ಮದೇ ಆಂಬ್ಯುಲೆನ್ಸ್ ಸೇವೆಗಳನ್ನು ನಡೆಸಿ, ರೋಗಿಗಳನ್ನು ಶೀಘ್ರ ಮತ್ತು ಸುರಕ್ಷಿತವಾಗಿ ತಲುಪಿಸಬಹುದು. ಅವರು ಮನೆಮಟ್ಟದ ಆರೋಗ್ಯ ತಪಾಸಣೆ, ಪ್ರಯೋಗಾಲಯ ಪರೀಕ್ಷೆಗಳು ಮತ್ತು ಔಷಧ ವಿತರಣೆ ಸೇವೆಗಳನ್ನು ಒದಗಿಸಬಹುದು. ವೈದ್ಯರೊಂದಿಗೆ ದೂರವಾಣಿ ಅಥವಾ ಆನ್‌ಲೈನ್ ಸಲಹೆ ಮತ್ತು ಮನೆ ನರ್ಸಿಂಗ್ ಸೇವೆಗಳು ರೋಗಿಗಳಿಗೆ ಮನೆಯಲ್ಲಿಯೇ ಚೇತರಿಸಿಕೊಳ್ಳಲು ಸಹಾಯ ಮಾಡಬಹುದು.

| ವರ್ಷ | ಆರೋಗ್ಯ ಸಹಕಾರಿಗಳು ವಿಶ್ವ ಅಂದಾಜು | ಬೆಳವಣಿಗೆ% |
|---|---|---|
| 2015 | 12000 | |
| 2016 | 12500 | 4.17 |
| 2017 | 13150 | 5.2 |
| 2018 | 13800 | 4.94 |
| 2019 | 14450 | 4.71 |
| 2020 | 15100 | 4.5 |
| 2021 | 15900 | 5.3 |
| 2022 | 16600 | 4.4 |
| 2023 | 17400 | 4.82 |
| 2024 | 18300 | 5.17 |
| 2025 | 19300 | 5.46 |

### 3. ಹಸಿರು ಶಕ್ತಿ ಸಹಕಾರಿಗಳು (Green Energy Cooperatives)

ಗ್ರಾಮಗಳು ಅಥವಾ ಅಪಾರ್ಟ್‌ಮೆಂಟ್‌ಗಳು ಒಟ್ಟಾಗಿ ಹಣ ಸಂಗ್ರಹಿಸಿ ಸೌರ ಫಲಕಗಳನ್ನು ಅಳವಡಿಸಿ ಉತ್ಪಾದಿತ ವಿದ್ಯುತ್‌ನ್ನು ಹಂಚಿಕೊಳ್ಳಬಹುದು. ರೈತರು ನೀರಾವರಿಗಾಗಿ ಸೌರ ಪಂಪ್‌ಗಳನ್ನು ಬಳಸಬಹುದು. ಬಯೋ–ಗ್ಯಾಸ್ ಘಟಕಗಳು ತ್ಯಾಜ್ಯವನ್ನು ಶುದ್ಧ ಇಂಧನವಾಗಿ ಪರಿವರ್ತಿಸಬಹುದು. ನಗರಗಳು ಮತ್ತು ಗ್ರಾಮಗಳಲ್ಲಿ ವಿದ್ಯುತ್ ವಾಹನಗಳ (EV) ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಪರಿಸರ ಸ್ನೇಹಿ ಶಕ್ತಿ ವ್ಯವಸ್ಥೆಯನ್ನು ನಿರ್ಮಿಸಬಹುದು.

### 4. ಸೇವಾ ಸಹಕಾರಿಗಳು (Service Cooperatives)

ಮಾಲಿಗಳು, ಎಲೆಕ್ಟ್ರಿಷಿಯನ್‌ಗಳು, ಚಾಲಕರು, ತಾಯಂದಿರ ಸೇವಾ ಸಹಾಯಕರು ಮೊದಲಾದವರು ತಮ್ಮದೇ ಮಾಲೀಕತ್ವದ ಡಿಜಿಟಲ್ ವೇದಿಕೆಯ ಮೇಲೆ ಸೇರಬಹುದು. ಗ್ರಾಹಕರು ಸುಲಭವಾಗಿ ಸೇವೆಗಳನ್ನು ಬುಕ್ ಮಾಡಬಹುದು, ಕಾರ್ಮಿಕರಿಗೆ ನ್ಯಾಯಸಮ್ಮತ ವೇತನ ದೊರೆಯುತ್ತದೆ ಮತ್ತು ಸಹಕಾರಿ ಸಂಸ್ಥೆ ಗುಣಮಟ್ಟ ಮತ್ತು ಭದ್ರತೆಯನ್ನು ಖಚಿತಪಡಿಸುತ್ತದೆ.

### 5. ಕೂಪ್ ಕಿಚನ್ (Co-op Kitchen)

ರಾಷ್ಟ್ರೀಯ ಸಹಕಾರಿ ಸಂಘ ಸಂಸ್ಥೆ (NCUI)ಯ "ಕೂಪ್ ಕಿಚನ್" ಮಾದರಿಯ ಸಹಕಾರಿ ಸಂಘಗಳು ನೋಯ್ಡಾ, ಗುರುಗ್ರಾಮ್, ಬೆಂಗಳೂರು ಮತ್ತು ಅಹಮದಾಬಾದ್ ಮುಂತಾದ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಮಾದರಿಯಾಗಬಹುದು. ಇಂತಹ ಮಹಿಳಾ ನೇತೃತ್ವದ ಸಹಕಾರಿಗಳು ಪ್ರಾರಂಭದಲ್ಲಿ ಸಮುದಾಯ ಅಡುಗೆಮನೆಗಳಾಗಿ ಆರಂಭಿಸಿ, ಬಳಿಕ ಮದುವೆ, ಕಂಪನಿ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ಸಮಾರಂಭಗಳಿಗೆ ಆಹಾರ ಪೂರೈಕೆ ಸೇವೆಗಳಲ್ಲಿ ವಿಸ್ತರಿಸಬಹುದು. ಈ ಮಾದರಿ ಮಹಿಳೆಯರಿಗೆ ಸ್ಥಿರ ಆದಾಯದ ಜೊತೆಗೆ ಉದ್ಯಮಶೀಲತೆಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಮತ್ತು ಸಹಕಾರಿ ಚಟುವಟಿಕೆಯ ಮೂಲಕ ಶಕ್ತಿ ನೀಡುತ್ತದೆ.

### ಸಹಕಾರಿಗಳು ಆರ್ಥಿಕತೆಗೆ ಹೇಗೆ ಸಹಕಾರಿಸುತ್ತವೆ (How Cooperatives Help the Economy)

ಈ ಹೊಸ ಸಹಕಾರಿ ಮಾದರಿಗಳು ಸ್ಥಳೀಯ ಆರ್ಥಿಕತೆಯನ್ನು ಸಂಪೂರ್ಣವಾಗಿ ರೂಪಾಂತರಿಸಬಲ್ಲವು. ಇವು ಸ್ಥಿರ ಉದ್ಯೋಗಗಳನ್ನು ಸೃಷ್ಟಿಸುತ್ತವೆ ಮತ್ತು ಕಾರ್ಮಿಕರಿಗೆ ವಿಮೆ, ಸಾಮಾಜಿಕ ಭದ್ರತೆ ಮೊದಲಾದ ಸೌಲಭ್ಯಗಳನ್ನು ಒದಗಿಸುತ್ತವೆ. ಖಾಸಗಿ ಕಂಪನಿಗಳಿಗೆ ಹಣ ಹರಿಯುವುದನ್ನು ತಪ್ಪಿಸಿ, ಅದನ್ನು ಸಮುದಾಯದೊಳಗೇ ಉಳಿಸುತ್ತವೆ. ಮಹಿಳೆಯರು ಮತ್ತು ಯುವಕರು ನಾಯಕತ್ವದ ಪಾತ್ರವಹಿಸಬಹುದು, ಇದರಿಂದ ಸಮುದಾಯಗಳು ಸ್ವಾವಲಂಬಿಗಳಾಗುತ್ತವೆ.

ಸಹಕಾರಿಗಳು ಆರೋಗ್ಯ ಸೇವೆ, ಶಕ್ತಿ, ಮಕ್ಕಳ ಆರೈಕೆ ಮುಂತಾದ ಅಗತ್ಯ ಸೇವೆಗಳನ್ನು ಕಡಿಮೆ ವೆಚ್ಚದಲ್ಲಿ ಮತ್ತು ವಿಶ್ವಾಸಾರ್ಹವಾಗಿ ಲಭ್ಯವಾಗುವಂತೆ ಮಾಡುತ್ತವೆ. ಇವು ಮಾಲಿನ್ಯವನ್ನು ಕಡಿಮೆ ಮಾಡಿ, ಶುದ್ಧ ಶಕ್ತಿಯನ್ನು ಉತ್ತೇಜಿಸಿ ಮತ್ತು ಪರಿಸರ ಸ್ನೇಹಿ ಪ್ರವಾಸೋದ್ಯಮವನ್ನು ಬೆಂಬಲಿಸುವ ಮೂಲಕ ಶಾಶ್ವತ ಅಭಿವೃದ್ಧಿಗೆ ಸಹಕಾರಿಸುತ್ತವೆ.

ಭಾರತದ ಸಹಕಾರ ಚಳವಳಿ ಪ್ರವಾಸೋದ್ಯಮ, ಆರೋಗ್ಯ, ಹಸಿರು ಶಕ್ತಿ ಮತ್ತು ಸೇವಾ ವೇದಿಕೆಗಳಂತಹ ಹೊಸ ಕ್ಷೇತ್ರಗಳಲ್ಲಿ ಹೆಜ್ಜೆ ಇಟ್ಟು ಶಕ್ತಿಯುತ ಹೊಸ ದಾರಿಯನ್ನು ತೆರೆದಿಡಬಹುದು. ಇದರ ಕೇಂದ್ರಬಿಂದು ಸರಳತೆ, ಪಾರದರ್ಶಕತೆ ಮತ್ತು ಸದಸ್ಯರೇ ಮುನ್ನಡೆಸುವ ನಿರ್ಧಾರ ಪ್ರಕ್ರಿಯೆಯಾಗಿರಬೇಕು.

ಡಿಜಿಟಲ್ ತಂತ್ರಜ್ಞಾನಗಳ ಅಳವಡಿಕೆ, ಸಹಾಯಕ ನೀತಿಗಳು, ನಿರಂತರ ಸಾಮರ್ಥ್ಯ ನಿರ್ಮಾಣ ಮತ್ತು ಸ್ಥಳೀಯ ಸರ್ಕಾರಗಳು ಹಾಗೂ ಖಾಸಗಿ ವಲಯದೊಂದಿಗೆ ಬಲವಾದ ಸಹಭಾಗಿತ್ವಗಳು ಸಹಕಾರಿಗಳ ಬೆಳವಣಿಗೆಯನ್ನು ವೇಗಗೊಳಿಸಲಿವೆ. ಸೂಕ್ತ ಪರಿಸರ ವ್ಯವಸ್ಥೆ ನಿರ್ಮಾಣವಾದರೆ, ಈ ಸಹಕಾರಿಗಳು ಲಕ್ಷಾಂತರ ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಉತ್ತಮ ಸೇವೆಗಳನ್ನು ಒದಗಿಸಿ, ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಬಲವರ್ಧನೆಗೆ ಕಾರಣವಾಗಬಹುದು. ಅಂತಿಮವಾಗಿ, ಇವು ಸಮಗ್ರ (inclusive) ಅಭಿವೃದ್ಧಿಯ ನಿಜವಾದ ಆತ್ಮವನ್ನು ಪ್ರತಿಬಿಂಬಿಸುವಂತಾಗುತ್ತವೆ.

**20ನೇ ನವೆಂಬರ್ 2025**

# ಜಾಗತಿಕ ಸ್ಪರ್ಧಾತ್ಮಕತೆಗಾಗಿ ಸಹಕಾರಿ ವ್ಯವಹಾರದ ಮಾದರಿಗಳಲ್ಲಿ ನವನಾವೀನ್ಯತೆ

# Innovation in Cooperative Business Models for Global Competitiveness

**ಅನುವಾದ : ಶ್ರೀಮತಿ ಸವಿತ ಎನ್. ಇ. ಕಿರಿಯ ಅಧಿಕಾರಿ ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು**

## 1. ಪರಿಚಯ

ಇಂದಿನ ವೇಗವಾಗಿ ಪರಿವರ್ತನಗೊಳ್ಳುತ್ತಿರುವ ಜಾಗತಿಕ ಆರ್ಥಿಕತೆಯಲ್ಲಿ, ನವನಾವೀನ್ಯತೆ ಸ್ಪರ್ಧಾತ್ಮಕತೆಯ ಆಧಾರಶಿಲೆಯಾಗಿದೆ. ಜಗತ್ತಿನಾದ್ಯಂತದ ಸಂಸ್ಥೆಗಳು ಹೊಸ ತಂತ್ರಜ್ಞಾನಗಳು ಮತ್ತು ವ್ಯವಹಾರ ತಂತ್ರಗಳನ್ನು ಅಳವಡಿಸಿಕೊಂಡಿರುವಾಗ, ಸಮುದಾಯಕೇಂದ್ರಿತ ಮತ್ತು ಸದಸ್ಯನಿರ್ದೇಶಿತ ದೃಷ್ಟಿಕೋನಕ್ಕಾಗಿ ಪ್ರಸಿದ್ಧವಾಗಿರುವ ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯಪದ್ಧತಿಗಳನ್ನು ಪುನಃಕಲ್ಪನೆ ಮಾಡುತ್ತಿವೆ. 21ನೇ ಶತಮಾನದ ಸಹಕಾರಿ ಸಂಸ್ಥೆ ಈಗ ಸ್ಥಳೀಯ ಮಾರುಕಟ್ಟೆಗೆ ಮಾತ್ರ ಸೀಮಿತವಾಗಿಲ್ಲ; ಅದು ಈಗ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಮತ್ತು ಸಹಕರಿಸಲು ನಿರೀಕ್ಷಿಸಲ್ಪಡುತ್ತಿದೆ.

ಸಹಕಾರಿ ಸಂಸ್ಥೆಗಳು ಆರ್ಥಿಕ ಸ್ಥಿರತೆಯ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಒಟ್ಟುಗೂಡಿಸುವ ವಿಶಿಷ್ಟ ವ್ಯವಹಾರ ಘಟಕಗಳೆಂದು ಬಹುಕಾಲದಿಂದ ಗುರುತಿಸಲ್ಪಟ್ಟಿವೆ. ಆದರೆ, ಜಾಗತಿಕ ಸ್ಪರ್ಧಾತ್ಮಕತೆ ಕೇವಲ ಸಾಮಾಜಿಕ ಬದ್ಧತೆಯಷ್ಟೇ ಅಲ್ಲ ಅದು ಹೊಂದಿಕೊಳ್ಳುವ ಸಾಮರ್ಥ್ಯ, ತಂತ್ರಜ್ಞಾನ ಸ್ವೀಕಾರ, ಮಾರುಕಟ್ಟೆ ಪ್ರತಿಕ್ರಿಯಾಶೀಲತೆ ಮತ್ತು ನವನಾವೀನ್ಯತೆಯನ್ನು ಸಹ ಅಗತ್ಯವಿರಿಸುತ್ತದೆ. ಇಂದಿನ ಅವಶ್ಯಕತೆ ಎಂದರೆ ಸಹಕಾರಿ ಮೌಲ್ಯಗಳನ್ನು ಕಾರ್ಯಕ್ಷಮತೆ, ಉತ್ಪಾದಕತೆ ಹಾಗೂ ಸ್ಥಿರತೆಯೊಂದಿಗೆ ಸಂಯೋಜಿಸುವ ನವನಾವೀನ್ಯ ಸಹಕಾರಿ ವ್ಯವಹಾರದ ಮಾದರಿಗಳನ್ನು ನಿರ್ಮಿಸುವುದು.

**ಈ ಲೇಖನವು ಸಹಕಾರಿ ಸಂಸ್ಥೆಗಳು ವ್ಯವಹಾರ ಮಾದರಿಗಳು, ಆಡಳಿತ, ತಂತ್ರಜ್ಞಾನ ಮತ್ತು ಸ್ಥಿರತೆಯಲ್ಲಿ ನವನಾವೀನ್ಯತೆಯ ಮೂಲಕ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೇಗೆ ಸಾಧಿಸಬಹುದು ಎಂಬುದನ್ನು ವಿಶ್ಲೇಷಿಸುತ್ತದೆ.**

## 2. ಬದಲಾಗುತ್ತಿರುವ ಜಾಗತಿಕ ವ್ಯವಹಾರ ಪರಿಸರ

ಜಾಗತಿಕ ಆರ್ಥಿಕತೆಯು ಉದಾರೀಕರಣ, ಡಿಜಿಟಲೀಕರಣ ಮತ್ತು ತೀವ್ರ ಸ್ಪರ್ಧೆಗಳಿಂದ ರೂಪುಗೊಂಡಿದೆ. ಕೃತಕ ಬುದ್ಧಿಮತ್ತೆ, ಸ್ವಯಂಚಾಲನೆ, ಬಿಗ್ ಡೇಟಾ ಮತ್ತು ಇ-ಕಾಮರ್ಸ್ ಮುಂತಾದ ತಾಂತ್ರಿಕ ಕ್ರಾಂತಿಗಳು ವ್ಯವಹಾರಗಳ ಕಾರ್ಯಪದ್ಧತಿಯನ್ನು ಸಂಪೂರ್ಣವಾಗಿ ಬದಲಾಯಿಸುತ್ತಿವೆ. ಇಂದಿನ ಗ್ರಾಹಕರು ಕೇವಲ ಉತ್ಪನ್ನಗಳನ್ನು ಮಾತ್ರವಲ್ಲ, ನೈತಿಕತೆ, ಪಾರದರ್ಶಕತೆ ಮತ್ತು ಪರಿಸರದತ್ತ ಜವಾಬ್ದಾರಿಯುತ ಬ್ರಾಂಡ್‌ಗಳನ್ನು ಅಪೇಕ್ಷಿಸುತ್ತಿದ್ದಾರೆ.

ಇವುಗಳಂತಹ ಬದಲಾವಣೆಗಳು ಸಹಕಾರಿ ಸಂಸ್ಥೆಗಳಿಗಾಗಿ **ಸವಾಲುಗಳನ್ನೂ ಅವಕಾಶಗಳನ್ನೂ** ಉಂಟುಮಾಡಿವೆ.

- **ಸವಾಲುಗಳು:** ಸೀಮಿತ ಬಂಡವಾಳ ಪ್ರಾಪ್ತಿ, ತಂತ್ರಜ್ಞಾನ ಅಂತರಗಳು, ಮತ್ತು ಮಾರುಕಟ್ಟೆ ಪ್ರತ್ಯೇಕತೆ.
- **ಅವಕಾಶಗಳು:** ನೈತಿಕ ಬಳಕೆಯ ಮೇಲಿನ ಹೆಚ್ಚುತ್ತಿರುವ ಒಲವು, ಸಮುದಾಯ ಸಬಲೀಕರಣ, ಮತ್ತು ಸ್ಥಿರ ಉತ್ಪಾದನೆ.

ಈ ಕ್ರಿಯಾತ್ಮಕ ಸಮಯದಲ್ಲಿ, ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ಸದಸ್ಯ ಸೇವಾ ಪಾತ್ರಗಳಾಚೆಗೆ ಹೋಗಿ, **ಉದ್ಯಮಶೀಲ, ನವನಾವೀನ್ಯಪರ ಮತ್ತು ಜಾಗತಿಕವಾಗಿ** ಸಂಪರ್ಕಿತ ಸಂಸ್ಥೆಗಳಾಗಬೇಕು.

## 3. ಸಹಕಾರಿ ಸಂದರ್ಭದಲ್ಲಿನ ನವನಾವೀನ್ಯತೆಯ ಅರಿವು

ಸಹಕಾರಿಗಳಲ್ಲಿನ ನವನಾವೀನ್ಯತೆ ಕೇವಲ ತಾಂತ್ರಿಕ ನವೀಕರಣಕ್ಕೆ ಸೀಮಿತವಾಗಿಲ್ಲ; ಅದು ಆಡಳಿತದ ಹೊಸ ವಿಧಾನಗಳು, ಮೌಲ್ಯ ನಿರ್ಮಾಣ ಹಾಗೂ ಸದಸ್ಯರ ತೊಡಗಿಸಿಕೊಳ್ಳುವಿಕೆಯ ಹೊಸ ಮಾರ್ಗಗಳನ್ನು ಒಳಗೊಂಡಿದೆ.

**ಸಹಕಾರಿಗಳಲ್ಲಿನ ನವನಾವೀನ್ಯತೆಯ ಕೆಲವು ಪ್ರಮುಖ ಆಯಾಮಗಳು ಹೀಗಿವೆ:**

1. **ಉತ್ಪನ್ನ ಮತ್ತು ಪ್ರಕ್ರಿಯಾ ನವನಾವೀನ್ಯತೆ:** ಹೊಸ ಉತ್ಪನ್ನಗಳು, ಸೇವೆಗಳು ಮತ್ತು ಉತ್ಪಾದನಾ ತಂತ್ರಗಳನ್ನು ಪರಿಚಯಿಸುವುದು (ಉದಾ: ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು, ಡಿಜಿಟಲ್ ಪಾವತಿ ವ್ಯವಸ್ಥೆಗಳು).
2. **ಸಂಸ್ಥಾತ್ಮಕ ನವನಾವೀನ್ಯತೆ:** ಪಾಲ್ಗೊಳ್ಳುವ ನಿರ್ಧಾರ ಪ್ರಕ್ರಿಯೆ, ಪಾರದರ್ಶಕತೆ ಮತ್ತು ಚುರುಕುಗೊಳಿಸುವಿಕೆಯುಳ್ಳ ಆಂತರಿಕ ರಚನೆಗಳನ್ನು ಪುನರ್ ವಿನ್ಯಾಸಗೊಳಿಸುವುದು.
3. **ಮಾರುಕಟ್ಟೆ ನವನಾವೀನ್ಯತೆ:** ಸಹಕಾರಿ ಉತ್ಪನ್ನಗಳನ್ನು ರಫ್ತು ಮಾರುಕಟ್ಟೆಗಳಿಗೆ ಬ್ರ್ಯಾಂಡ್ ಮಾಡುವುದು, ಇ-ಕಾಮರ್ಸ್ ಅಳವಡಿಸಿಕೊಳ್ಳುವುದು ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕ ವಿಸ್ತರಿಸುವುದು.
4. **ಸಾಮಾಜಿಕ ನವನಾವೀನ್ಯತೆ:** ಸಹಕಾರಿ ಚಟುವಟಿಕೆಗಳ ಮೂಲಕ ಒಕ್ಕೂಟ, ಲಿಂಗ ಸಮಾನತೆ ಮತ್ತು ಸಮುದಾಯ ಅಭಿವೃದ್ಧಿಯನ್ನು ಉತ್ತೇಜಿಸುವುದು.

**5. ಆರ್ಥಿಕ ನವನಾವೀನ್ಯತೆ:** ಸಹಕಾರಿ ಬ್ಯಾಂಕುಗಳು, ಕ್ರೌಡ್‌ಫಂಡಿಂಗ್(ಆನ್‌ಲೈನ್ ಮೂಲಕ ಸ್ವಲ್ಪ ಸ್ವಲ್ಪ ಹಣ ಸಂಗ್ರಹಣ-ನಿಧಿ) ಮತ್ತು ಮಿಶ್ರ ಹಣಕಾಸು ಮಾದರಿಗಳು ಮುಂತಾದ ಹೊಸ ಹಣಕಾಸು ಆಯ್ಕೆಗಳ ಅನ್ವೇಷಣೆ.

ಈ ಬಹುಮಟ್ಟದ ನವನಾವೀನ್ಯತೆಗಳ ಮೂಲಕ ಸಹಕಾರಿಗಳು ತಮ್ಮ ಸಾಮಾಜಿಕ ಮೌಲ್ಯಗಳನ್ನು ಕಳೆದುಕೊಳ್ಳದೆ ತಮ್ಮ ಸ್ಪರ್ಧಾತ್ಮಕತೆಯನ್ನು ಬಲಪಡಿಸಬಹುದು.

### 4. ನವನಾವೀನ್ಯ ಸಹಕಾರಿ ವ್ಯವಹಾರ ಮಾದರಿಗಳು

4.1 ಪ್ಲಾಟ್ಫಾರ್ಮ್(ಆಧಾರ ವೇದಿಕೆ) ಸಹಕಾರಿಗಳು (Platform Cooperatives)

ಡಿಜಿಟಲ್ ಆರ್ಥಿಕತೆಯ ಏರಿಕೆಯಿಂದಾಗಿ, ಪ್ಲಾಟ್ಫಾರ್ಮ್ ಸಹಕಾರಿಗಳು ಎಂಬ ಹೊಸ ವ್ಯವಹಾರ ಮಾದರಿ ಉದ್ಭವಿಸಿದೆ, ಇಲ್ಲಿ ಸದಸ್ಯರು ಸಮೂಹವಾಗಿ ಡಿಜಿಟಲ್ ಪ್ಲಾಟ್ಫಾರ್ಮ್‌ಗಳ ಮಾಲೀಕತ್ವ ಮತ್ತು ಆಡಳಿತ ನಡೆಸುತ್ತಾರೆ.

**ಉದಾಹರಣೆಗಳು:** ಸಹಕಾರಿ ಪ್ರಯಾಣ ಹಂಚಿಕೆ ಸೇವೆಗಳು, ಆನ್‌ಲೈನ್ ಮಾರುಕಟ್ಟೆಗಳು ಮತ್ತು ಸ್ವತಂತ್ರ ಉದ್ಯೋಗ ಸೇವೆ.

ಈ ಮಾದರಿಗಳು ನ್ಯಾಯಸಮ್ಮತ ಆದಾಯ ಹಂಚಿಕೆ, ಡೇಟಾ ಪಾರದರ್ಶಕತೆ ಮತ್ತು ಪ್ರಜಾಪ್ರಭುತ್ವಾಧಾರಿತ ನಿರ್ಧಾರ ಮಾಡುವಿಕೆಯನ್ನು ಖಚಿತಪಡಿಸುತ್ತವೆ ಇವು ಕಂಪನಿಗಳ ಡಿಜಿಟಲ್ ಬಲಶಾಲಿಗಳಿಗೆ ಮ್ಯಾನ್ ಪವರ್ ಪರ್ಯಾಯವನ್ನು ನೀಡುತ್ತವೆ.

### 4.2 ಹಸಿರು ಮತ್ತು ನವೀಕರಿಸಬಹುದಾದ ಇಂಧನ ಸಹಕಾರಿಗಳು (Green and Renewable Energy Cooperatives)

ಸ್ಥಿರತೆಯ ಮೇಲೆ ಆಧಾರಿತ ನವನಾವೀನ್ಯತೆ ಸೌರ, ಗಾಳಿ ಮತ್ತು ಜೈವ(ಇಂಧನವಾಯು) ಇಂಧನದಂತಹ ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿರುವ ಇಂಧನ ಸಹಕಾರಿಗಳನ್ನು ಹುಟ್ಟಿಸಿದೆ.

ಉದಾಹರಣೆಗೆ ಯುರೋಪಿನಲ್ಲಿ, ನಾಗರಿಕರ ಸ್ವಾಮ್ಯದ ಇಂಧನ ಸಹಕಾರಿಗಳು ರಾಷ್ಟ್ರೀಯ ವಿದ್ಯುತ್ ಜಾಲಗಳಿಗೆ ಮಹತ್ವದ ಕೊಡುಗೆ ನೀಡುತ್ತಿವೆ.

ಈ ಮಾದರಿಗಳು ಸಮುದಾಯಗಳನ್ನು ಸಬಲೀಕರಿಸುತ್ತವೆ, ಕಾರ್ಬನ್ ಉತ್ಪಾದನೆಯನ್ನು ಕಡಿಮೆಗೊಳಿಸುತ್ತವೆ, ಮತ್ತು ಸಂಯುಕ್ತ ರಾಷ್ಟ್ರಗಳ ಸ್ಥಿರಾಭಿವೃದ್ಧಿ ಗುರಿಗಳ (SDGs)ರೊಂದಿಗೆ ಹೊಂದಿಕೊಳ್ಳುತ್ತವೆ.

### 4.3 ಕೃಷಿ-ತಂತ್ರಜ್ಞಾನ ಮತ್ತು ಆಹಾರ ಸಂಸ್ಕರಣಾ ಸಹಕಾರಿಗಳು (Agri-Tech and Food Processing Cooperatives)

ಕೃಷಿ ಸಹಕಾರಿಗಳು ಉತ್ಪಾದಕತೆ ಮತ್ತು ಜಾಗತಿಕ ಮಾರುಕಟ್ಟೆ ವ್ಯಾಪ್ತಿಯನ್ನು ಹೆಚ್ಚಿಸಲು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿವೆ.

ಅಗ್ರಿ-ಟೆಕ್ ಸಹಕಾರಿಗಳು Internet of Things (IoT), ಕೃತಕ ಬುದ್ಧಿಮತ್ತೆ ಆಧಾರಿತ, ಹವಾಮಾನ ಮುಂಚಿತ ನಿರ್ಧಾರದಂತೆ ಮತ್ತು ಡಿಜಿಟಲ್ ಮಾರ್ಕೆಟಿಂಗ್ ಪ್ಲಾಟ್ಫಾರ್ಮ್‌ಗಳನ್ನು ಬಳಸುತ್ತವೆ.

ಅದೇ ರೀತಿ, ಭಾರತದಲ್ಲಿ ಪ್ರಧಾನಮಂತ್ರಿ ಕಿಸಾನ್ ಸಂಪದಾ ಯೋಜನೆ (PM Kisan SAMPADA Yojana) ಮತ್ತು PMFME ಮುಂತಾದ ಯೋಜನೆಗಳ ಅಡಿಯಲ್ಲಿ ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಒಳಗಾಗುವುದರಿಂದ ರೈತರು ಹೆಚ್ಚು ಮೌಲ್ಯ ಹಂಚಿಕೆಯನ್ನು ಪಡೆಯುತ್ತಾರೆ ಹಾಗೂ ಜಾಗತಿಕ ಸ್ಪರ್ಧಾತ್ಮಕತೆಯನ್ನು ಸಾಧಿಸುತ್ತಾರೆ.

### 4.4 ಸಾಮಾಜಿಕ ಮತ್ತು ಸೇವಾ ಸಹಕಾರಿಗಳು

ಈ ಸಹಕಾರಿ ಸಂಸ್ಥೆಗಳು ಆರೋಗ್ಯ, ಶಿಕ್ಷಣ, ವಸತಿ ಮತ್ತು ಕಲ್ಯಾಣ ಸೇವೆಗಳ ಮೇಲೆ ಕೇಂದ್ರೀಕರಿಸುತ್ತವೆ. ಇಲ್ಲಿ ನವನಾವೀನ್ಯತೆ ಸಂಯೋಜಿತ ಹಣಕಾಸು ಮಾದರಿಗಳು ಮತ್ತು ಡಿಜಿಟಲ್ ಸೇವಾ ವಿತರಣೆಯಲ್ಲಿದೆ. ಉದಾಹರಣೆಗೆ, ಇಟಲಿ ಮತ್ತು ಜಪಾನಿನ ಸಾಮಾಜಿಕ ಸಹಕಾರಿಗಳು ಸಮುದಾಯಾಧಾರಿತ ಸಂಸ್ಥೆಗಳು ಸ್ಥಿರವಾಗಿ ಹೇಗೆ ಕಾರ್ಯನಿರ್ವಹಿಸಬಹುದು ಎಂಬುದಕ್ಕೆ ಜಾಗತಿಕ ಮಾದರಿಗಳಾಗಿವೆ.

### 4.5 ಜಾಗತಿಕ ಸಹಕಾರಿ ಒಕ್ಕೂಟಗಳು ಮತ್ತು ರಫ್ತು ಸಂಘಟನೆಗಳು

ಸಹಕಾರಿಗಳು ದೊಡ್ಡ ಮಾರುಕಟ್ಟೆಗಳಿಗೆ ಪ್ರವೇಶ ಪಡೆಯಲು ರಫ್ತುಕೇಂದ್ರೀಕೃತ ಸಂಘಟನೆಗಳು ಮತ್ತು ಅಂತರರಾಷ್ಟ್ರೀಯ ಒಕ್ಕೂಟಗಳನ್ನು ನಿರ್ಮಿಸುತ್ತಿವೆ. ಸಾಮೂಹಿಕ ಬ್ರ್ಯಾಂಡಿಂಗ್, ಪ್ರಮಾಣೀಕರಣ ಮತ್ತು ಲಾಜಿಸ್ಟಿಕ್ಸ್ ಹಂಚಿಕೆಗಳ ಮೂಲಕ ಅವು ಆರ್ಥಿಕ ಪ್ರಮಾಣದ ಪ್ರಯೋಜನಗಳನ್ನು ಸಾಧಿಸುತ್ತವೆ. ಉದಾಹರಣೆಗೆ, ಲ್ಯಾಟಿನ್ ಅಮೆರಿಕಾದ ಕಾಫಿ ಸಹಕಾರಿಗಳು, ಫೇರ್ಟ್ರೇಡ್ ಮತ್ತು ಆರ್ಗ್ಯಾನಿಕ್ ಪ್ರಮಾಣ ಪತ್ರಗಳನ್ನು ಪಡೆದು, ಟ್ರೇಸಬಿಲಿಟಿ(ಪಾರದರ್ಶಕತೆ, ಗುಣಮಟ್ಟದ ಭರವಸೆ ಮತ್ತು ಜವಾಬ್ದಾರಿತ್ವವನ್ನು ಖಚಿತಪಡಿಸುವ ತಂತ್ರಜ್ಞಾನ) ತಂತ್ರಜ್ಞಾನವನ್ನು ಬಳಸಿಕೊಂಡು ಗ್ರಾಹಕರ ವಿಶ್ವಾಸವನ್ನು ಗಳಿಸಿ ಜಾಗತಿಕ ಮಾರುಕಟ್ಟೆಗಳಿಗೆ ಪ್ರವೇಶ ಪಡೆದಿವೆ.

### 5. ಯಶಸ್ವಿ ಸಹಕಾರಿ ನವನಾವೀನ್ಯತೆಯ ಸಂಬಂಧಿಸಿದ ಅಧ್ಯಯನಗಳು

#### ಅಮೂಲ್ ಭಾರತದ ಹಾಲಿನ ಕ್ರಾಂತಿ

- ಗುಜರಾತ್ ಕೋ-ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ (GCMMF), ಜನಪ್ರಿಯವಾಗಿ ಅಮೂಲ್ ಎಂದು ಪರಿಚಿತವಾಗಿದೆ, ಇದು ಸಹಕಾರಿ ನವನಾವೀನ್ಯತೆಯ ವಿಶ್ವಮಟ್ಟದ ಮಾದರಿಯಾಗಿದೆ. ಅಮೂಲ್ **"ಹಾಲಿನ ಕ್ರಾಂತಿ"** (White Revolution) ಯನ್ನು ಭಾರತದಲ್ಲಿ ತಂದಿತು ಅಡಿಪಾಯ ಹಂತದ ಹಾಲು ಸಂಗ್ರಹ ವ್ಯವಸ್ಥೆಯನ್ನು ವೃತ್ತಿಪರ ಮಾರುಕಟ್ಟೆ ಮತ್ತು ಬ್ರ್ಯಾಂಡಿಂಗ್‌ನೊಂದಿಗೆ ಸಂಯೋಜಿಸುವ ಮೂಲಕವಾಗಿದೆ. ಇಂದಿನ ದಿನಗಳಲ್ಲಿ ಅಮೂಲ್ ತನ್ನ ಹಾಲು ಉತ್ಪನ್ನಗಳನ್ನು ಜಗತ್ತಿನಾದ್ಯಂತ ರಫ್ತು ಮಾಡುತ್ತದೆ, ಇದರಿಂದ ಸಹಕಾರಿ ಸಂಸ್ಥೆಗಳು ಸದಸ್ಯಕೇಂದ್ರಿತ ಮೌಲ್ಯಗಳನ್ನು ಕಾಪಾಡಿಕೊಂಡು ಸಹ ಜಾಗತಿಕ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಬಹುದು ಎಂಬುದನ್ನು ಸಾಬೀತುಪಡಿಸಿದೆ.

**ಮೊಂಡ್ರಾಗನ್ ಕಾರ್ಪೊರೇಷನ್ ಸ್ಪೇನ್**

- ಮೊಂಡ್ರಾಗನ್ ಕೋ-ಆಪರೇಟಿವ್ ಕಾರ್ಪೊರೇಷನ್ (MCC) ಸಹಕಾರಿ ಜಾಗತೀಕರಣದ ಅತ್ಯಂತ ಅಭಿವೃದ್ಧಿಪರ ಉದಾಹರಣೆಗಳಲ್ಲಿ ಒಂದಾಗಿದೆ. ಇದು 1956ರಲ್ಲಿ ಸ್ಥಾಪನೆಯಾಗಿ, ಇಂದಿಗೆ ಉತ್ಪಾದನೆ, ಚಿಲ್ಲರೆ ವ್ಯಾಪಾರ, ಹಣಕಾಸು ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ, 80,000ಕ್ಕೂ ಹೆಚ್ಚು ಕಾರ್ಮಿಕ-ಸದಸ್ಯರ ಸಹಭಾಗಿತ್ವದೊಂದಿಗೆ. ಮೊಂಡ್ರಾಗನ್ನ ಯಶಸ್ಸಿನ ರಹಸ್ಯ ನವೀನ ಆಡಳಿತ ವ್ಯವಸ್ಥೆ, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಪುನರ್ ಹೂಡಿಕೆ, ಹಾಗೂ ಜಾಗತಿಕ ತಂತ್ರಜ್ಞಾನದ ಒಕ್ಕೂಟಗಳಲ್ಲಿ ಪಾಲ್ಗೊಳ್ಳುವಿಕೆಯಲ್ಲಿದೆ.

**ಫೇರ್ಟ್ರೇಡ್ ಸಹಕಾರಿಗಳು ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ**

- ಸಣ್ಣ ರೈತ ಸಹಕಾರಿಗಳು ಫೇರ್ಟ್ರೇಡ್ ಪ್ರಮಾಣಪತ್ರದ ಮೂಲಕ ಕಾಫಿ, ಕೋಕೋ ಮತ್ತು ಬಾಳೆಹಣ್ಣುಗಳಂತಹ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಪ್ರವೇಶ ಪಡೆದಿವೆ. ಈ ಸಹಕಾರಿಗಳು ಮೊಬೈಲ್ ಟ್ರೇಸಬಿಲಿಟಿ ಆಪ್‌ಗಳು, ಗುಣಮಟ್ಟ ನಿಯಂತ್ರಣ ಮತ್ತು ಸಮುದಾಯ ಅಭಿವೃದ್ಧಿ ಯೋಜನೆಗಳ ಮೂಲಕ ನವನಾವೀನ್ಯತೆ ಮಾಡುತ್ತಿವೆ. ಇದರಿಂದ ಅವು ನೈತಿಕ ವ್ಯಾಪಾರ ವಿಧಾನಗಳೊಂದಿಗೆ ಲಾಭದಾಯಕತೆಯನ್ನು ಸಮನ್ವಯಗೊಳಿಸುತ್ತಿವೆ.

**6. ಸಹಕಾರಿ ನವನಾವೀನ್ಯತೆಯ ಎದುರಿಸುತ್ತಿರುವ ಸವಾಲುಗಳು**

ಪ್ರೇರಣಾದಾಯಕ ಯಶೋಗಾಥೆಗಳಿದ್ದರೂ, ಅನೇಕ ಸಹಕಾರಿ ಸಂಸ್ಥೆಗಳು ಇನ್ನೂ ಜಾಗತಿಕವಾಗಿ ಸ್ಪರ್ಧಾತ್ಮಕವಾಗಲು ಹೋರಾಟ ನಡೆಸುತ್ತಿವೆ. ಅವುಗಳಲ್ಲಿ ಪ್ರಮುಖ ಸವಾಲುಗಳು ಇಂತಿವೆ:

1. **ಸೀಮಿತ ಹಣಕಾಸು ಸಂಪನ್ಮೂಲಗಳು:** ಜಾಗತಿಕ ಹಣಕಾಸು ಹಾಗೂ ವೆಂಚರ್ ಕ್ಯಾಪಿಟಲ್(ಉದ್ಯಮ ಹೂಡಿಕೆ)ಗೆ ಪ್ರಾಪ್ತಿ ಸಹಕಾರಿ ಸಂಸ್ಥೆಗಳಿಗೆ ಇನ್ನೂ ಕಠಿಣವಾಗಿದೆ.

2. **ತಾಂತ್ರಿಕ ಅಂತರಗಳು:** ಮೂಲಸೌಕರ್ಯದ ಕೊರತೆ ಮತ್ತು ಡಿಜಿಟಲ್ ಕೌಶಲ್ಯಗಳ ಅಭಾವ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ನವನಾವೀನ್ಯತೆಯನ್ನು ಅಡ್ಡಿಪಡಿಸುತ್ತವೆ.

3. **ಆಡಳಿತಾತ್ಮಕ ಸಮಸ್ಯೆಗಳು:** ಸಮರ್ಪಕ ನಿರ್ವಹಣಾ ವ್ಯವಸ್ಥೆಗಳ ಕೊರತೆ ಹಾಗೂ ಯುವಕರ ಕಡಿಮೆ ಭಾಗವಹಿಸುವಿಕೆ, ಸಹಕಾರಿಗಳ ಆಧುನೀಕರಣ ಪ್ರಯತ್ನಗಳನ್ನು ನಿರ್ಬಂಧಿಸುತ್ತವೆ.

4. **ನೀತಿ ಮತ್ತು ನಿಯಂತ್ರಣ ನಿರ್ಬಂಧಗಳು:** ಅನೇಕ ದೇಶಗಳಲ್ಲಿ ಸಹಕಾರಿ ಉದ್ಯಮಶೀಲತೆಯನ್ನು ಬೆಂಬಲಿಸುವ ಕಾನೂನು ಚೌಕಟ್ಟಿನ ಕೊರತೆ ಇದೆ.

5. **ಮಾರುಕಟ್ಟೆ ಪ್ರವೇಶ ಮತ್ತು ಬ್ರ್ಯಾಂಡಿಂಗ್:** ಸಣ್ಣ ಸಹಕಾರಿಗಳು ಅಂತರರಾಷ್ಟ್ರೀಯ ಗುಣಮಟ್ಟದ ಮಾನದಂಡಗಳನ್ನು ಪೂರೈಸುವುದಲ್ಲದೆ ತಮ್ಮ ಬ್ರ್ಯಾಂಡ್ ದೃಶ್ಯತೆಯನ್ನು ಹೆಚ್ಚಿಸುವುದಲ್ಲಿಯೂ ಸವಾಲುಗಳನ್ನು ಎದುರಿಸುತ್ತಿವೆ.

ಈ ಸವಾಲುಗಳು ಸಂಸ್ಥಾತ್ಮಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಗುರಿಪಡಿಸಿದ ಹಸ್ತಕ್ಷೇಪಗಳ ಅಗತ್ಯವನ್ನು ಸ್ಪಷ್ಟಪಡಿಸುತ್ತವೆ.

**7. ಜಾಗತಿಕ ಸ್ಪರ್ಧಾತ್ಮಕತೆಯನ್ನು ವೃದ್ಧಿಸಲು ತಂತ್ರಗಳು**

ಮೇಲಿನ ಅಡೆತಡೆಗಳನ್ನು ನಿವಾರಿಸಲು ಮತ್ತು ನವನಾವೀನ್ಯತೆಯನ್ನು ಉತ್ತೇಜಿಸಲು, ಸಹಕಾರಿ ಸಂಸ್ಥೆಗಳು ಕೆಳಗಿನ ತಂತ್ರಗಳನ್ನು ಅಳವಡಿಸಿಕೊಳ್ಳಬಹುದು:

**7.1 ಡಿಜಿಟಲ್ ಪರಿವರ್ತನೆ (Digital Transformation)**

ಮಾರುಕಟ್ಟೆ, ಲೆಕ್ಕಪತ್ರ, ಲಾಜಿಸ್ಟಿಕ್ಸ್ ಮತ್ತು ಸದಸ್ಯರ ಸಂವಹನಕ್ಕಾಗಿ ಡಿಜಿಟಲ್ ವೇದಿಕೆಗಳಲ್ಲಿ ಹೂಡಿಕೆ ಮಾಡುವುದು ಅಗತ್ಯ. ಕ್ಲೌಡ್ ಆಧಾರಿತ ಪರಿಹಾರಗಳು ಮತ್ತು ಕೃತಕ ಬುದ್ಧಿಮತ್ತೆ (AI) ಸಾಧನಗಳು ಕಾರ್ಯಾಚರಣೆಗಳನ್ನು ಸುಧಾರಿಸುತ್ತವೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುತ್ತವೆ.

**7.2 ಸಂಶೋಧನೆ ಮತ್ತು ಅಭಿವೃದ್ಧಿ (R&D)**

ಸಹಕಾರಿ ಮಹಾಮಂಡಲಗಳ ಒಳಗೆ ನವೀನತಾ ಕೇಂದ್ರಗಳನ್ನು ಸ್ಥಾಪಿಸುವುದು ಹೊಸ ಉತ್ಪನ್ನಗಳು, ವ್ಯವಹಾರ ಮಾದರಿಗಳು ಮತ್ತು ಮಾರುಕಟ್ಟೆ ತಂತ್ರಗಳನ್ನು ಬೆಳೆಸಲು ಸಹಾಯಕವಾಗುತ್ತದೆ. ವಿಶ್ವವಿದ್ಯಾಲಯಗಳು ಮತ್ತು ತಂತ್ರಜ್ಞಾನ ಸಂಸ್ಥೆಗಳೊಂದಿಗೆ ಸಹಯೋಗ ನವನಾವೀನ್ಯತೆಯ ವೇಗವನ್ನು ಹೆಚ್ಚಿಸುತ್ತದೆ.

**7.3 ಸಾಮರ್ಥ್ಯ ನಿರ್ಮಾಣ ಮತ್ತು ಶಿಕ್ಷಣ (Capacity Building and Education)**

ಸದಸ್ಯರಿಗೆ ಉದ್ಯಮಶೀಲತೆ, ನಿರ್ವಹಣೆ ಮತ್ತು ಡಿಜಿಟಲ್ ಸಾಕ್ಷರತೆ ಕುರಿತ ತರಬೇತಿ ನೀಡುವುದು ಸಹಕಾರಿಗಳ ಆಡಳಿತ ಮತ್ತು ಸ್ಪರ್ಧಾತ್ಮಕತೆಯನ್ನು ಬಲಪಡಿಸುತ್ತದೆ. ಯುವಕರನ್ನು ತೊಡಗಿಸಿಕೊಳ್ಳುವ ಕಾರ್ಯಕ್ರಮಗಳು ಹೊಸ ಶಕ್ತಿ ಮತ್ತು ಆಲೋಚನೆಗಳನ್ನು ಸಹಕಾರಿ ಚಟುವಟಿಕೆಗಳಲ್ಲಿ ತರಲು ಸಹಕಾರಿ ಆಗುತ್ತವೆ.

**7.4 ತಂತ್ರಾತ್ಮಕ ಸಹಭಾಗಿತ್ವಗಳು (Strategic Partnerships)**

ಸಾರ್ವಜನಿಕ-ಖಾಸಗಿ ಸಹಭಾಗಿತ್ವಗಳು (PPP) ಹಾಗೂ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ (ICA) ಮುಂತಾದ ಜಾಗತಿಕ ಸಹಕಾರಿ ಚಳವಳಿಗಳ ಸಹಯೋಗದ ಮೂಲಕ ಸಹಕಾರಿಗಳು ಜ್ಞಾನ ಹಂಚಿಕೆ, ಹಣಕಾಸಿನ ಬೆಂಬಲ ಮತ್ತು ಜಾಗತಿಕ ಸಂಪರ್ಕವನ್ನು ವಿಸ್ತರಿಸಬಹುದು.

**7.5 ಮೌಲ್ಯ ಸರಪಳಿ ಏಕೀಕರಣ (Value Chain Integration)**

ಉತ್ಪಾದನೆ, ಸಂಸ್ಕರಣೆ ಹಾಗೂ ರಫ್ತು ಸೇರಿದಂತೆ ಸಂಪೂರ್ಣ ಮೌಲ್ಯಯುತ ಸರಪಳಿಯಲ್ಲಿ ಸಹಕಾರಿಗಳನ್ನು ಒಗ್ಗೂಡಿಸುವುದು, ಹೆಚ್ಚಿನ ಲಾಭದಾಯಕತೆ ಹಾಗೂ ಮಾರುಕಟ್ಟೆ ಅಸ್ಥಿರತೆಯ ವಿರುದ್ಧ ಸ್ಥಿರತೆ ನೀಡುತ್ತದೆ.

**7.6 ನೀತಿ ಬೆಂಬಲ (Policy Support)**

ಸರ್ಕಾರಗಳು ಮತ್ತು ಉನ್ನತ ಸಂಸ್ಥೆಗಳು ಸಹಕಾರಿ ಸ್ನೇಹಿ ನೀತಿಗಳನ್ನು ರೂಪಿಸಬೇಕು, ಇದರಡಿ ಸಾಲ ಪ್ರಾಪ್ತಿ, ನವನಾವೀನ್ಯ ಅನುದಾನಗಳು ಮತ್ತು ತೆರಿಗೆ ಸೌಲಭ್ಯಗಳು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ

ಅಥವಾ ಜಾಗತಿಕವಾಗಿ ವಿಸ್ತರಿಸುವ ಸಹಕಾರಿಗಳಿಗೆ ಲಭ್ಯವಾಗಬೇಕು.

### 8. ಸರ್ಕಾರ ಮತ್ತು ಸಂಸ್ಥೆಗಳ ಪಾತ್ರ (The Role of Government and Institutions)

ಭಾರತ ಸರ್ಕಾರವು ಸಹಕಾರ ಸಚಿವಾಲಯದ ಮೂಲಕ ಸಹಕಾರಿ ಕ್ಷೇತ್ರವನ್ನು ಆಧುನೀಕರಿಸಲು ಮತ್ತು ಬಲಪಡಿಸಲು ಹಲವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಸಹಕಾರಿಗಳಲ್ಲಿ ನವನಾವಿನ್ಯತೆ ತರುವ ಉದ್ದೇಶಕ್ಕಾಗಿ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ (National Cooperative Database) ರಚನೆ, ಸಹಕಾರಿ ರಫ್ತು ಮನೆಯನ್ನು (Cooperative Export House) ಸ್ಥಾಪನೆ ಮತ್ತು ಬಹುರಾಜ್ಯ ಸಹಕಾರಿ ಸಂಸ್ಥೆಗಳ (ತಿದ್ದುಪಡಿ) ಕಾಯಿದೆ (Multistate Cooperative Societies Amendment Act) ಜಾರಿಗೆ ತರುವಿಕೆ ಇವೆಲ್ಲವೂ ಸಹಕಾರಿ ಚಳುವಳಿಯನ್ನು ಬಲಪಡಿಸುವ ಪ್ರಮುಖ ಹೆಜ್ಜೆಗಳಾಗಿವೆ. ಈ ಕ್ರಮಗಳು ಸಹಕಾರಿ ಸಂಸ್ಥೆಗಳ ಪಾರದರ್ಶಕತೆ, ಕಾರ್ಯಪಟುತ್ವ, ಮತ್ತು ಜಾಗತಿಕ ಸ್ಪರ್ಧಾತ್ಮಕತೆಯನ್ನು ವೃದ್ಧಿಸಲು ಮಾರ್ಗದರ್ಶಕವಾಗಿವೆ.

### ಯೋಜನೆಗಳು ಮತ್ತು ಜಾಗತಿಕ ಮಾನ್ಯತೆ (Schemes and Global Recognition)

ಪ್ರಧಾನಮಂತ್ರಿ ಕಿಸಾನ್ ಸಂಪದಾ ಯೋಜನೆ (PM Kisan SAMPADA Yojana), ಪ್ರಧಾನಮಂತ್ರಿ ಫಾರ್ಮಲೈಸೇಷನ್ ಆಫ್ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್ಪ್ರೈಸಸ್ (PMFME) ಮತ್ತು ಡಿಜಿಟಲ್ ಇಂಡಿಯಾ ಮಿಷನ್ (Digital India Mission) ಈ ಯೋಜನೆಗಳು ಸಹಕಾರಿ ಕ್ಷೇತ್ರದಲ್ಲಿ ನವನಾವೀನ್ಯತೆ, ಮೌಲ್ಯ ಸರಪಳಿ ಏಕೀಕರಣ ಮತ್ತು ಆಧುನೀಕರಣಕ್ಕೆ ಮಹತ್ವದ ಬೆಂಬಲವನ್ನು ಒದಗಿಸುತ್ತಿವೆ.

ಜಾಗತಿಕ ಮಟ್ಟದಲ್ಲಿ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (International Labour Organization - ILO) ಮತ್ತು ಆಹಾರ ಮತ್ತು ಕೃಷಿ ಸಂಸ್ಥೆ (Food and Agriculture Organization - FAO) ಸಹಕಾರಿಗಳನ್ನು ಸಂಯುಕ್ತ ರಾಷ್ಟ್ರಗಳ ಸ್ಥಿರ ಅಭಿವೃದ್ಧಿ ಗುರಿಗಳನ್ನು (Sustainable Development Goals - SDGs) ಸಾಧಿಸಲು ಅತ್ಯಂತ ಮುಖ್ಯವಾದ ಸಾಧನಗಳೆಂದು ಪರಿಗಣಿಸುತ್ತವೆ.

ಈ ಸಂಸ್ಥೆಗಳು ಸಹಕಾರಿಗಳ ಪಾತ್ರವನ್ನು ಸಮಾವೇಶಿತ ಬೆಳವಣಿಗೆ (inclusive growth), ಲಿಂಗ ಸಮಾನತೆ (gender equality) ಮತ್ತು ಜವಾಬ್ದಾರಿಯುತ ಬಳಕೆ (responsible consumption) ಕ್ಷೇತ್ರಗಳಲ್ಲಿ ಉತ್ತೇಜಿಸುವಲ್ಲಿ ಪ್ರಮುಖವೆಂದು ಗುರುತಿಸುತ್ತವೆ.

### 9. ಸಹಕಾರಿ ನವನಾವೀನ್ಯತೆಯ ಭವಿಷ್ಯ (The Future of Cooperative Innovation)

ಸಹಕಾರಿಗಳ ಭವಿಷ್ಯವು ತಂತ್ರಜ್ಞಾನ, ಸ್ಥಿರತೆ (sustainability) ಮತ್ತು ಸಮಾವೇಶಿತತೆ (inclusivity) ಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದರಲ್ಲಿದೆ.

ಕೃತಕ ಬುದ್ಧಿಮತ್ತೆ (Artificial Intelligence - AI), ಬ್ಲಾಕ್‌ಚೈನ್ (Blockchain) ಮತ್ತು ವಸ್ತುಗಳ ಇಂಟರ್ನೆಟ್ (Internet of Things - IoT) ತಂತ್ರಜ್ಞಾನಗಳು ಸಹಕಾರಿಗಳಲ್ಲಿ ಮಾಹಿತಿ ಹಾದಿ ಪತ್ತೆಹಚ್ಚುವಿಕೆ (traceability), ಉತ್ಪಾದಕತೆ ಸುಧಾರಣೆ, ಹಾಗೂ ಸದಸ್ಯರ ತೊಡಗಿಸಿಕೊಳ್ಳುವಿಕೆ ಬಲಪಡಿಸುವಲ್ಲಿ ಸಹಾಯಕವಾಗುತ್ತವೆ. ಆದರೆ, ಈ ನವನಾವೀನ್ಯತೆಯ ಪ್ರಯಾಣದಲ್ಲಿ ಸಹಕಾರಿಗಳು ತಮ್ಮ ಮೂಲ ಸ್ವಯಂ ಸಹಾಯ (self-help), ಪ್ರಜಾಪ್ರಭುತ್ವ (democracy) ಮತ್ತು ಸಮಾನತೆ (equity) ಎಂಬ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು ಇದರಿಂದ ನವನಾವೀನ್ಯತೆ ಆರ್ಥಿಕ ಹಾಗೂ ಸಾಮಾಜಿಕ ಉದ್ದೇಶಗಳನ್ನು ಸಮತೋಲನಗೊಳಿಸಬಹುದು.

ಮುಂದಿನ ದಶಕಗಳಲ್ಲಿ ಅತ್ಯಂತ ಯಶಸ್ವಿಯಾಗುವ ಸಹಕಾರಿಗಳು ಇಂತಹವುಗಳಾಗಿರುತ್ತವೆ:

- ಸ್ಮಾರ್ಟ್, ಡಿಜಿಟಲ್ ಆಧಾರಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವವುಗಳು.
- ಸ್ಥಿರತೆ ಮತ್ತು ವೃತ್ತಾಕಾರ ಆರ್ಥಿಕತೆಯ (circular economy) ತತ್ವಗಳಿಗೆ ಆದ್ಯತೆ ನೀಡುವಂತವುಗಳು.
- ಸಹಕಾರಿ ಮೌಲ್ಯಗಳಲ್ಲಿ ಬೇರೂರಿದ ಜಾಗತಿಕ ಜಾಲಗಳು ಮತ್ತು ಬ್ರ್ಯಾಂಡ್‌ಗಳನ್ನು ನಿರ್ಮಿಸುವಂತವುಗಳು.
- ಯುವಕರು ಮತ್ತು ಮಹಿಳೆಯರನ್ನು ನವನಾವೀನ್ಯತೆಯ ನಾಯಕತ್ವಕ್ಕೆ ಸಬಲೀಕರಿಸುವಂತವುಗಳು

### 10. ನಿರ್ಣಯ (Conclusion)

ನವನಾವೀನ್ಯತೆ ಈಗ ಆಯ್ಕೆಯ ವಿಷಯವಲ್ಲ ಅದು ಜಾಗತಿಕ ಸ್ಪರ್ಧಾತ್ಮಕತೆಯನ್ನು ಸಾಧಿಸಲು ಬಯಸುವ ಸಹಕಾರಿಗಳಿಗೆ ಅಗತ್ಯವಾಗಿರುವ ಶಕ್ತಿ.

ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಉತ್ಪನ್ನ ವೈವಿಧ್ಯತೆಯನ್ನು ಬೆಳೆಸಿ, ಮತ್ತು ಸ್ಥಿರ ಅಭಿವೃದ್ಧಿ ತತ್ವಗಳನ್ನು ಅಳವಡಿಸಿಕೊಂಡು, ಸಹಕಾರಿಗಳು ತಮ್ಮ ಪ್ರಭಾವವನ್ನು ಸ್ಥಳೀಯ ಸಮುದಾಯಗಳಿಂದ ಜಾಗತಿಕ ಮಾರುಕಟ್ಟೆಗಳವರೆಗೆ ವಿಸ್ತರಿಸಬಹುದು.

ಸಹಕಾರಿ ಮಾದರಿಯ ಶಕ್ತಿ ಅದರ ಆರ್ಥಿಕ ಕಾರ್ಯಪಟುತ್ವ ಮತ್ತು ಸಾಮಾಜಿಕ ಸಮಾನತೆ ನಡುವಿನ ಸಮತೋಲನವನ್ನು ಕಾಪಾಡಿಕೊಳ್ಳುವ ಸಾಮರ್ಥ್ಯದಲ್ಲಿ ಇದೆ.

ಡಿಜಿಟಲ್, ಸಂಘಟನಾ ಅಥವಾ ಸಾಮಾಜಿಕ ನವನಾವೀನ್ಯತೆಗಳ ಮೂಲಕ ಸಹಕಾರಿಗಳು ಕಂಪನಿಗಳೊಂದಿಗೆ ಸ್ಪರ್ಧಿಸಬಹುದಾಗಿದೆ ಮಾತ್ರವಲ್ಲ, ಜವಾಬ್ದಾರಿಯುತ ಮತ್ತು ಸಮಾವೇಶಿತ ಜಾಗತೀಕರಣದ ಹೊಸ ವ್ಯಾಖ್ಯಾನವನ್ನೂ ನೀಡಬಹುದು.

ಇಂದಿನ ಸಂಪರ್ಕಿತ, ಡಿಜಿಟಲ್ ಮತ್ತು ಸ್ಥಿರತಾಪ್ರೇರಿತ ವಿಶ್ವದತ್ತ ಸಾಗುತ್ತಿರುವಾಗ, ನವನಾವೀನ್ಯ ಸಹಕಾರಿ ವ್ಯವಹಾರ ಮಾದರಿಗಳು ಲಾಭ ಮತ್ತು ಉದ್ದೇಶಗಳ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಲಿವೆ ಇದರಿಂದ ಕೆಲವರಿಗೆ ಮಾತ್ರವಲ್ಲ ಆರ್ಥಿಕ ಪ್ರಗತಿಯ ಫಲ ಎಲ್ಲರಿಗೂ ತಲುಪುತ್ತದೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

## 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು

### ಆಡಳಿತ ಮಂಡಳಿ ಸದಸ್ಯರು



ಬಿ. ನಂಜನಗೌಡ – ಅಧ್ಯಕ್ಷರು
ಎ. ಆರ್. ಪ್ರಸನ್ನಕುಮಾರ್ – ಉಪಾಧ್ಯಕ್ಷರು
ಬಿ. ಎಚ್. ಕೃಷ್ಣಾರೆಡ್ಡಿ – ನಿರ್ದೇಶಕರು
ಗುರುನಾಥ ಜ್ಯಾಂತಿಕರ – ನಿರ್ದೇಶಕರು
ಜಗದೀಶ ಕವಟಗಿಮಠ – ನಿರ್ದೇಶಕರು
ಗುರನಗೌಡ ಪಾಟೀಲ – ನಿರ್ದೇಶಕರು
ಆರ್. ತಿಮ್ಮಯ್ಯಶೆಟ್ಟಿ – ನಿರ್ದೇಶಕರು
ಬಿ. ಎಸ್. ಗುಂಡುರಾವ್ – ನಿರ್ದೇಶಕರು
ಮಂಜುನಾಥ ಎಸ್. ಕೆ. – ನಿರ್ದೇಶಕರು
ಜಿ. ಶ್ರೀಧರ – ನಿರ್ದೇಶಕರು
ನಾಗರಾಜ್ ಆರ್. ದೇಶಪಾಂಡೆ – ನಿರ್ದೇಶಕರು
ಕೆ. ಶಿವಲಿಂಗಪ್ಪ – ನಿರ್ದೇಶಕರು
ಭಾರತಿ ಜಿ. ಭಟ್ – ನಿರ್ದೇಶಕರು
ಶೈಲಜಾ ತಪಲಿ – ನಿರ್ದೇಶಕರು
ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ – ನಿರ್ದೇಶಕರು
ಎಂ. ಆರ್ ಪ್ರಭುದೇವ್ – ನಿರ್ದೇಶಕರು
ಹೆಚ್. ಜೆ ಹನುಮಂತಶೆಟ್ಟಿ – ನಿರ್ದೇಶಕರು
ರಘುರಾಮ ರೆಡ್ಡಿ – ನಿರ್ದೇಶಕರು
ವಿಜಯ್ ಸಿ. ಪಿ. – ನಿರ್ದೇಶಕರು
ಮೋಹನದಾಸ ಜಿ. ನಾಯಕ್ – ನಿರ್ದೇಶಕರು
ರಾಜುಗೌಡ ಬಿ. ಪಾಟೀಲ – ನಿರ್ದೇಶಕರು
ಸಂಜೀವ ಮಹಾಜನ – ವೃತ್ತಿಪರ ನಿರ್ದೇಶಕರು
ಮಹದೇವಸ್ವಾಮಿ – ವೃತ್ತಿಪರ ನಿರ್ದೇಶಕರು
ಶರಣಗೌಡ ಜಿ. ಪಾಟೀಲ – ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 18th Cross, Margosa Road, Malleshwaram, Bengaluru-560 003